# ದೆಹಲಿ ಕರ್ನಾಟಕ ಸಂಘದ
# ಅಭಿಮತ

ಅಮೃತ ಮಹೋತ್ಸವ ವರ್ಷ 1948-2022

ಅಕ್ಟೋಬರ್ 2023
ಬೆಲೆ ರೂ.1




**ದೆಹಲಿ ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿಗಳ ಜೊತೆ ಮುಖ್ಯ ಅತಿಥಿ ಶ್ರೀ ಬಿ.ಎಲ್. ಸುರೇಶ್ ಅವರೊಂದಿಗೆ ಸಂಘದ ಅಧ್ಯಕ್ಷರು ಹಾಗು ಪದಾಧಿಕಾರಿಗಳು**





ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು



ಸಂಘದಲ್ಲಿ ನಡೆದ ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಹಿರಿಯ ನಟರಾದ ಶ್ರೀ ದೊಡ್ಡಣ್ಣ , ಶ್ರೀ ಮೂಗು ಸುರೇಶ್, ಶ್ರೀ ಮಂಡ್ಯ ರಮೇಶ್, ಸಾಹಿತಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಹಾಗೂ ಚಿತ್ರ ನಿರ್ದೇಶಕ ಡಾ. ಟಿ.ಎಸ್. ನಾಗಾಭರಣ ಅವರೊಂದಿಗಿನ ದೃಶ್ಯ

# ಕರುನಾಡಿನ ಮಣ್ಣಿನ ಮಗ ಶ್ರೀ ಹೆಚ್. ಡಿ. ದೇವೇಗೌಡ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ



ಕನ್ನಡ ನಾಡು ಕಂಡ ಅಪ್ರತಿಮ ಹಿರಿಯ ಮುತ್ಸದ್ದಿ, ಪ್ರಬುದ್ಧ ರಾಜಕಾರಣಿ, ರಾಜ್ಯದ ಮಾಜಿ ಮುಖ್ಯಮಂತ್ರಿ ಹಾಗೂ ದೇಶದ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡರಿಗೆ ಬೆಂಗಳೂರು ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ.

ದೆಹಲಿ ಕರ್ನಾಟಕ ಸಂಘದ ಸುವರ್ಣ ಜಯಂತಿ ಆಚರಣೆ ಸಂದರ್ಭದಲ್ಲಿ ಹಾಗೂ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಹೆಚ್. ಡಿ. ದೇವೇಗೌಡರು ಭಾಗವಹಿಸಿ ಆ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿಕೊಟ್ಟಿರುವುದು ಸ್ಮರಣಾರ್ಹ.

ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡರು ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಆಗಮಿಸಲು ಮಾನ್ಯ ಪ್ರಧಾನಿಗಳನ್ನು ಖುದ್ದಾಗಿ ಭೇಟಿ ಮಾಡಿ ಮನವಿ ಪತ್ರದೊಂದಿಗೆ ಆಹ್ವಾನಿಸಿದ್ದನ್ನು ಹಾಗೂ ಸಂಘಕ್ಕೆ ಇನ್ನೊಂದು ಹೊಸ ಜಾಗವನ್ನು ಮಂಜೂರು ಮಾಡಲು ಕೇಂದ್ರ ನಗರಾಭಿವೃದ್ಧಿ ಸಚಿವರಾದ ಶ್ರೀ ಹರ್‌ದೀಪ್ ಸಿಂಗ್ ಪುರಿ ಅವರಿಗೆ ಇತ್ತೀಚಿಗೆ ಪತ್ರ ಬರೆದಿರುವುದನ್ನು ಸ್ಮರಿಸಬಹುದಾಗಿದೆ.

ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಸದಾ ಭಾಗಿಯಾಗುತ್ತಾ, ಸಂಘದ ಎಲ್ಲಾ ಕಾರ್ಯ ಯೋಜನೆಗಳಿಗೆ ಬೆನ್ನೆಲುಬಾಗಿ ನಿಲ್ಲುತ್ತಿರುವ ಕರ್ನಾಟಕದ ಕಣ್ಮಣಿ ಡಾ. ಹೆಚ್.ಡಿ. ದೇವೇಗೌಡ ಅವರಿಗೆ ದೆಹಲಿ ಕರ್ನಾಟಕ ಸಂಘವು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

**ಅಭಿಮತ ಓದುಗರ ಪರವಾಗಿ ಅವರಿಗೆ ಹಾರ್ದಿಕ ಶುಭಾಶಯಗಳು ಮತ್ತು ಅಭಿನಂದನೆಗಳು.**

# ದೆಹಲಿ ಕರ್ನಾಟಕ ಸಂಘದಲ್ಲಿ ಭಕ್ತಿ, ಶ್ರದ್ಧೆ ಮತ್ತು ಸಂಭ್ರಮದಿಂದ ಗಣೇಶ ಸಾಂಸ್ಕೃತಿಕ ಉತ್ಸವ ಆಚರಣೆ

**ಸಮಸ್ತ ದೆಹಲಿ ಕನ್ನಡಿಗರಿಗೆ ಗೌರಿ ಮತ್ತು ಗಣೇಶ ಹಬ್ಬಗಳ ಹಾರ್ದಿಕ ಶುಭಾಶಯಗಳು.**

ಗಣೇಶ ಸಾಂಸ್ಕೃತಿಕ ಉತ್ಸವದ ಅಂಗವಾಗಿ ಐದು ದಿನಗಳ ಗಣೇಶ ಪೂಜೆಯ ಕಾರ್ಯಕ್ರಮವನ್ನು ಸಂಘದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀ ಗಣೇಶ ಚತುರ್ಥಿಯ ಶುಭ ಸಂದರ್ಭದಲ್ಲಿ ಸೆಪ್ಟೆಂಬರ್ 18ರ ಸೋಮವಾರ ಬೆಳಿಗ್ಗೆ ಗಣೇಶ ಪ್ರತಿಷ್ಠಾಪನಾ ಪೂಜೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ದಂಪತಿಗಳು ನೆರವೇರಿಸಿದರು.

ಈ ಪ್ರತಿಷ್ಠಾಪನಾ ಪೂಜಾ ಸಮಯದಲ್ಲಿ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಮತ್ತು ಕುಟುಂಬ, ಸಂಘದ ಸಿಬ್ಬಂದಿ ವರ್ಗ ಹಾಗೂ ಇನ್ನೂ ಅನೇಕ ಕನ್ನಡಿಗರು ಪಾಲ್ಗೊಂಡಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಸಹ ಪೂಜೆಯನ್ನು ಸಲ್ಲಿಸಿ, ಶ್ರೀಗಣೇಶನ ಕೃಪೆಗೆ ಪಾತ್ರರಾದರು. ಅದೇ ಸಂಜೆ ಶ್ರೀಮತಿ ಸುಮಿತಾ ಮುರಗೋಡ ದಂಪತಿಗಳು ಪೂಜೆಯನ್ನು ನೆರವೇರಿಸಿದರು. ದಿನವಿಡೀ ಅನೇಕ ಕನ್ನಡಿಗರು ಹಾಗೂ ಸ್ಥಳೀಯರು ಬಂದು ಶ್ರೀಗಣೇಶನ ಅನುಗ್ರಹ ಪಡೆದು ಕೃಪೆಗೆ ಪಾತ್ರರಾದರು.

ಎರಡನೇಯ ದಿನ ಮಂಗಳವಾರದ ಬೆಳಗ್ಗಿನ ಪೂಜೆಯನ್ನು ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿ ದಂಪತಿಗಳು ಹಾಗು ರಾತ್ರಿ ಪೂಜೆಯನ್ನು ಸಂಘದ ಸಿಬ್ಬಂದಿ ನೆರವೇರಿಸಿದರು. ಮೂರನೇ ದಿನ ಬುಧವಾರದ ಬೆಳಗ್ಗಿನ ಪೂಜೆಯನ್ನು ಕೋಶಾಧಿಕಾರಿ ಶ್ರೀ ರಾಧಾಕೃಷ್ಣ ದಂಪತಿಗಳು ಮತ್ತು ಸಾಯಂಕಾಲ ಸದಸ್ಯ ಶ್ರೀ ಶಿವಪ್ಪ ದಂಪತಿಗಳು ಹಾಗು ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ನಡೆಸಿಕೊಟ್ಟರು. ನಾಲ್ಕನೇ ದಿನ ಗುರುವಾರದ ಬೆಳಗ್ಗಿನ ಪೂಜೆಯನ್ನು ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ದಂಪತಿಗಳು, ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ನೆರವೇರಿಸಿದರು. ರಾತ್ರಿ ಪೂಜೆಯು ಶ್ರೀ ಸಂತೋಷ ಜೆ ದಂಪತಿಗಳಿಂದ ನಡೆಯಿತು.

ಐದನೇ ಮತ್ತು ಕೊನೆಯ ದಿನ ಶುಕ್ರವಾರ ಗಣೇಶ ಪೂಜೆಯ ಅಂಗವಾಗಿ ಅಧ್ಯಕ್ಷರಿಂದ ಗಣಹೋಮ ಮತ್ತು ವಿಶೇಷ ಪೂಜೆ ನಡೆಯಿತು. ಕಾರ್ಯ ನಿಮಿತ್ತ ದೆಹಲಿಗೆ ಬಂದಿದ್ದ ಹಿರಿಯ ಚಲನಚಿತ್ರ ನಟ ಶ್ರೀ ದೊಡ್ಡಣ್ಣ ಮತ್ತು ಡಾ. ಟಿ.ಎಸ್. ನಾಗಾಭರಣ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಪ್ರತೀ ದಿನ ಬೆಳಿಗ್ಗೆ ಮತ್ತು ಸಂಜೆ ಮಹಾಮಂಗಳರಾತಿ ನಂತರ ಪ್ರಸಾದ ವಿತರಣೆ ಮಾಡಲಾಯಿತು. ನವದೆಹಲಿಯ ಶ್ರೀ ರಾಘವೇಂದ್ರ ಸ್ವಾಮಿ ಮಠದ ಅರ್ಚಕರಾದ ಶ್ರೀ ವಾಮನಚಾರ್ಯ ಅವರು ಈ ಐದು ದಿನಗಳ ಪೂಜೆಯನ್ನು ನೆರವೇರಿಸಿಕೊಟ್ಟರು. ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಈ ಸಂದರ್ಭ ಉಪಸ್ಥಿತರಿದ್ದರು. ಸಾಯಂಕಾಲ ಸಂಘದ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು, ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಹಾಗೂ ಉತ್ತಮ ಸಂಖ್ಯೆಯಲ್ಲಿ ಸೇರಿದ್ದ ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಪೂಜೆ ಮಂಗಳಾರತಿ ನಡೆದು ನಂತರ ಶ್ರೀಗಣೇಶನ ವಿಸರ್ಜನೆ ಮಾಡಲಾಯಿತು.

***ಅಭಿಮತ ವರದಿ***









# ಅಭಿಮತ

ದೆಹಲಿ ಕರ್ನಾಟಕ ಸಂಘದ

ಸಂಪುಟ 34 । ಸಂಚಿಕೆ 1

ಅಕ್ಟೋಬರ್ 2023



**ಅಭಿಮತ ಸಂಪಾದಕ ಮಂಡಳ**

ಪ್ರಧಾನ ಸಂಪಾದಕ
ಕೆ.ಎಸ್. ಮೂರ್ತಿ

ಸದಸ್ಯರು
ಎಸ್. ಕೃಷ್ಣ ಭಟ್
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.
ಎಸ್. ರಮೇಶ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಎಸ್. ಕೃಷ್ಣ ಭಟ್
ವಸಂತ ಕುಮಾರ್ ಎಂ.ಬಿ.

**ಕಾವಲು ಸಮಿತಿ**

ಅನಂತರಾಮು ಅರಳ
ಸಂಜೀವ ದೇಶಪಾಂಡೆ
ಐ. ಶಂಭುಲಿಂಗಪ್ಪ


## ಸಂಪಾದಕೀಯ ಮನದಾಳದಿಂದ...

### 'ಅಭಿಮತ'ಕ್ಕಾಯಿತು ಮೂವತ್ತಮೂರು ವರುಷ, 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ', ಪಸರಿಸಲಿ ಎಲ್ಲಾ ಕನ್ನಡಿಗರಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಕನ್ನಡತನ

ಆತ್ಮೀಯ ಅಭಿಮತ ಓದುಗ ಬಂಧುಗಳಿಗೆ ನಮಸ್ಕಾರ,

ಎಲ್ಲರಿಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಬಹಳ ಶ್ರದ್ಧೆ, ಭಕ್ತಿಭಾವದಿಂದ ನಾವೆಲ್ಲರೂ ಆಚರಿಸಿದ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು. ಶ್ರೀ ವಿದ್ಯಾ ಗಣಪತಿಯು ನಿಮಗೆಲ್ಲರಿಗೂ ಉತ್ತಮ ಆರೋಗ್ಯ, ಹೆಚ್ಚಿನ ಆಯುಸ್ಸು, ಸುಖ, ಶಾಂತಿ, ಸಮೃದ್ಧಿಯನ್ನು ಕರುಣಿಸಲೆಂದು ನಾನು ಪ್ರಾರ್ಥಿಸುತ್ತೇನೆ.

ಹಾಗೇನೇ, ಸೆಪ್ಟೆಂಬರ್ 15 ರಂದು ಸಂಘದಲ್ಲಿ ಆಚರಿಸಿದ ನಾಡು ಕಂಡ ಅತ್ಯಂತ ಮೇಧಾವಿ ಅಭಿಯಂತರರೂ, ದಕ್ಷ ಆಡಳಿತಗಾರರೂ ಆಗಿದ್ದ, **'ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮ ಜಯಂತಿ–ಇಂಜಿನಿಯರ್ಸ್ ದಿನಾಚರಣೆ'** ಹಾಗೂ ಕಲ್ಯಾಣ ಕರ್ನಾಟಕದ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಆಯೋಜನೆಗೊಂಡ ಕಲ್ಯಾಣ ಕರ್ನಾಟಕ ಉತ್ಸವದ ಅಭಿನಂದನೆಗಳು.

ಇನ್ನೊಂದು ಅತ್ಯಂತ ಸಂತೋಷದ ವಿಷಯವೆಂದರೆ, ನಮ್ಮ ನಿಮ್ಮೆಲ್ಲರ ಅಚ್ಚುಮೆಚ್ಚಿನ 'ಅಭಿಮತ' ಮಾಸಪತ್ರಿಕೆಯು ದೆಹಲಿ ಕರ್ನಾಟಕ ಸಂಘದ ಮುಖವಾಣಿಯಾಗಿ ದೆಹಲಿ ಕನ್ನಡಿಗರ ನರನಾಡಿಯಾಗಿ, ಸಂಘದ ಸದಸ್ಯರ ಭಾವನೆಗಳನ್ನು, ಅನಿಸಿಕೆಗಳನ್ನು, ಆಶೋತ್ತರಗಳನ್ನು ಸುಪ್ತ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸಲು ಒಂದು ಮುಕ್ತ ವೇದಿಕೆಯಾಗಿ ಸಾರ್ಥಕ 33 ವರ್ಷಗಳನ್ನು ಪೂರ್ಣ ಮಾಡಿ ಈಗ 34ನೇ ವರ್ಷಕ್ಕೆ ಕಾಲಿಡುತ್ತಿದೆ. ಅಭಿಮತದ ಛಾಪು ಮತ್ತು ಜನಪ್ರಿಯತೆ ನಮ್ಮ ಸಂಘದ ಸದಸ್ಯರಲ್ಲಿ ಮಾತ್ರವಲ್ಲದೇ ಹೊರನಾಡ ಕನ್ನಡಿಗರಲ್ಲಿ ಮತ್ತು ಕನ್ನಡನಾಡಿನ ಜನರಲ್ಲಿ ಮನೆ ಮಾತಾಗಿರುವುದು, ಅವರ ಮನಮುಟ್ಟಿರುವುದು ನಾನಾ ಕಡೆಗಳಿಂದ ನಮಗೆ ಬರುತ್ತಿರುವ ಉತ್ತಮ ಪ್ರತಿಕ್ರಿಯೆ ಮತ್ತು ಪ್ರೋತ್ಸಾಹಜನಕ ಸಂದೇಶಗಳಿಂದ ವ್ಯಕ್ತವಾಗುತ್ತಿದೆ. 33 ವರ್ಷಗಳ ಹಿಂದೆ 02.10.1990 ರಂದು ಸಂಘದ ಅಂದಿನ ಅಧ್ಯಕ್ಷರಾಗಿದ್ದ ದಿ. ಶ್ರೀ ಎನ್.ಪಿ. ಭಟ್ಟ ಅವರ ಪರಿಕಲ್ಪನೆಯ ಕೂಸಾಗಿ ಜನ್ಮ ತಳೆದ ನಮ್ಮ ದೆಹಲಿ ಕರ್ನಾಟಕ ಸಂಘದ ಅಭಿಮತವನ್ನು ಮೊದಲ ಮುಖ್ಯ ಸಂಪಾದಕರಾಗಿ ಡಾ. ವೆಂಕಟಾಚಲ ಜಿ. ಹೆಗಡೆಯವರು ಸುಮಾರು 14 ವರ್ಷಗಳ ಕಾಲ ಅತ್ಯಂತ ಪರಿಶ್ರಮ, ಶ್ರದ್ಧೆಯಿಂದ ಪೋಷಿಸಿ, ಬೆಳೆಸಿ ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಅವರ ಮುಂದಾಳತ್ವದಲ್ಲಿ, ಸಂಘದ ಸುವರ್ಣ ಜಯಂತಿ ಸ್ಮರಣ ಸಂಚಿಕೆ ಹೊರಗೆ ಬಂದಿರುವುದು ಶ್ಲಾಘನೀಯ. ನಂತರ ಶ್ರೀಮತಿ ಉಷಾ ಭರತಾದ್ರಿಯವರು ಅಭಿಮತವನ್ನು ಎರಡು ಅವಧಿಯಲ್ಲಿ ಪ್ರಧಾನ ಸಂಪಾದಕಿಯಾಗಿ ಮುನ್ನಡೆಸಿ, ವರ್ಣರಂಜಿತವಾಗಿ ಹಾಗೂ ಇನ್ನಷ್ಟು ಆಕರ್ಷಕವಾಗಿ ಹೊರಬರಲು ತಮ್ಮ ಅಮೂಲ್ಯ ಸಮಯ, ಯೋಗದಾನ ನೀಡಿದ್ದಾರೆ. ಅವರು ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಶುಭ ಸಂದರ್ಭದಲ್ಲಿ ಅಭಿಮತದ ವಿಶೇಷ ಸ್ಮರಣ ಸಂಚಿಕೆ ಹೊರಬಂದಿರುವುದು ಅಭಿನಂದನಾರ್ಹ. ನಂತರದ ಪ್ರಧಾನ ಸಂಪಾದಕರಾಗಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಡಿ. ಬಾಲಕೃಷ್ಣ ನಾಯ್ಕ್ ಡಿ ಹಾಗೂ ಕೊರೊನಾ ಕಾಲದಲ್ಲಿ ಡಾ. ಅವನೀಂದ್ರನಾಥ್ ರಾವ್ ಅವರುಗಳು ಸಂಘದ ಮುಖಪತ್ರಿಕೆಯನ್ನು ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಶೈಕ್ಷಣಿಕ ಲೇಪನದೊಂದಿಗೆ ಇನ್ನಷ್ಟು ಸದೃಢವಾಗಿ ಸುಂದರವಾಗಿ ಮೂಡಿ ಬರಲು ಸದೃಢವಾಗಲು ಪ್ರಮುಖ ಭೂಮಿಕೆ ವಹಿಸಿದ್ದು ಶ್ಲಾಘನೀಯ. 2021ರ ಅಕ್ಟೋಬರ್‌ನಿಂದ ಜೂನ್ 2023ರವರೆಗೆ ಅಭಿಮತದ ಪ್ರಧಾನ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ ಸಾಹಿತಿಗಳಾದ ಶ್ರೀ ಚಂದ್ರಶೇಖರ ಎನ್.ಪಿ.ಯವರು ತಮ್ಮ ಭಾಷಾ ಪ್ರೌಢಿಮೆಯಿಂದ ಅಭಿಮತಕ್ಕೆ ಸಾಹಿತ್ಯಕವಾಗಿ ಇನ್ನಷ್ಟು ಪ್ರಭುದ್ಧತೆಯನ್ನು ತಂದುಕೊಟ್ಟಿದ್ದಾರೆ. ಅಭಿಮತ ಪತ್ರಿಕೆಯು ಈ ಮಟ್ಟಕ್ಕೆ ಬೆಳೆಯಲು ಸಾಕಿ ಸಲಹಿದ ಹಿಂದಿನ ಎಲ್ಲಾ ಪ್ರಧಾನ ಸಂಪಾದಕರಿಗೆ ಹಾಗೂ ಆಯಾ ಕಾಲಘಟ್ಟದಲ್ಲಿ ಅಭಿಮತ ಸಂಪಾದಕ ಮಂಡಳಿಯ ಕಾರ್ಯ ನಿರ್ವಹಿಸಿ ಸಹಕರಿಸಿದ ಎಲ್ಲಾ ಸದಸ್ಯರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮುಂದುವರಿದು, ಸಂಘದ ಅಧ್ಯಕ್ಷರು ಹಾಗು ಕಾರ್ಯಕಾರಿ ಸಮಿತಿಯು ನೀಡಿರುವ ಜವಾಬ್ದಾರಿಯಂತೆ ಪ್ರಧಾನ ಸಂಪಾದಕನಾಗಿ ಕಳೆದ ಮೂರು ಸಂಚಿಕೆಗಳನ್ನು ಹೊಸ ಯೋಚನೆಗಳೊಂದಿಗೆ ಹೊರತರಲಾಗಿದ್ದು, ಅಭಿಮತದ 33 ವರ್ಷಗಳ ಸಾರ್ಥಕ ಪಯಣದ ಅಭಿನಂದನೆಗಳನ್ನು ಎಲ್ಲರಿಗೂ ತಿಳಿಸುತ್ತಾ, ನಮ್ಮ ಈ ಮುಖವಾಣಿ ಪತ್ರಿಕೆಯನ್ನು ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಮತ್ತು ಇನ್ನಷ್ಟು ಹೊಸತನ, ಹೊಸ ಆಯಾಮಗಳೊಂದಿಗೆ ಮುನ್ನಡೆಸಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುವ ಭರವಸೆಯನ್ನು ನೀಡುತ್ತಿದ್ದೇನೆ.

ಇನ್ನು, ಭಾರತದಾದ್ಯಂತ ದೆಹಲಿಯೂ ಸೇರಿದಂತೆ ಹತ್ತು ನಗರಗಳಲ್ಲಿ ಅಕ್ಟೋಬರ್ 5 ರಿಂದ ನವೆಂಬರ್ 19ರವರೆಗೆ ನಡೆಯಲಿರುವ 2023ರ ಐಸಿಸಿ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತವು ಸೇರಿದಂತೆ 10 ತಂಡಗಳು ಭಾಗವಹಿಸುತ್ತಿವೆ. ಈ ಕ್ರಿಕೆಟ್ ಮಹಾಸಂಗ್ರಾಮದಲ್ಲಿ, 45 ರೌಂಡ್ ರಾಬಿನ್ ಲೀಗ್, ಸೆಮಿ ಫೈನಲ್ ಮತ್ತು ಫೈನಲ್ ಸೇರಿದಂತೆ ಒಟ್ಟಾರೆ 48 ಪಂದ್ಯಗಳು ನಡೆಯಲಿದ್ದು ದೇಶದ ಕ್ರಿಕೆಟ್ ಪ್ರೇಮಿಗಳಿಗೆ ರಸದೌತಣ ನೀಡಲಿವೆ. ಇತ್ತೀಚೆಗಷ್ಟೇ ಶ್ರೀಲಂಕಾದಲ್ಲಿ ನಡೆದ ಏಷ್ಯಾ ಕಪ್ ಅನ್ನು ತನ್ನ ಮಡಿಲಿಗೇರಿಸಿಕೊಂಡಿರುವ ನಮ್ಮ ಬಲಿಷ್ಠ ಭಾರತದ ಕ್ರಿಕೆಟ್ ತಂಡ ಈ ಬಾರಿಯ ವಿಶ್ವಕಪ್ ಟ್ರೋಫಿ ಗೆಲ್ಲಲು ಅತ್ಯಂತ ನೆಚ್ಚಿನ ತಂಡವಾಗಿದ್ದು, 1983 ಮತ್ತು 2011ರ ವಿಶ್ವಕಪ್ ವಿಜಯದ ನಂತರ ಮೂರನೇ ಬಾರಿ ವಿಜಯಿಗಳಾಗಲೆಂದು ಸಮಸ್ತ ದೆಹಲಿ ಕನ್ನಡಿಗರು ಹಾಗೂ ಭಾರತದ ಜನತೆಯ ಪರವಾಗಿ ಶುಭ ಹಾರೈಸುತ್ತೇನೆ. ಹಾಗೇನೇ, ಈ ವರ್ಷ ಚೀನಾದ ಹಾಂಗ್‌ಝೌ (Hangzhou)ನಲ್ಲಿ ನಡೆಯುತ್ತಿರುವ 19ನೇ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಅತ್ಯಂತ ಶ್ರೇಷ್ಠ ಪ್ರದರ್ಶನ ನೀಡುತ್ತಿದ್ದು ಇಲ್ಲಿಯವರೆಗೆ ಒಟ್ಟಾರೆ 107 (28 ಚಿನ್ನ, 38 ಬೆಳ್ಳಿ ಮತ್ತು 41 ಕಂಚು) ಪದಕಗಳನ್ನು ಪಡೆದಿದ್ದು ಈವರೆಗಿನ ಏಷ್ಯನ್ ಪಂದ್ಯಾವಳಿಗಳಲ್ಲಿ ಭಾರತದ ಅತೀ ಹೆಚ್ಚು ಪದಕಗಳ ಟ್ಯಾಲಿಯಾಗಿದೆ. ಇನ್ನೂ ಹೆಚ್ಚು ಪದಕಗಳನ್ನು ಗಳಿಸಲೆಂದು ಆಶಿಸುತ್ತಾ ಏಷ್ಯನ್ ಪಂದ್ಯಗಳಲ್ಲಿ ಭಾಗವಹಿಸಿದ ಭಾರತದ ಪ್ರತಿಯೊಬ್ಬ ಕ್ರೀಡಾ ಪಟುವಿಗೆ ಹಾಗೂ ಗೋಲ್ಫ್‌ನಲ್ಲಿ ಬೆಳ್ಳಿ ಪದಕ ಪಡೆದ ಕರ್ನಾಟಕದ ಅದಿತಿ ಅಶೋಕ್ ಸೇರಿದಂತೆ ಎಲ್ಲಾ ಪದಕ ವಿಜೇತರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಸಂಘದಲ್ಲಿ ಆಯೋಜನೆಗೊಂಡ ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳ ಕಲಾವಿದರರಿಂದ ಅಮೋಘವಾಗಿ ಪ್ರಸ್ತುತಿಗೊಂಡ 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ' ಕಾರ್ಯಕ್ರಮ, ಕಲ್ಯಾಣ ಕರ್ನಾಟಕ ಉತ್ಸವ, ಗಣೇಶ ಸಾಂಸ್ಕೃತಿಕ ಉತ್ಸವ, ಐದು ಶ್ರೇಷ್ಠ ನಾಟಕಗಳೊಂದಿಗೆ ಪ್ರಸ್ತುತಿಯಾದ ನಾಟಕೋತ್ಸವಗಳ ವರದಿಗಳು, ಡಾ. ಭೀಮ ಭಟ್ಟರ ವೈದ್ಯಕೀಯ ಲೇಖನ (ಭಾಗ–3), ಶ್ರೀ ಸರವು ಕೃಷ್ಣ ಭಟ್ ಅವರಿಂದ ಹೊಸ ಅಂಕಣ 'ತಿಂಗಳ ವ್ಯಕ್ತಿ' ಸೇರಿದಂತೆ ಇತರ ಸಂಘ ಸಂಸ್ಥೆಗಳ ಗಣೇಶ ಪೂಜೆ ಆಚರಣೆಗಳ ಛಾಯಾಚಿತ್ರ ಮತ್ತು ಇತರ ವರದಿಯನ್ನೊಳಗೊಂಡ 'ಅಭಿಮತ'ದ 34ನೇ ಸಂಪುಟದ ಮೊದಲ ಸಂಚಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ನನಗೆ ಅತ್ಯಂತ ಹೆಮ್ಮೆ ಹಾಗು ಸಂತಸವಾಗುತ್ತಿದೆ. ನೀವೆಲ್ಲರೂ ಈವರೆಗೆ ನೀಡಿರುವ ಅದೇ ಪ್ರೀತಿ, ಅಕ್ಕರೆಯಿಂದ ಈ ಮಧ್ಯಮ ಹರೆಯದ ನಮ್ಮ ಅಭಿಮತವನ್ನು ಮುಂದೆಯೂ ಹೀಗೇ ಪ್ರೋತ್ಸಾಹಿಸುವಿರೆಂದು ಆಶಿಸುತ್ತೇನೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ಪೂರ್ವ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಜನ್ಮ ಜಯಂತಿಯ ಶುಭಾಶಯಗಳೊಂದಿಗೆ,

**ಕೆ. ಶ್ರೀನಿವಾಸ ಮೂರ್ತಿ**
ಪ್ರಧಾನ ಸಂಪಾದಕರು

## ಅಧ್ಯಕ್ಷರ ನುಡಿ



ಆತ್ಮೀಯ ಬಂಧುಗಳೇ,

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಪುನರ್ ನಾಮಕರಣವಾಗಿ ಈ ವರ್ಷದ ನವೆಂಬರ್ ಒಂದನೇ ತಾರೀಖಿಗೆ 50 ವರ್ಷ ತುಂಬುತ್ತಿದೆ. ಈ ಸಂದರ್ಭದಲ್ಲಿ **ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ** ಎಂಬ ಶೀರ್ಷಿಕೆಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದ ವೇದಿಕೆಯ ಮೇಲೆ ಸಾಂಸ್ಕೃತಿಕ ಕಾರ್ಯಕ್ರಮದ ಇತಿಹಾಸ ಸೃಷ್ಟಿಸಿದರು, ನಮ್ಮ ದೆಹಲಿಯ ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳ ಕಲಾವಿದರು.

ಬಂಧುಗಳೇ, ಅಮೃತ ಮಹೋತ್ಸವದ ಕಾರ್ಯಕಾಲದಲ್ಲಿ ದೆಹಲಿ ಕರ್ನಾಟಕ ಸಂಘವು ಸೆಪ್ಟೆಂಬರ್ 2 ಮತ್ತು 3 ರಂದು ದೆಹಲಿ ಎನ್.ಸಿ.ಆರ್. ನಲ್ಲಿ ಕನ್ನಡದ ಕೆಲಸಗಳನ್ನು ಮಾಡುತ್ತಿರುವ ಸಂಘ ಸಂಸ್ಥೆಗಳಿಗಾಗಿ ಸಂಘದ ಸಭಾಂಗಣದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಶೀರ್ಷಿಕೆಯೇ **ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ.** ಈ ಕಾರ್ಯಕ್ರಮ ನಡೆಸಿದ ಕಾರಣವೇನೆಂದರೆ ನಮ್ಮ ರಾಜ್ಯಕ್ಕೆ ಕರ್ನಾಟಕವೆಂದು ಪುನರ್ ನಾಮಕರಣದ ಸುವರ್ಣ ಮಹೋತ್ಸವ. ದೆಹಲಿ ಕನ್ನಡಿಗರಾದ ನಾವು ಎಲ್ಲೆಡೆಯ ಕನ್ನಡಿಗರಿಗಿಂತ ಮೊದಲು ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮವನ್ನು ಮಾಡಿ ಈ ವಿಶೇಷ ಸವಿನೆನಪನ್ನು ಆಚರಿಸಿದ್ದೇವೆ. ಈ ಕಾರ್ಯಕ್ರಮದಲ್ಲಿ ಸರಿಸುಮಾರು 250ಕ್ಕೂ ಹೆಚ್ಚು ಸ್ಥಳೀಯ ಕಲಾವಿದರು ಅತ್ಯಂತ ಅಮೋಘವಾಗಿ ವಿಭಿನ್ನ ಸ್ವಯಂ ತಯಾರಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಇಂತಹ ಮೇರು ಕಾರ್ಯಕ್ರಮಕ್ಕೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಕಲಾವಿದರಿಗೆ ಸೂಕ್ತ ಸಹಕಾರವನ್ನು ಸಹಾ ನೀಡಲಾಗಿದೆ. ಕಾರ್ಯಕ್ರಮ ನೀಡಿದ ಪ್ರತಿ ಸ್ಥಳೀಯ ಸಂಘಕ್ಕೆ ಕಲಾವಿದರ ಉಡುಗೆ ತೊಡುಗೆಗಾಗಿ 20,000/– ರೂಪಾಯಿಗಳನ್ನು ನೀಡಲಾಗಿದೆ. ಆದರೆ ಕೊಟ್ಟ ಹಣಕ್ಕಿಂತ ಮುಖ್ಯವಾಗಿದ್ದಿದ್ದು 250 ಜನ ಕಲಾವಿದರು ಎರಡೂ ದಿನ ಸಂಘದ ವೇದಿಕೆಯಲ್ಲಿ ಅತ್ಯಂತ ಸುಂದರವಾದ ಕಾರ್ಯಕ್ರಮಗಳನ್ನು ನೀಡಿ ಮನ ಗೆದ್ದಿದ್ದು ಮತ್ತು ಇತರರ ಕಾರ್ಯಕ್ರಮ ನೋಡಿ ಸಂಭ್ರಮಿಸಿದ್ದು. ಎರಡು ದಿನಗಳ ಈ ಕಾರ್ಯಕ್ರಮಕ್ಕೆ ಸರಿಸುಮಾರು 1500 ಕನ್ನಡಿಗರು ಭಾಗಿಯಾಗಿ ಯಶಸ್ವಿಯಾಗಿಸಿದ್ದಾರೆ. ಈ ಸ್ಥಳೀಯ ಕಲಾವಿದರ ಕಾರ್ಯಕ್ರಮ ನನ್ನ ಯೋಚನೆಯಂತೆ ಆಯೋಜಿಸಲು ಸಹಕಾರ ನೀಡಿದಂತಹ ಎಲ್ಲಾ ಸ್ಥಳೀಯ ಸಂಘ–ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಮತ್ತು ಕಲಾವಿದರಿಗೆ ನಮ್ಮ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರ ಕೃತಜ್ಞತೆಗಳು. ಜೊತೆಗೆ ವಿಶೇಷವಾಗಿ ನಮ್ಮ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಪೂಜಾ ರಾವ್, ಸದಸ್ಯರಾದ ಶ್ರೀ ಸಂತೋಷ ಜೆ ಮತ್ತು ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರಿಗೆ ಧನ್ಯವಾದಗಳು.







ಆತ್ಮೀಯರೇ, ನಮ್ಮ ಕಲ್ಯಾಣ ಕರ್ನಾಟಕದ ಭಾಗವು ನಿಜಾಮನ ದಬ್ಬಾಳಿಕೆಯಿಂದ ಹೊರಬಂದು ಸ್ವಾತಂತ್ರ್ಯ ಪಡೆದದ್ದು ಸೆಪ್ಟೆಂಬರ್ 17, 1948 ರಂದು. ಈ ಕಲ್ಯಾಣ ಕರ್ನಾಟಕಕ್ಕೆ ಸ್ವಾತಂತ್ರ್ಯ ಬಂದು ಈ ತಿಂಗಳು 75 ವರ್ಷ ಅಂದರೆ ಅಮೃತ ಮಹೋತ್ಸವದ ಸಂಭ್ರಮ. ಈ ಅಮೃತ ಮಹೋತ್ಸವ ಆಚರಣೆ ಅಂಗವಾಗಿ ನಾವು ಕಲ್ಯಾಣ ಕರ್ನಾಟಕ ಉತ್ಸವವನ್ನು ಸಂಘದಲ್ಲಿ ಹಮ್ಮಿಕೊಂಡಿದ್ದೆವು. ಈ ಕಾರ್ಯಕ್ರಮದಲ್ಲಿ ಖ್ಯಾತ ಜಾನಪದ ಗಾಯಕರಾದ ಶ್ರೀ ಮಳವಳ್ಳಿ ಮಹಾದೇವಸ್ವಾಮಿ ಅವರ ತಂಡ ಅತ್ಯಂತ ಸುಂದರವಾಗಿ ಜಾನಪದ ಗೀತೆಗಳನ್ನು ಹಾಡಿ ದೆಹಲಿ ಕನ್ನಡಿಗರ ಅಪಾರ ಮೆಚ್ಚುಗೆ ಗಳಿಸಿದರು. ಕರ್ನಾಟಕದಲ್ಲಿ ತಮ್ಮ ಮೂರು ನಾಲ್ಕು ಕಾರ್ಯಕ್ರಮಗಳನ್ನು ಬದಿಗೊತ್ತಿ ನನ್ನ ಕರೆಗೆ ಓಗೊಟ್ಟು ನಮ್ಮ ಸಂಘಕ್ಕೆ ಬಂದು ಎರಡು ಗಂಟೆಗಿಂತಲೂ ಹೆಚ್ಚು ಕಾಲ ಜಾನಪದ ಗೀತೆಗಳಿಂದ ಎಲ್ಲರ ಮನರಂಜಿಸಿ, ಕಲ್ಯಾಣ ಕರ್ನಾಟಕ ಉತ್ಸವದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಶ್ರೀ ಮಹಾದೇವಸ್ವಾಮಿ ಮತ್ತು ಅವರ ತಂಡಕ್ಕೆ ನಾನು ಚಿರಋಣಿ. ಹಾಗೆಯೇ ಕಲ್ಯಾಣ ಕರ್ನಾಟಕೋತ್ಸವದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗಿಯಾದ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ, ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿ ಐಆರ್‌ಎಸ್ ಅಧಿಕಾರಿ ಶ್ರೀ ಅಮರೇಶ್ ಪಾಟೀಲ್, ಮಾನ್ಯ ರಾಜ್ಯಸಭಾ ಸಂಸದರಾದ ಶ್ರೀ ಈರಣ್ಣ ಕಡಾಡಿ ಅವರಿಗೆ ಅನಂತಾನಂತ ವಂದನೆಗಳು. ಈ ಕಾರ್ಯಕ್ರಮದ ಜವಾಬ್ದಾರಿ ವಹಿಸಿಕೊಂಡು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ್ ಮತ್ತು ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ್ ಅವರಿಗೆ ಧನ್ಯವಾದಗಳು. ವಿಶೇಷವಾಗಿ ಕಾರ್ಯಕ್ರಮವನ್ನು ಆಯೋಜಿಸಲು ಸಹಕರಿಸಿದ ಹಿರಿಯರಾದ ಶ್ರೀ ವಿ.ವಿ. ಬಿರಾದಾರ, ಡಾ. ಎಸ್.ಎಲ್. ಭಂಡಾರ್‌ಕರ್ ಮತ್ತು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಕೃತಜ್ಞತೆಗಳು. ಇನ್ನು ಮುಂದೆಯೂ ಸಹಾ ನಿಮ್ಮ ಈ ಸಹಕಾರ ಸದಾ ನಮ್ಮ ಸಂಘಕ್ಕೆ ಸಿಗುತ್ತಿರಲೆಂದು ಆಶಿಸುತ್ತೇನೆ.





ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕ ಸಂಘದಲ್ಲಿ ಆಯೋಜನೆಗೊಂಡ ಜಿಲ್ಲಾವಾರು ಸಾಂಸ್ಕೃತಿಕ ಉತ್ಸವಗಳಲ್ಲಿ ಹಲವು ನಾಟಕಗಳನ್ನು ಪ್ರದರ್ಶನ ಮಾಡಲಾಗಿತ್ತು. ಮುಂದುವರಿದಂತೆ ಈ ಬಾರಿ ನಮ್ಮ ದೆಹಲಿ ಕರ್ನಾಟಕ ಸಂಘವು ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ದೆಹಲಿ ಕನ್ನಡಿಗರಿಗೋಸ್ಕರ ಸಂಘದ ವೇದಿಕೆಯಲ್ಲಿ ನಾಡಿನ ಪ್ರಸಿದ್ಧ ರಂಗ ತಂಡಗಳಿಂದ ಹೆಸರಾಂತ ನಿರ್ದೇಶಕರುಗಳ ಐದು ನಾಟಕಗಳನ್ನು ಪ್ರಸ್ತುತಪಡಿಸಲಾಗಿದೆ. ರಂಗಭೂಮಿ ಮತ್ತು ಕನ್ನಡ ಚಲನಚಿತ್ರ ರಂಗದಲ್ಲಿ ತಮ್ಮ ಅಭಿನಯದ ಛಾಪನ್ನ ಮೂಡಿಸಿರುವ ಹಿರಿಯ ರಂಗಕರ್ಮಿ ಜನಪ್ರಿಯ ಚಲನಚಿತ್ರ ನಟ ಶ್ರೀ ದೊಡ್ಡಣ್ಣನವರ ಉಪಸ್ಥಿತಿಯಲ್ಲಿ ರಂಗಭೂಮಿಯಲ್ಲಿ ವಿಶೇಷ ಸ್ಥಾನ ಪಡೆದಿರುವಂತಹ **ಶ್ರೀ ಮೂಗು ಸುರೇಶ್‌ರವರ ಸಾಫಲ್ಯ ತಂಡದಿಂದ "ವೈಶಂಪಾಯನ ತೀರ" ನಾಟಕ,** ಕನ್ನಡ ಚಲನಚಿತ್ರ ರಂಗದ ಸುಪ್ರಸಿದ್ಧ ನಿರ್ದೇಶಕರೂ, ನಟರೂ, ಮತ್ತು ಬೆನಕ ನಾಟಕ ತಂಡದ ಸಂಸ್ಥಾಪಕರಾದ **ಡಾ. ಟಿ.ಎಸ್. ನಾಗಾಭರಣರವರ "ಸತ್ತವರ ನೆರಳು" ನಾಟಕ, ಹೊಸಕೋಟೆಯ ಜನಪದರು ಸಾಂಸ್ಕೃತಿಕ ವೇದಿಕೆ ತಂಡದಿಂದ "ಸೂಳೆ ಸಂಕವ್ವ"** ನಾಟಕ, ಶ್ರೀ ಕೆ.ವೈ. ನಾರಾಯಣಸ್ವಾಮಿ ವಿರಚಿತ, **ಶ್ರೀ ನಂಜುಂಡೇಗೌಡರ ನಿರ್ದೇಶನದ ದೃಶ್ಯಕಾವ್ಯ ತಂಡ ಪ್ರಸ್ತುತಿಪಡಿಸಿದ "ಮಾಯಾಬೇಟೆ"** ನಾಟಕ. ಜೊತೆಗೆ ಕನ್ನಡ ಚಲನಚಿತ್ರ ರಂಗದಲ್ಲಿ ತನ್ನದೇ ಆದ ವೈಶಿಷ್ಟ್ಯತೆ ಮೆರೆದಿರುವ ನಟ ನಿರ್ದೇಶಕ **ಶ್ರೀ ಮಂಡ್ಯ ರಮೇಶ್ ಅವರ ನಟನ ತಂಡದವರಿಂದ ನಾಟಕ "ಕೃಷ್ಣೇಗೌಡರ ಆನೆ"** ನಾಟಕಗಳ ಪ್ರಯೋಗಿಸಲಾಯಿತು. ರಂಗಭೂಮಿಯ ಹಿರಿಯ ಕಲಾವಿದರ ಈ ವಿಶೇಷವಾದ ನಾಟಕೋತ್ಸವ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಜರುಗಿದೆ. ಈ ಎಲ್ಲಾ ಕಾರ್ಯಕ್ರಮಗಳು ನಿಮ್ಮೆಲ್ಲರ ಮನ ಗೆದ್ದಿದೆ ಅಂದುಕೊಂಡಿದ್ದೇನೆ. ಈ ಕಾರ್ಯಕ್ರಮಗಳ ಜೊತೆಗೆ ಪಟ್ಲ ಫೌಂಡೇಶನ್‌ರವರ ಯಕ್ಷ ಧ್ರುವ ಪಟ್ಲ ಸಂಭ್ರಮದಲ್ಲಿ ಎರಡು ಯಕ್ಷಗಾನ ಪ್ರಸಂಗಗಳು ಮತ್ತು ನಿನಾದ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರ ನಿನಾದ ತಂಡದವರಿಂದ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಳೆದ ಸೆ. 30ರಂದು ಆಯೋಜನೆ ಮಾಡಿದ್ದರು. ಇವರಿಗೂ ನಾನು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.





ಆತ್ಮೀಯರೇ, ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವವನ್ನು ನವೆಂಬರ್ ತಿಂಗಳಲ್ಲಿ ಆಯೋಜನೆ ಮಾಡುತ್ತಿದ್ದೇವೆ. ಜೊತೆಗೆ ನವೆಂಬರ್ ತಿಂಗಳಲ್ಲಿ ಪ್ರತಿ ಭಾನುವಾರ ಒಂದಲ್ಲ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ತಾವು ಭಾಗಿಯಾಗಬೇಕು, ಜೊತೆಗೆ ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಎಲ್ಲಾ ವಾರ್ಷಿಕ ಆಟೋಟ ಸ್ಪರ್ಧೆಗಳಲ್ಲಿ ಸದಸ್ಯರುಗಳು ಭಾಗಿಯಾಗಿ ಅದರ ಲಾಭವನ್ನ ಪಡೆದುಕೊಳ್ಳಬೇಕು. ಇನ್ನು, ಪ್ರತಿವರ್ಷದಂತೆ ಈ ವರ್ಷವೂ ಸಹ ದೆಹಲಿ ಕರ್ನಾಟಕ ಸಂಘದ ಅರ್ಹತೆ ಮತ್ತು ಅವಶ್ಯಕತೆ ಆಧಾರದ ಮೇಲೆ ವಿದ್ಯಾರ್ಥಿ ವೇತನವನ್ನು ನೀಡಲಿದ್ದೇವೆ. ಇದರಲ್ಲಿ ಸದಸ್ಯರು ತಮ್ಮ ಮಕ್ಕಳ ಅಂಕಪಟ್ಟಿ ವಿವರಗಳೊಂದಿಗೆ ಸಂಘದ ಕಚೇರಿಗೆ ಅರ್ಜಿ ಸಲ್ಲಿಸಿ ಈ ಯೋಜನೆಯ ಲಾಭವನ್ನ ಪಡೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

***ಸಿ.ಎಂ. ನಾಗರಾಜ***

ಅಧ್ಯಕ್ಷರು

**ಮುನ್ನೋಟ**

ಆತ್ಮೀಯರೇ,

ನಿಮ್ಮ ನಮ್ಮೆಲ್ಲರ ಪ್ರೀತಿಯ "ಅಭಿಮತ"ಕ್ಕೆ 34ರ ಸಂಭ್ರಮ. ಕಳೆದ 33 ವರ್ಷಗಳಿಂದ ಸತತವಾಗಿ ದೆಹಲಿಯ ಕನ್ನಡಿಗರ ಮನದಾಳದ ಮಾತುಗಳನ್ನು ಹಾಗೂ ದೆಹಲಿ ಕನ್ನಡಿಗರ ಕನ್ನಡಪರ ಸೇವಾ ಚಟುವಟಿಕೆಗಳ ಚಿತ್ರಣವನ್ನು ಸಂಘದ ಎಲ್ಲಾ ಸದಸ್ಯರುಗಳಿಗೆ ತಲುಪಿಸುತ್ತಾ, ಸಂಘದ ಮುಖವಾಣಿಯಾಗಿ ಹೊರಬರುತ್ತಿದೆ.

ಕಪ್ಪು ಬಿಳುಪಿನ, ಹಸ್ತ ಲಿಖಿತ, ಬೆರಳಚ್ಚಿನ ಪ್ರತಿಯಿಂದ ಆರಂಭವಾದ ಈ ಪತ್ರಿಕೆ ಇಂದು ವರ್ಣರಂಜಿತವಾಗಿ ಸುಂದರವಾಗಿ ಮೂಡಿ ಬರುತ್ತಿದೆ. ಈ ಪತ್ರಿಕೆಯನ್ನು ಕೈಹಿಡಿದು, ಪಾಲಿಸಿ ಬೆಳಸಲು ಶ್ರಮಿಸಿದ–ಹಿರಿಯರಿಗೆ ಈ ಸುಸಂದರ್ಭದಲ್ಲಿ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ನಮಸ್ಕಾರಗಳನ್ನರ್ಪಿಸುತ್ತೇನೆ. ಅಭಿಮತದ ಈ ಚೈತ್ರಯಾತ್ರೆ ಹೀಗೆ ಮುಂದುವರೆಯಲಿ ಹಾಗೂ ಸಂಘದ ಅಭಿವೃದ್ಧಿಯ ದ್ಯೋತಕವಾಗಿ ಬೆಳೆಯಲೆಂದು ನಮ್ಮಗಳ ಹಾರೈಕೆ.

ಇದರೊಂದಿಗೆ ಪ್ರಸ್ತುತ ಆಡಳಿತ ಮಂಡಳಿಯ ಚುನಾಯಿತ ಕಾರ್ಯಾವಧಿಯನ್ನು ಯಶಸ್ವಿಯಾಗಿ ಪೂರೈಸಿದ್ದೇವೆ.

***ಆರ್. ರೇಣುಕುಮಾರ್***
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**21 ಅಕ್ಟೋಬರ್ 2023** **ಶನಿವಾರ ರಾತ್ರಿ 9.00 ಗಂಟೆಯಿಂದ 22 ಭಾನುವಾರ ಬೆಳಗ್ಗಿನವರೆಗೆ**

ಅಹೋರಾತ್ರಿ ಪೌರಾಣಿಕ ನಾಟಕ '**ಕುರುಕ್ಷೇತ್ರ**'

**29 ಅಕ್ಟೋಬರ್ 2023** **ಭಾನುವಾರ ಸಂಜೆ : 5.30 ಗಂಟೆಗೆ**

**'ದಸರಾ ಸಂಭ್ರಮ'**

**1 ನವೆಂಬರ್ 2023** **ಬುಧವಾರ ಬೆಳಗ್ಗೆ : 8.30 ಗಂಟೆಗೆ**

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ **ಧ್ವಜಾರೋಹಣ**

**5 ನವೆಂಬರ್ 2023** **ಭಾನುವಾರ ಬೆಳಗ್ಗೆ 8.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ**

**ಆರೋಗ್ಯ ಮೇಳ**-ಉಚಿತ ಆರೋಗ್ಯ ತಪಾಸಣೆ

**19 ನವೆಂಬರ್ 2023** **ಭಾನುವಾರ ಬೆಳಗ್ಗೆ 11.00 ಗಂಟೆಯಿಂದ**

ಸಂಘದ ಆವರಣದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ **"ಕೈರುಚಿ"** ಆಹಾರ ಮೇಳ

**26 ನವೆಂಬರ್ 2023** **ಭಾನುವಾರ ಸಂಜೆ : 5.30 ಗಂಟೆಗೆ**

ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು

**3 ಡಿಸೆಂಬರ್ 2023** **ಭಾನುವಾರ ಸಂಜೆ : 5.30 ಗಂಟೆಗೆ**

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಸಮಾರಂಭ, ವಿದ್ಯಾರ್ಥಿ ವೇತನ ವಿತರಣೆ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳು

### ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರೀಡಾ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘವು 2023-24 ನೇ ಸಾಲಿನ ಕ್ರೀಡಾ ಸ್ಪರ್ಧೆಗಳನ್ನು ಅಕ್ಟೋಬರ್ 8 ಮತ್ತು 15, 2023 ರಂದು ಬೆಳಗ್ಗೆ 8.00 ರಿಂದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಲು ನಿರ್ಧರಿಸಿದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

**ಅಕ್ಟೋಬರ್ 8** ರಂದು ಕಬಡ್ಡಿ, ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಗಳು ನಡೆಯಲಿವೆ. ತಂಡದ ಹೆಸರು ನೋಂದಾಯಿಸಿಕೊಳ್ಳಲು **05.10.2023** ಕೊನೆಯ ದಿನಾಂಕವಾಗಿರುತ್ತದೆ.

**ಅಕ್ಟೋಬರ್ 15** ರಂದು ವಾರ್ಷಿಕ ಆಟೋಟ ಸ್ಪರ್ಧೆಗಳು ನಡೆಯಲಿವೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :** ಕ್ರೀಡಾ ಸಮಿತಿ ಅಧ್ಯಕ್ಷರು- ಡಾ. ಎಂ.ಎಸ್. ಶಶಿಕುಮಾರ್ - **98116 89337,** ಕ್ರೀಡಾ ಸಮಿತಿ ಸಂಚಾಲಕರು ಸಂತೋಷ ಜೆ - **99112 35783,** ಸಂಘದ ಕಚೇರಿ : **011 26109615**

**ಪ್ರಧಾನ ಕಾರ್ಯದರ್ಶಿ**

### ವಿದ್ಯಾರ್ಥಿ ವೇತನ

ಆತ್ಮೀಯ ಸದಸ್ಯರೇ,

ದೆಹಲಿ ಕರ್ನಾಟಕ ಸಂಘದಿಂದ 2022-23 ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು **20 ಅಕ್ಟೋಬರ್ 2023** ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಪ್ರಧಾನ ಕಾರ್ಯದರ್ಶಿ**

## ದೆಹಲಿಯ ಕನ್ನಡ ಪರ ಸಂಘ ಸಂಸ್ಥೆಗಳ ಕಲಾವಿದರಿಂದ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ

# ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳ ಅನಾವರಣ




**ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ** ಎನ್ನುವ ಶೀರ್ಷಿಕೆಯಡಿಯಲ್ಲಿ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಕಾರ್ಯ ಕಾಲದಲ್ಲಿ ಆಯೋಜಿಸಿದ ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಕಳೆದ ಸೆಪ್ಟೆಂಬರ್ 2 ಮತ್ತು 3, 2023 ಸಂಘದ ಸಭಾಂಗಣದಲ್ಲಿ ದೆಹಲಿ ಕನ್ನಡಿಗರಿಂದ ಸಾಂಸ್ಕೃತಿಕ ಸುಧೆಯನ್ನು ಹರಿಸಿದವು.

ದೆಹಲಿ ಕರ್ನಾಟಕ ಸಂಘವು ಸ್ಥಾಪನೆಯಾಗಿ 75 ವರ್ಷಗಳಾಗಿ ಕಳೆದ ಒಂದು ವರ್ಷಗಳಿಂದ ತನ್ನ ಅಮೃತ ಕಾಲದ ಎಲ್ಲ ಸಾಂಸ್ಕೃತಿಕ, ಶೈಕ್ಷಣಿಕ, ಔದ್ಯೋಗಿಕ, ಆರೋಗ್ಯ ಮತ್ತು ಆಹಾರ ಮೇಳದಂತಹ ನೂರಾರು ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ದಾಖಲೆ ಬರೆದಿದೆ. ಜೊತೆಗೆ ಕಳೆದ ಫೆಬ್ರವರಿ ತಿಂಗಳಲ್ಲಿ ದೇಶದ ಹೆಮ್ಮೆಯ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಅಮೃತ ಮಹೋತ್ಸವದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಕನ್ನಡ ನಾಡು, ನುಡಿ, ಭಾಷೆ, ಸಂಸ್ಕೃತಿ ಹಾಗು ಸಂಘದ ಕಾರ್ಯ ಚಟುವಟಿಕೆಗಳನ್ನು ಹಾಡಿ ಹೊಗಳಿದ್ದಾರೆ. ಈ ಎಲ್ಲ ಪ್ರೇರಣಾ ಶಕ್ತಿಗಳೊಂದಿಗೆ ದೆಹಲಿಯಲ್ಲಿ ವಾಸವಾಗಿದ್ದುಕೊಂಡು ಕರ್ನಾಟಕ ಸಂಘದ ಮೂಲ ಧ್ವನಿಯಾಗಿರುವ ಸ್ಥಳೀಯ ಸಂಘ ಸಂಸ್ಥೆಗಳ ಕನ್ನಡಿಗರಿಗೆ ತಮ್ಮ ಕಲಾ ಪ್ರತಿಭೆಯನ್ನು ಹೊರ ಹಾಕಲು ವೇದಿಕೆ ಕಲ್ಪಿಸಿಕೊಟ್ಟು ಆಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ಮೂಡಿ ಬಂದವು.

ಕಾರ್ಯಕ್ರಮದಲ್ಲಿ ದೆಹಲಿಯ ಸುಮಾರು 16 ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳ 250 ಕ್ಕೂ ಹೆಚ್ಚಿನ ವಿವಿಧ ಕಲಾವಿದರು ಭಾಗವಹಿಸಿ ಎರಡು ದಿನಗಳಲ್ಲಿ ಸಂಘದ ಸಭಾಂಗಣದಲ್ಲಿ ಸುಮಾರು 16 ಗಂಟೆಗಳ ಕಾಲ ಹಾಡು, ನಾಟಕ, ಸಂಗೀತ, ನೃತ್ಯ, ರೂಪಕ ಮತ್ತು ಹಾಸ್ಯ ಪ್ರದರ್ಶನಗಳಿಂದ ನೆರೆದಿದ್ದ ಸರಿಸುಮಾರು ಸಾವಿರಕ್ಕೂ ಹೆಚ್ಚು ಕಲಾರಸಿಕರನ್ನು ರಂಜಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖವಾಗಿ ದೆಹಲಿ ಒಕ್ಕಲಿಗ ಗೌಡ ಸಂಘ, ನಾಡಪ್ರಭು ಕೆಂಪೇಗೌಡ ಫೌಂಡೇಷನ್, ಜನಕಪುರಿ ಕನ್ನಡ ಕೂಟ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ತುಳು ಸಿರಿ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ಜನಕಪುರಿ ಮಹಿಳಾ ಮಂಡಳಿ, ಗುರುಗಾಂವ್ ಕನ್ನಡ ಸಂಘ, ಗೋಕರ್ಣ ಮಂಡಲ, ಗೌಡ್ ಸಾರಸ್ವತ ಸಮಾಜ, ಕರ್ನಾಟಕ ಭವನ ರೆಸಿಡೆನ್ಸಿಯಲ್ ವೆಲ್ ಫೇರ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ, ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ವತಿಯಿಂದ ಒಟ್ಟಾರೆ 16 ಬೇರೆ ಬೇರೆ ಕನ್ನಡ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು, ಮಹಿಳೆಯರು, ಮಕ್ಕಳು, ಪಾಲಕರು ಎಲ್ಲರು ತಮ್ಮನ್ನು ತಾವು ಸಾಂಸ್ಕೃತಿಕವಾಗಿ ತೊಡಗಿಸಿಕೊಂಡು ವೈವಿದ್ಯಮಯ, ಕಲಾತ್ಮಕ ಪ್ರದರ್ಶನ ನೀಡಿದರು.

**ಉದ್ಘಾಟನಾ ಸಮಾರಂಭ :** ಮೊದಲ ದಿನ ನಡೆದ ಕಾರ್ಯಕ್ರಮದಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಂತೋಷ ಜೆ ಅವರು ಆರಂಭಿಕ ಮಾತುಗಳನ್ನಾಡಿ ವೇದಿಕೆ ಮೇಲೆ ಮುಖ್ಯ ಅತಿಥಿಗಳನ್ನು ಮತ್ತು ಸ್ಥಳೀಯ ಸಂಘ ಸಂಸ್ಥೆಗಳ ಅಧ್ಯಕ್ಷರು ಕಾರ್ಯದರ್ಶಿಗಳನ್ನ ಬರಮಾಡಿಕೊಂಡರು. ಸ್ಥಳೀಯ ಮಹಿಳೆಯರಿಂದ ನಾಡಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಅವರು ಇಂದಿನ ಕಾರ್ಯಕ್ರಮದ ಆಯೋಜನೆ ಹಿನ್ನೆಲೆ ಮತ್ತು ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಆಯೋಜನೆಗೊಂಡ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ವಿವರ ನೀಡುತ್ತಾ ಬಂದಿದ್ದ ಮುಖ್ಯ ಅತಿಥಿಗಳನ್ನ ಮತ್ತು ವೇದಿಕೆ ಮೇಲೆ ಉಪಸ್ಥಿತರಿದ್ದ ಎಲ್ಲ ಸಂಘ-ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ನೆರೆದಿದ್ದವರೆಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನವದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಅಧ್ಯಕ್ಷರೂ ಆದ ದೆಹಲಿ ಪೋಲಿಸ್‌ನ ಕ್ರೈಂ ಅಂಡ್ ವಿಮೆನ್

ವಿಭಾಗದ ಹಿರಿಯ ಅಧಿಕಾರಿ ಡಿಸಿಪಿ ಶ್ರೀ ಬಿ.ಎಲ್. ಸುರೇಶ್ ಅವರು ದೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮದ ವಿದ್ಯುಕ್ತ ಉದ್ಘಾಟನೆ ಮಾಡಿ ಮಾತನಾಡುತ್ತಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಇಷ್ಟು ಉತ್ಸಾಹ ತೋರಿ ಹದಿನಾರು ಸಂಘ ಸಂಸ್ಥೆಗಳ ಅಧ್ಯಕ್ಷರುಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಇಷ್ಟೊಂದು ಕನ್ನಡಿಗರು ಒಂದು ಕಡೆ ಸೇರಿರುವುದು ಬಹಳ ಸಂತೋಷದ ವಿಷಯ. ಇದು ಒಂದು ಶುಭಾರಂಭವಾಗಿದೆ. ನಾವುಗಳು ದೆಹಲಿಗೆ ಬಂದಾಗ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಸರಿಯಾದ ಕಟ್ಟಡವೂ ಸಹ ಇರಲಿಲ್ಲ, ಆದರೆ ಈಗ ಸುಂದರ ಸಮುಚ್ಚಯದ ಜೊತೆಗೆ ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ಪೀಠವೂ ಕೂಡ ಆಗಿದೆ. ದೇಶದ ಪ್ರಧಾನಮಂತ್ರಿಗಳು ಕರ್ನಾಟಕ ಸಂಘದ ಕಾರ್ಯಕ್ರಮಕ್ಕೆ ಬಂದು ಎರಡು ಗಂಟೆ ಕಾಲ ಕಳೆದು ಹೋದ ನಂತರ ದೇಶದಾದ್ಯಂತ ನಮ್ಮ ಸಂಘದ ಬಗೆಗೆ ಹೆಚ್ಚಾಗಿ ಮಾತುಕತೆಗಳು ಶುರುವಾಗಿವೆ. ಸಂಘದ ಘನತೆ ಜನಪ್ರಿಯತೆ ಹೆಚ್ಚಿದೆ. ಇದಕ್ಕೆ ಶ್ರಮಿಸಿದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ಸಮಿತಿ ಪದಾಧಿಕಾರಿಗಳು ಅಭಿನಂದನಾರ್ಹರು ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಸಂಘದ ಕಾರ್ಯ ಚಟುವಟಿಕೆಗಳು ಅವಿರತವಾಗಿ ನಡೆಯುತ್ತಿವೆ, ಇವತ್ತಿನ ಈ ಕಾರ್ಯಕ್ರಮವು ಒಂದು ಮೈಲಿಗಲ್ಲಾಗಿದೆ. ದೆಹಲಿ ಕರ್ನಾಟಕ ಸಂಘ ಒಂದು ಮಾತ್ರ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇದರ ಅಂಗ ಸಂಸ್ಥೆಗಳಂತಿರುವ ದೆಹಲಿಯಲ್ಲಿ ನೆಲೆಸಿರುವ ಇತರ 16 ಕನ್ನಡಪರ ಸ್ಥಳೀಯ ಸಂಘ ಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ದೇಶ, ಭಾಷೆ, ನಾಡು, ನುಡಿಯ ಬೆಳವಣಿಗೆಗಾಗಿ ಕೆಲಸ ಮಾಡುತ್ತಿದ್ದಾವೆ ಅವರಿಗೆ ಅಭಿನಂದನೆಗಳು ಎಂದರು. 75 ಸಂವತ್ಸರಗಳನ್ನು ಪೂರೈಸಿರುವ ನಮ್ಮ ಸಂಘ ನಿಮ್ಮೆಲ್ಲರ ಸಹಕಾರದೊಂದಿಗೆ ನಮ್ಮ ಕಾರ್ಯಾವಧಿಯಲ್ಲಿ ದಾಖಲೆ ಕಾರ್ಯಕ್ರಮಗಳು ಮಾಡಬೇಕೆಂಬುದು ನಮ್ಮ ಸಂಘದ ಅಧ್ಯಕ್ಷರ ಅಭಿಲಾಷೆ. ಹೀಗಾಗಿ ಸಂಘದಲ್ಲಿ ಒಂದಕ್ಕಿಂತ ಒಂದು ಕಾರ್ಯಕ್ರಮಗಳು ಅತ್ಯುತ್ತಮವಾಗಿ ಮೂಡಿ ಬರುತ್ತಿವೆ. ಇವತ್ತಿನ ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮೂರ ಹಳ್ಳಿಯ ಹಬ್ಬ ಇದ್ದ ಹಾಗೆ, ಈ ಊರ ಹಬ್ಬದಂತಹ ಜಾತ್ರೆಯನ್ನು ನಾವು ನೀವೆಲ್ಲರೂ ಸೇರಿ ವಿಜೃಂಭಣೆಯಿಂದ ಆಚರಿಸಬೇಕೆಂದು ಕರೆ ನೀಡಿ ಭಾಗವಹಿಸುತ್ತಿರುವ ಎಲ್ಲ ಕಲಾವಿದರನ್ನು ಅಭಿನಂದಿಸುತ್ತಾ ಕರ್ನಾಟಕ ಸಂಘ ನಡೆಸುತ್ತಿರುವ ಕನ್ನಡ ಕಲಿಕಾ ಕೇಂದ್ರದಲ್ಲಿ 40ಕ್ಕೂ ಹೆಚ್ಚು ಕನ್ನಡಿಗರ ಮಕ್ಕಳು ನಿರಂತರವಾಗಿ ಕನ್ನಡ ಕಲಿಯುತ್ತಿರುವುದು ಬಹಳ ಸಂತೋಷದ ವಿಷಯ ಎಂದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸಂತೋಷ ಜೆ ಮತ್ತು ಶ್ರೀಮತಿ ಪೂಜಾ ರಾವ್ ಜಂಟಿಯಾಗಿ ನಡೆಸಿಕೊಟ್ಟರು. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ ಅಧ್ಯಕ್ಷೆ ಶ್ರೀಮತಿ ಸರೋಜಾ ಮಾಧವ ಅವರು ಮಾತನಾಡಿ ಈ ಕರ್ನಾಟಕ ಸಂಘ ನಮ್ಮ ನಾಡು ನುಡಿ ಅನ್ನು ಉಳಿಸಿಕೊಳ್ಳಲು ಬೆಳೆಸಿಕೊಳ್ಳಲು ಅದನ್ನು ತುಂಬಾ ಉತ್ಕರ್ಷಗೊಳಿಸಲು ಸತತ 75 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದ್ದು ಈ ವರ್ಷವಂತೂ ತುಂಬಾ ಅತ್ಯುತ್ತಮವಾದ ಕಾರ್ಯಕ್ರಮಗಳನ್ನು ಆಯೋಜಿಸಿದೆ, ನಮ್ಮ ಮಹಿಳೆಯರಿಗೆ ಒಂದು ತವರು ಮನೆಯ ವಾತಾವರಣವನ್ನೇ ಸೃಷ್ಟಿ ಮಾಡಿಕೊಡುತ್ತಿದೆ ಎಂದರು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಎಂ. ಕೃಷ್ಣಪ್ಪ ಅವರು ಮಾತನಾಡಿ, ನಾವೆಲ್ಲ ಇವತ್ತು ಹಬ್ಬದ ವಾತಾವರಣದಲ್ಲಿ ಇದ್ದೇವೆ, ಮೋದಿ ಅವರು ಉದ್ಘಾಟನೆ ಮಾಡಿದ ಅಮೃತ ಮಹೋತ್ಸವ ಕಾರ್ಯಕ್ರಮ ನಮ್ಮೆಲ್ಲರ ನೆನಪಿನಲ್ಲಿ ಇನ್ನು ಹಚ್ಚ ಹಸಿರಾಗಿದೆ, 250 ಜನ ಕಲಾವಿದರನ್ನು ಒಂದೆಡೆ ಸೇರಿಸಿ ಕಾರ್ಯಕ್ರಮ ಮಾಡುತ್ತಿರುವುದು ಪ್ರಥಮ ಬಾರಿಯಾಗಿದೆ, ಎಲ್ಲರಿಗೂ ಅಭಿನಂದನೆಗಳು ಎಂದರು.

ದೆಹಲಿ ತುಳು ಸಿರಿಯ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಬಹಳ ದಿನಗಳಿಂದ ನಿರೀಕ್ಷೆ ಮಾಡಿದ್ದಂತಹ ಒಂದು ಒಳ್ಳೆಯ ಕಾರ್ಯಕ್ರಮವನ್ನು ಕರ್ನಾಟಕ ಸಂಘ ಇಂದು ಆಯೋಜನೆ ಮಾಡಿದೆ ಎಂದರು.

ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಮಾತನಾಡುತ್ತಾ, ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರಂಭದಲ್ಲಿ ಸ್ಥಳೀಯ ಕನ್ನಡಿಗರಿಗೆ, ಕಲಾವಿದರಿಗೆ ಅವಕಾಶ ಸಿಗಲಿಲ್ಲವೆಂದು ಆಪಾದನೆ ಇಲ್ಲಿನ ಕನ್ನಡಿಗರ ಗ್ರೂಪ್‌ಗಳಲ್ಲಿ ಕೇಳಿ ಬರುತ್ತಿತ್ತು, ಈಗ, ಇಂದಿನ ಕಾರ್ಯಕ್ರಮದಲ್ಲಿ ಎಲ್ಲಾ ಸ್ಥಳೀಯ ಸಂಘ ಸಂಸ್ಥೆಗಳಿಗೆ ಪ್ರಾತಿನಿಧ್ಯ ಸಿಗುತ್ತಿರುವುದು ಆ ಅರೋಪಗಳಿಗೆ ತೆರೆ ಎಳೆದಂತಾಗಿದೆ, ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳು ಎಂದು ಹೇಳಿದರು.









ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಡಾ. ಅವನೀಂದ್ರನಾಥ ರಾವ್ ಅವರು ಮಾತನಾಡಿ ಸಂಘದ ಮಾಜಿ ಉಪಾಧ್ಯಕ್ಷನಾದ ತಮಗೆ ಸಂಘದ ಅಮೃತ ಕಾಲದಲ್ಲಿ ಮಾತನಾಡುವ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ, ಸ್ಥಳೀಯ ಕಲಾವಿದರಿಗೆ ಇನ್ನೂ ಹೆಚ್ಚು ಹೆಚ್ಚು ಅವಕಾಶಗಳು ಸಿಗಲಿ, ಹಿಂದೆ ನಡೆಯುತ್ತಿದ್ದ ನಾಟಕೋತ್ಸವಗಳು ಮತ್ತೆ ನಡೆಯುವಂತಾಗಲಿ ಎಂದು ಸಲಹೆ ನೀಡಿದರು.

ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಅನಂತರಾಮ ಅರಳಿ ಅವರು ಮಾತನಾಡಿ, ಎಲ್ಲ ಸ್ಥಳೀಯ ಸಂಘ ಸಂಸ್ಥೆಗಳಿಗೆ ಕಾರ್ಯಕ್ರಮ ನೀಡಲು ಅವಕಾಶ ಕೊಡುತ್ತಿರುವುದು, ಉತ್ತಮ ಕಾರ್ಯ ಸ್ಥಳೀಯ ಪ್ರತಿಭೆಗಳಿಗೆ ಇನ್ನು ಮುಂದೆಯೂ ಅವಕಾಶ ಸಿಗಲಿ ಎಂದು ಆಶಿಸಿದರು.

ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ.ವಿ. ಬಿರಾದರ ಅವರು ಮಾತನಾಡಿ, ಶ್ರೀ ಸಿ.ಎಂ. ನಾಗರಾಜ ಅವರು ದಿ. ಕೆ.ಆರ್. ನಾಗರಾಜ್‌ರವರು ಬೆಳೆಸಿದ ಕರ್ನಾಟಕ ಸಂಘವನ್ನು ಉತ್ತಮವಾಗಿ ಕನ್ನಡಿಗರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುವುದರೊಂದಿಗೆ, ಕನ್ನಡ ಕಲಿಕಾ ಕೇಂದ್ರದಂತಹ ಯೋಜನೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಅವರಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ ಎಂದರು.

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಅರವಿಂದ ಬಿಜ್ಜೈ ಅವರು ಮಾತನಾಡಿ, ನಮ್ಮ ಮಕ್ಕಳ ಸಾಹಿತ್ಯ ಪರಿಷತ್ತು ಕಳೆದ ಐದು ವರ್ಷಗಳಿಂದ ದೆಹಲಿಯಲ್ಲಿ ನೆಲೆಯೂರಿದೆ, ಸಾಂಸ್ಕೃತಿಕವಾಗಿ ಬೆಳೆಸುವಂತೆ ನಾವು ಮಕ್ಕಳನ್ನು ಭಾಷಿಕವಾಗಿ ಬೆಳೆಸುವಲ್ಲಿ ಸ್ವಲ್ಪ ಹಿಂದೆ ಇದ್ದೇವೆ, ಗುರುಗಾಂವ್‌ನಲ್ಲಿ ಮತ್ತು ದೆಹಲಿಯ ಒಂದೆರಡು ಕಡೆ ಕನ್ನಡ ಕಲಿಕಾ ಕೇಂದ್ರಗಳು ನಡೆಯುತ್ತಿರುವುದು ಈ ನಿಟ್ಟಿನಲ್ಲಿ ಉತ್ತಮ ಬೆಳವಣಿಗೆ. ಎಲ್ಲರಿಗೂ ಶುಭವಾಗಲಿ ಎಂದರು.

ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ ಅಧ್ಯಕ್ಷರಾದ ಶ್ರೀ ದೇವೇಂದ್ರಪ್ಪ ಅವರು ಮಾತನಾಡಿ ಪುಟಾಣಿಗಳು ತಮ್ಮ ಕಲೆಯನ್ನು ಪ್ರದರ್ಶಿಸಲು ಕಾತುರರಾಗಿದ್ದಾರೆ, ಕರ್ನಾಟಕ ಸಂಘ ಮಾತ್ರ ಸ್ಥಾನದಲ್ಲಿ ನಿಂತುಕೊಂಡು ಸ್ಥಳೀಯ ಕಲಾವಿದರಿಗೆ ಈ ರೀತಿಯ ಅವಕಾಶವನ್ನು ಇನ್ನು ಮುಂದೆಯೂ ನೀಡುತ್ತಿರಲಿ ಎಂದು ಆಶಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಕಳೆದ 75 ವರ್ಷಗಳಲ್ಲಿ ಕನ್ನಡ ಕಟ್ಟುವಂತ, ಕನ್ನಡ ಸಂಸ್ಕೃತಿಯನ್ನು ಉಳಿಸುವಂತಹ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ, ಈ ಬಾರಿಯ ಅಧ್ಯಕ್ಷರಾದ ನನ್ನ ಮಿತ್ರ ಶ್ರೀ ಸಿ.ಎಂ. ನಾಗರಾಜ ಅವರು ಅತ್ಯುತ್ತಮ ಕೆಲಸವನ್ನು ಮಾಡುತ್ತಿರುವುದು ಶ್ಲಾಘನೀಯ. ಪ್ರತಿಯೊಂದು ಸಂಘದ ಸಂಸ್ಥೆಗಳು ವಿವಿಧ ರೀತಿಯಲ್ಲಿ ಅವರ ಕ್ಷೇತ್ರಗಳಲ್ಲಿ ಕಾರ್ಯಗಳನ್ನು ಮಾಡಿಕೊಂಡು ಬರ್ತಾ ಇದ್ದಾವೆ, ಸ್ಥಳೀಯ ಸಂಘ ಸಂಸ್ಥೆಗಳಿಗೆ ಇಂತಹ ವೇದಿಕೆಯಲ್ಲಿ ಇನ್ನೂ ಹೆಚ್ಚು ಅವಕಾಶಗಳು ಸಿಗಲಿ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಗೌರವ ಕಾರ್ಯದರ್ಶಿಗಳಾದ ಡಾ. ಎಸ್.ಎಲ್. ಭಂಡಾರ್‌ಕರ್ ಅವರು ಮಾತನಾಡಿ ತಮ್ಮ ಸಾಹಿತ್ಯ ಪರಿಷತ್ತಿನ ಮಕ್ಕಳು ಮತ್ತು ಮಹಿಳೆಯರು ಸೇರಿ ಒಂದು ಕಾರ್ಯಕ್ರಮವನ್ನು ನೀಡುತ್ತಿದ್ದಾರೆ, ಎಲ್ಲ ಸಂಘ ಸಂಸ್ಥೆಗಳನ್ನು ಸೇರಿಸಿಕೊಂಡು ಉತ್ತಮವಾದ ಕಾರ್ಯಕ್ರಮ ಆಯೋಜಿಸುತ್ತಿರುವುದು ಅಭಿನಂದನಾರ್ಹ ಎಂದರು.

ದೆಹಲಿ ಗೌಡ್ ಸಾರಸ್ವತ ಸಮಾಜದ ಕಾರ್ಯದರ್ಶಿಗಳಾದ ಶ್ರೀ ಗಣೇಶ್ ಮಲ್ಯರವರು, ಮಾತನಾಡಿ ಕರ್ನಾಟಕ ಸಂಘವು ಅಮೃತ ಮಹೋತ್ಸವದ ಸಂದರ್ಭದಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಮಾಡುತ್ತಿದೆ, ಇಂದಿನ ಕಾರ್ಯಕ್ರಮ ದಲ್ಲಿ ಭಾಗವಹಿಸುತ್ತಿರುವ ಎಲ್ಲಾ ಸಂಘ ಸಂಸ್ಥೆಗಳಿಗೆ ಅಭಿನಂದನೆಗಳು ಎಂದರು.

ಜನಕಪುರಿ ಮಹಿಳಾ ಮಂಡಳಿ ಪ್ರಧಾನ ಕಾರ್ಯದರ್ಶಿ ಶ್ರೀಮತಿ ನಯನಾ ಮಾನಕಾಪುರೆ ಮಾತನಾಡಿ ಮಹಿಳಾ ಮಂಡಳಿಯ ಎಲ್ಲ ಸದಸ್ಯರಿಗೂ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೂ ಹಾಗೂ ಇತರ ಸಂಘ ಸಂಸ್ಥೆಗಳ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು.

ಗೋಕರ್ಣ ಮಂಡಲದ ಅಧ್ಯಕ್ಷೆ ಶ್ರೀಮತಿ ಶಾಲಿನಿಪ್ರಶಾಂತ್ ಅವರು ಮಾತನಾಡುತ್ತಾ ಕಾತುರದಿಂದ ಭಾಗವಹಿಸುತ್ತಿರುವ ಎಲ್ಲಾ ಸ್ಥಳೀಯ ಕಲಾವಿದರಿಗೂ, ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಶುಭಾಶಯ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಸ್ಥಳೀಯ ಸಂಘ ಸಂಸ್ಥೆಗಳು ಸುಮಾರು ವರ್ಷದಿಂದ ಕನ್ನಡದ ಸಾಂಸ್ಕೃತಿಕ ಸೇವೆಯನ್ನು ಮಾಡುತ್ತಿದ್ದು, ನಾಡು, ನುಡಿಯ ಜೊತೆಗೆ ದೇಶ







ಇಂದು ಉತ್ತುಂಗಕ್ಕೆರುತ್ತಿದ್ದು, ಭಾರತ ದೇಶ ಜಿ–20ಯ ನಾಯಕತ್ವದೊಂದಿಗೆ, ಚಂದ್ರಯಾನ–3ರ ಸಫಲ ಅಭಿಯಾನ ಮತ್ತು ಆದಿತ್ಯ. ಎಲ್–01 ಅನ್ನು ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿದ್ದು, ಇದಕ್ಕಾಗಿ ಶ್ರಮಿಸಿದ ದೇಶದ ಎಲ್ಲ ವಿಜ್ಞಾನಿಗಳನ್ನು ಅಭಿನಂದಿಸಿದರು. ನಾನು ಈ ಸ್ಥಾನಕ್ಕೆ ಬರಲು ಹಿರಿಯ ದೆಹಲಿ ಪೊಲೀಸ್ ಅಧಿಕಾರಿಗಳಾದ ಶ್ರೀ ಬಿ. ಎಲ್. ಸುರೇಶ್ ಅವರೇ ಕಾರಣ, ಅವರು ನನ್ನನ್ನು ಗುರುತಿಸಿ ನೀನು ಕನ್ನಡ ಸಂಘ ಮತ್ತು ಭಾಷೆಯ ಸೇವೆ ಮಾಡಲು ಸೂಕ್ತವಾದ ವ್ಯಕ್ತಿ ಎಂದು ಹಲವು ವರ್ಷಗಳ ಹಿಂದೆ ಹುರಿದುಂಬಿಸಿದರು. ಅದಕ್ಕೆ ಇಂದು ನಾನು ಕಿಂಚಿತ್ತೂ ಕಳಂಕ ತರದ ಹಾಗೆ ಕೆಲಸ ಮಾಡುತ್ತಿದ್ದೇನೆ. ಸ್ಥಳೀಯ ಕಲಾವಿದರಿಗೆ ಫೆಬ್ರವರಿಯಲ್ಲಿ ಪ್ರಧಾನಮಂತ್ರಿಗಳ ಸಮ್ಮುಖದಲ್ಲಿ ನಡೆದ ಅಮೃತ ಮಹೋತ್ಸವದ ಕಾರ್ಯಕ್ರಮದಲ್ಲಿ ಸಮಯದ ಅಭಾವದಿಂದಾಗಿ ಕಲಾ ಪ್ರದರ್ಶನ ನೀಡಲು ಸಾಧ್ಯವಾಗಿರಲಿಲ್ಲ, ಆದರೆ ಇಂದು ಮತ್ತು ನಾಳೆ ಸುಮಾರು ಏಳು ಎಂಟುಗಳ ಗಂಟೆಗಳ ಕಾಲ, ಅವರು ತಮ್ಮ ತಮ್ಮ ಕಲಾಪ್ರದರ್ಶನವನ್ನು ನೀಡಲು ವೇದಿಕೆ ಕಲ್ಪಿಸಿಕೊಡಲಾಗಿದೆ. ಮಾಜಿ ಅಧ್ಯಕ್ಷರುಗಳಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಡಾ. ವೆಂಕಟಾಚಲ ಹೆಗಡೆಯವರ ಕಾಲದಲ್ಲಿ ನಾನು ಕೂಡ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಸ್ಥಳೀಯ ಕಲಾವಿದರಿಗೆ ಕರ್ನಾಟಕದಿಂದ ಬಂದ ಹಿರಿಯ ಕಲಾ ನಟರು ತರಬೇತಿ ನೀಡಿದ್ದರ ಫಲವಾಗಿ ಇಂದು ಸ್ಥಳೀಯ ಕನ್ನಡಿಗರಲ್ಲಿ ಹಲವಾರು ಕಲಾ ಪ್ರತಿಭೆಗಳು ಬೆಳೆದು ನಿಂತಿವೆ ಎಂದು ದೆಹಲಿಯ ಕಲಾವಿದರ ಬಗ್ಗೆ ಮೆಚ್ಚುಗೆ ಮಾತನಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಡಿಸಿಪಿ ಶ್ರೀ ಬಿ.ಎಲ್. ಸುರೇಶ್ ಅವರನ್ನು, ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಗೌರವಿಸಿ ಅಭಿನಂದಿಸಲಾಯಿತು.

ಉದ್ಘಾಟನೆ ನಂತರ ಪ್ರಸ್ತುತಿಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು : 1. **ದೆಹಲಿ ಗೌಡ್ ಸಾರಸ್ವತ ಸಮಾಜ** : ನೃತ್ಯ, ಕಿರು ನಾಟಕ 2. **ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕ** : ಕಿರು ನಾಟಕ 3. **ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ** : ಸಮೂಹ ನೃತ್ಯ, ನೃತ್ಯರೂಪಕ 4. **ಜನಕಪುರಿ ಮಹಿಳಾ ಮಂಡಳಿ** : ಸಮೂಹ ನೃತ್ಯ ಸಮೂಹ ಗಾಯನ, ಕಿರು ನಾಟಕ 5. **ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕ** : ಸಮೂಹ ನೃತ್ಯ 6. **ಗುರುಗಾಂವ್ ಕನ್ನಡ ಸಂಘ** : ನೃತ್ಯ ಮತ್ತು ಸಮೂಹ ಗಾಯನ 7. **ಕನ್ನಡ ಸಾಹಿತ್ಯ ಪರಿಷತ್ತು, ದೆಹಲಿ ಘಟಕ** : ನೃತ್ಯರೂಪಕ, ಜ್ಞಾನಪೀಠ ಕವಿಗಳ ಕುರಿತು ಕಾರ್ಯಕ್ರಮ 8. **ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ** : ನೃತ್ಯ ಮತ್ತು ಸಮೂಹ ಗಾಯನ 9. **ಕನ್ನಡ ಸಾಹಿತ್ಯ ಪರಿಷತ್ತು, ದೆಹಲಿ ಘಟಕ** : ನೃತ್ಯ ರೂಪಕ 10. **ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್** : ಫ್ಯಾಷನ್ ಶೋ, ನೃತ್ಯ

ಎರಡನೇ ದಿನ ಮಧ್ಯಾಹ್ನದ ಭೋಜನಾನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂದುವರಿದವು. ಉಳಿದ ಸಂಘ ಸಂಸ್ಥೆಗಳಿಂದ ಪ್ರಸ್ತುತಿಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು : 1. **ಕರ್ನಾಟಕ ಭವನ** : ಸಮೂಹ ನೃತ್ಯ, ಮಕ್ಕಳ ಫ್ಯಾಶನ್ ಷೋ, 2. **ಗೋಕರ್ಣ ಮಂಡಲ** : ಕಿರು ನಾಟಕ, ಸಮೂಹ ಗಾಯನ 3. **ನಾಡಪ್ರಭು ಕೆಂಪೇಗೌಡ ಫೌಂಡೇಷನ್** : ನೃತ ರೂಪಕ, ಸಮೂಹ ನೃತ್ಯ, ಸಮೂಹ ಗಾಯನ 4. **ದೆಹಲಿ ತುಳು ಸಿರಿ** : ಕಿರು ನಾಟಕ, ಸಮೂಹ ನೃತ್ಯ, ಸಮೂಹ ಗಾಯನ 5. **ಜನಕಪುರಿ ಕನ್ನಡ**












**ಕೂಟ** : ಕಿರು ನಾಟಕ, ಸಮೂಹ ನೃತ್ಯ, ಸಮೂಹ ಗಾಯನ **6. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ** : ಕಿರು ನಾಟಕ, ಸಮೂಹ ನೃತ್ಯ, ಸಮೂಹ **ಗಾಯನ 7. ದೆಹಲಿ ಒಕ್ಕಲಿಗ ಗೌಡ ಸಂಘ** : ನೃತ್ಯ, ಸಮೂಹ ಗಾಯನ

**ಸಮಾರೋಪ ಸಮಾರಂಭ** : ಸೆಪ್ಟೆಂಬರ್ 3 ರಂದು ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕನ್ನಡದ ಖ್ಯಾತ ಜಾನಪದ ವಿದ್ವಾಂಸರು ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ ಸಂಘವು ಇವತ್ತಿನವರೆಗೆ ಹೊಸ ಹೊಸ ಆಯಾಮಗಳನ್ನು ಪಡೆದುಕೊಂಡು ಬೆಳೆಯುತ್ತಿದೆ. ಹಾಡಲು, ಕುಣಿಯಲು ಯಾವುದೇ ಸಮಯ, ಸಮಾರಂಭಗಳು ಬೇಕಾಗಿಲ್ಲ. ನಮ್ಮ ಮನಸ್ಸಿಗೆ ಸಂತಸ ನೀಡಲು ಹಾಡು, ಕುಣಿತ ಸದಾ ನಡೆಯುತ್ತಿರಬೇಕು. ಅದು ಇಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುತ್ತಿದೆ ಎಂದರು. ಅಧ್ಯಯನಗಳ ಪ್ರಕಾರ ಕಳೆದ 40 ವರ್ಷಗಳಲ್ಲಿ ಹಿಂದಿ ಭಾಷೆಯು 66 ಪ್ರತಿಶತ ಬೆಳವಣಿಗೆ ದರದೊಂದಿಗೆ ದೇಶದಲ್ಲಿ ಅತೀ ಹೆಚ್ಚು ಬೆಳವಣಿಗೆಯನ್ನು ಹೊಂದಿದರೆ, ದೇಶದಲ್ಲಿಯೇ ನಮ್ಮ ಕನ್ನಡ ಭಾಷೆಯು ಕೇವಲ 3.3 ಪ್ರತಿಶತ ಬೆಳವಣಿಗೆ ದರದ ಅತಿ ಕಡಿಮೆ ಬೆಳವಣಿಗೆ ಅಂಕಿ ಅಂಶವನ್ನು ಉಲ್ಲೇಖಿಸುವುದರ ಮೂಲಕ ಬಹಳ ಚಿಂತಾಜನಕದ ಸ್ಥಿತಿಗೆ ಬಂದು ನಿಂತಿದೆ. ಹೀಗಾಗಿ ನಾವು ನೀವೆಲ್ಲರೂ ಕನ್ನಡವನ್ನ ಮನೆ ಮನೆಗಳಲ್ಲಿಯೂ ಮಾತನಾಡಿ ನಮ್ಮ ಭಾಷೆಯನ್ನು ಬೆಳೆಸಿ, ಉಳಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗಿದೆ, ಬಸವಾದಿ ಶರಣರು, ದಾಸರು, ಕುವೆಂಪು, ಬೇಂದ್ರೆ, ಮಾಸ್ತಿಯವರು ಬರೆದಿರುವ ಸಾಹಿತ್ಯ ಶ್ರೀಮಂತಿಕೆ ಭಾಷೆ, ಕನ್ನಡ, ನಮ್ಮ ನಿಮ್ಮೆಲ್ಲರ ಮುಂದೆ ಸಂಕಷ್ಟದಲ್ಲಿರುವಾಗ ಅದನ್ನು ಬೆಳೆಸಿ ಉಳಿಸುವ ಸಂಕಲ್ಪ ಬದ್ಧತೆ ನಮ್ಮದಾಗಬೇಕೆಂದು ವಿದ್ವಾಂಸರು ಕಿವಿಮಾತು ಹೇಳಿದರು.

ಕಾರ್ಯಕ್ರಮಕ್ಕೆ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದಂತಹ ಎನ್.ಎಸ್.ಜಿ. ಯ ನಿವೃತ್ತ ಕಮಾಂಡಂಟ್ ಅಧಿಕಾರಿಗಳು ಮತ್ತು ಹಿರಿಯ ದೆಹಲಿ ಕನ್ನಡಿಗರಾದ ಶ್ರೀ ಬಿ.ಎಸ್. ಕಲ್ಲೂರ್ ಅವರು ಮಾತನಾಡಿ ಹದಿನಾರು ಸಂಘ ಸಂಸ್ಥೆಗಳನ್ನು ಒಟ್ಟುಗೂಡಿಸಿಕೊಂಡು ಕಾರ್ಯಕ್ರಮವನ್ನು ಮಾಡುತ್ತಿರುವುದು ಶ್ಲಾಘನೀಯ. ಸೇವಾವಧಿಯಲ್ಲಿ ಇದ್ದುಕೊಂಡು ಕಳೆದ 15–20 ವರ್ಷಗಳಿಂದ ಪ್ರಧಾನ ಮಂತ್ರಿ ಮೋದಿಯವರನ್ನು ಬಹಳ ಚೆನ್ನಾಗಿ ಅರಿತ್ತಿದ್ದೇನೆ. ಮಹಾನ್ ವ್ಯಕ್ತಿಯ ತಲೆಯಲ್ಲಿ ಡೆಮಾಕ್ರಸಿಯ ಪ್ರಾಡಕ್ಟ್ ಆಗಿರುವಂತಹ ನಮ್ಮ ಕರ್ನಾಟಕದ ಬಸವಣ್ಣನವರ ಅನುಭವ ಮಂಟಪದ ವಿಚಾರಗಳನ್ನು ಬಿತ್ತಿರುವುದು ನಮ್ಮೆಲ್ಲರ ಹೆಮ್ಮೆ, ದೇಶದ ಪ್ರಧಾನಮಂತ್ರಿಗಳನ್ನು ಕರ್ನಾಟಕ ಸಂಘಕ್ಕೆ ಮುಖ್ಯ ಅತಿಥಿಗಳಾಗಿ ಕರೆಸಿದ್ದು ನಿಮ್ಮ ದೃಢ ನಿರ್ಧಾರವನ್ನು ಎತ್ತಿ ತೋರಿಸುತ್ತದೆ ಎಂದು ಸಂಘದ ಅಧ್ಯಕ್ಷರನ್ನು ಮತ್ತು ಪದಾಧಿಕಾರಿಗಳನ್ನುಅಭಿನಂದಿಸಿದರು.

ಹೀಗೆ ವಿದ್ವಾಂಸರ ಸಲಹೆ, ಹಿರಿಯ ಅಧಿಕಾರಿಗಳ ಅನುಭವಗಳು, ಅಧ್ಯಕ್ಷರ ಗುರಿ ಉದ್ದೇಶಗಳು, ಕಾರ್ಯದರ್ಶಿ, ಪದಾಧಿಕಾರಿಗಳ ಆಶಯಗಳು, ಕಲಾವಿದರುಗಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರೇಕ್ಷಕರ ಪ್ರೋತ್ಸಾಹ, ಸಿಳ್ಳೆ, ನಗು ಮತ್ತು ಕರತಾಡನಗಳು, ಎರಡು ದಿನಗಳ ಕಾಲ ದೆಹಲಿ ಸ್ಥಳೀಯ ಕನ್ನಡಿಗರನ್ನ ಸಾಂಸ್ಕೃತಿಕ ಕಡಲಲ್ಲಿ ತೇಲಿಸಿದವು. ಸಂಘದ ವೇದಿಕೆಯ ಮೇಲೆ 16 ಸಂಘ ಸಂಸ್ಥೆಗಳ 45 ವಿವಿಧ ಪ್ರಕಾರಗಳ ಪ್ರಸ್ತುತಿ ಕಲಾಪ್ರದರ್ಶನ ನೀಡಿದ ಸುಮಾರು 250ಕ್ಕೂ ಹೆಚ್ಚು ಮಕ್ಕಳನ್ನು, ಮಹಿಳೆಯರನ್ನು ಪೋಷಕರನ್ನು, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರುಗಳನ್ನು, ಪದಾಧಿಕಾರಿಗಳನ್ನು ಮತ್ತು ಸದಸ್ಯರನ್ನು ಕರ್ನಾಟಕ ಸಂಘದಿಂದ ಗೌರವ ಪದಕ ಮತ್ತು ಸ್ಮರಣಿಕೆಯನ್ನು ನೀಡಿ ಅಭಿನಂದಿಸಲಾಯಿತು.

ಎರಡು ದಿನಗಳ ಕಾಲ ಸುಮಾರು ಹತ್ತಕ್ಕೂ ಹೆಚ್ಚು ಗಂಟೆಗಳ ಕಾಲ ಮೂಡಿಬಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್ ಶಶಿಕುಮಾರ್ ಹಾಗೂ ಪೂಜಾ ರಾವ್, ಜಂಟಿ ಕಾರ್ಯದರ್ಶಿಗಳಾದ ಸುಮಿತಾ ಮುರಗೋಡ ಮತ್ತು ಬಿ. ನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಸಂತೋಷ ಜೆ, ಮಾಲಿನಿ ಪ್ರಹ್ಲಾದ್, ಸವಿತಾ ನೆಲ್ಲಿ, ಪ್ರಭಾಕರ್ ಮಡ್ಡಿತೋಟ, ಶಿವಪ್ಪ ಎಂ, ಕೆ.ಎಸ್. ಮೂರ್ತಿ ಅವರು ಕಾರ್ಯಕ್ರಮದ ಸ್ವಾಗತ, ನಿರೂಪಣೆ, ಅತಿಥಿಗಳ ಪರಿಚಯ, ಪಾತ್ರ ಪರಿಚಯ, ಮತ್ತು ವಂದನಾರ್ಪಣೆ ನಿರ್ವಹಿಸುವ ಮೂಲಕ ಸಮರ್ಪಕವಾಗಿ ನಡೆಸಿಕೊಟ್ಟರು.

ಒಟ್ಟಾರೆಯಾಗಿ ಶನಿವಾರ ಮತ್ತು ಭಾನುವಾರ ಎರಡು ದಿನ ದೆಹಲಿಯ ಕನ್ನಡಿಗರಿಗೆ ರಜಾ ದಿನವಾಗಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅವರು ಬಂದು ಭಾಗವಹಿಸಿ, ಕಲಾವಿದರರಿಗೆ ಪ್ರೋತ್ಸಾಹ ನೀಡಿ ಎಲ್ಲ ಸಾಂಸ್ಕೃತಿಕ ಮನೋರಂಜನೆಗಳನ್ನು ಮನದುಂಬಿ ಅನುಭವಿಸುವಂತಾಯಿತು.

***ಅಭಿಮತ ವರದಿ***








ಗುರುಗ್ರಾಂ ಕನ್ನಡ ಸಂಘ, ಗುರುಗ್ರಾಂ









ದೆಹಲಿ ಪ್ರೋಗ್ರೆಸ್ ಕನ್ನಡಿಗರ ಕಲ್ಯಾಣ ಸಮಿತಿ, ನವದೆಹಲಿ









ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ನವದೆಹಲಿ









ಜನಕಪುರಿ ಕನ್ನಡ ಕೂಟ, ನವದೆಹಲಿ












ಜನಪ್ರಿಯ ಮಹಿಳಾ ಮಂಡಳಿ













ಗೋಕುಲ ಮಂಡಳಿ







ಕರ್ನಾಟಕ ಭವನ

ಕನ್ನಡ ಸಾಹಿತ್ಯ ಪರಿಷತ್ತು, ದೆಹಲಿ ಘಟಕ










ದೆಹಲಿ ಒಕ್ಕಲಿಗ ಗೌಡ ಸಂಘ, ನವದೆಹಲಿ













ಗೌಡ್ ಸಾರಸ್ವತ ಸಮಾಜ





ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಘಟಕ





ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್ ವತಿಯಿಂದ ಕರ್ನಾಟಕ ಸಂಘದಲ್ಲಿ ಶ್ರೀಗೌರಿ ಗಣೇಶ ಪೂಜೆ ಹಾಗೂ ಭಜನೆಯನ್ನು ಮಾಡಲಾಯಿತು ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀಮತಿ ಸರೋಜಮಾಧವ, ಕಾರ್ಯದರ್ಶಿ ಶ್ರೀಮತಿ ಶೋಭಗೌಡ ಹಾಗೂ ಹಿರಿಯರಾದ ಶ್ರೀಮತಿ ಸುಮಿತ್ರಾ ರಾವ್, ಡಾ. ಅಹಲ್ಯಾ ಚಿಂತಾಮಣಿ. ಹಾಗೂ ಸದಸ್ಯರು ಉಪಸ್ಥಿತರಿದ್ದರು. ಡಾ. ಅಹಲ್ಯಾಚಿಂತಾಮಣಿಯವರು ಎಲ್ಲರಿಗೂ ಭೋಜನ ವ್ಯವಸ್ಥೆ ಮಾಡಿ ತಾಂಬೂಲ ನೀಡಿ ಸತ್ಕರಿಸಿದರು.

## ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ಸಂಘದಲ್ಲಿ ರಾಷ್ಟ್ರಧ್ವಜಾರೋಹಣಾ ಕಾರ್ಯಕ್ರಮ ಮತ್ತು ವಿಜೃಂಭಿಸಿದ ಕಲ್ಯಾಣ ಕರ್ನಾಟಕ ಉತ್ಸವ

# ಸಮಸ್ತ ಕರ್ನಾಟಕಕ್ಕೆ ಕಲ್ಯಾಣ ಕೊಡುವಂತಹ ನಾಡಾಗಲಿ ಕಲ್ಯಾಣ ಕರ್ನಾಟಕ-ಶ್ರೀ ಅರವಿಂದ ಜತ್ತಿ



ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ದಿ. 17.09.2023 ರಂದು ಬೆಳಿಗ್ಗೆ 9.00 ಗಂಟೆಗೆ ಧ್ವಜಾರೋಹಣ ಮಾಡಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಕಲ್ಯಾಣ ಕರ್ನಾಟಕ ವಿಮೋಚನಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಮಾತನಾಡಿ ಕಲ್ಯಾಣ ಕರ್ನಾಟಕ (ಆಗಿನ ಹೈದರಾಬಾದ್ ಕರ್ನಾಟಕ) ವಿಮೋಚನಾ ದಿನವನ್ನು ನಾವಿಂದು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸುವುದರೊಂದಿಗೆ ಆಚರಿಸುತ್ತಿದ್ದೇವೆ. ದೇಶಕ್ಕೆ ಆ. 15, 1947ರಲ್ಲಿ ಸ್ವಾತಂತ್ರ್ಯ ಸಿಕ್ಕಿದರೂ ಸಹಾ, ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿ ಕಲ್ಯಾಣ ಕರ್ನಾಟಕದ ಆ ಭಾಗವು ಸ್ವಾತಂತ್ರ್ಯ ಪಡೆಯುವಲ್ಲಿ ವಿಳಂಬವಾಗಿ ಸೆ. 17, 1948ರಲ್ಲಿ ಸ್ವಾತಂತ್ರ್ಯ ಹೊಂದಿ ಭಾರತ ಗಣರಾಜ್ಯದ ಒಕ್ಕೂಟದಲ್ಲಿ ವಿಲೀನವಾಯಿತು. ಅದಕ್ಕೆ ಕಾರಣರಾದ ಸರ್ದಾರ್ ವಲ್ಲಭಬಾಯಿ ಪಟೇಲ್‌ರವರೂ ಸೇರಿದಂತೆ ಶ್ರಮಿಸಿದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುತ್ತಾ ಇಂದು ನಾವು ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮವನ್ನು ನಮ್ಮ ಸಂಘದಲ್ಲಿ ಆಯೋಜಿಸಿದ್ದೇವೆ.ಈ ಧ್ವಜಾರೋಹಣದಲ್ಲಿ ಭಾಗಿಯಾಗಿರುವ ಎಲ್ಲರಿಗೂ ಧನ್ಯವಾದಗಳು ಎಂದರು.

ಧ್ವಜಾರೋಹಣೆ ನಡೆಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಕಲ್ಯಾಣ ಕರ್ನಾಟಕ ಸಮಗ್ರ ಕರ್ನಾಟಕವಾಗಿದೆ, ಆಗಿನ ನಾಲ್ಕು, ಈಗಿನ ಏಳು ಜಿಲ್ಲೆಗಳ ಕರ್ನಾಟಕದ ಆ ಭಾಗವು ದೇಶವು ಸ್ವಾತಂತ್ರ್ಯ ಹೊಂದಿದ ಒಂದು ವರ್ಷ ಒಂದು ತಿಂಗಳ ನಂತರ ಸ್ವಾತಂತ್ರ್ಯ ಪಡೆದಿದ್ದು ನಿಜಾಮರ ಆಳ್ವಿಕೆಯ ಅಧಿಕಾರ ಶಾಹಿ, ದೌರ್ಜನ್ಯ ಮತ್ತು ದುರುದ್ದೇಶಗಳು ಕಾರಣವಾಗಿತ್ತು. ಆಗಿನ ಹೈದರಾಬಾದ್ ಕರ್ನಾಟಕದ ವಿಮೋಚನೆಗಾಗಿ ಸ್ವಾಮಿ ರಾಮಾನಂದ ತೀರ್ಥರ ನೇತೃತ್ವದಲ್ಲಿ ನಡೆದ ಅಹಿಂಸಾತ್ಮಕ ಚಳುವಳಿ, ಹೋರಾಟಗಾರರ ಸಜೀವದಹನ, ನಿಜಾಮನ ರಜಾಕಾರ ಪಡೆಯ ವಿರುದ್ಧ ಅಸಂಖ್ಯಾತ ಪ್ರಜೆಗಳ ಸಂಘಟನೆ, ಹೋರಾಟ ತ್ಯಾಗ, ಬಲಿದಾನಗಳಿಂದಾಗಿ ನಿಜಾಮರ ಹಿಡಿತದಿಂದ ಮುಕ್ತವಾಗಿ ಆ ಭಾಗದ ಜನರು ಸ್ವಾತಂತ್ರ್ಯ ಪಡೆದಿದ್ದಾರೆ.

ಇದಕ್ಕೆ ಕಾರಣಕರ್ತರಾದ ಭಾರತ ಏಕೀಕರಣದ ರೂವಾರಿ ಉಕ್ಕಿನ ಮನುಷ್ಯ ಸರದಾರ್ ವಲ್ಲಭಭಾಯಿ ಪಟೇಲ್ ಹಾಗು ವಿಮೋಚನೆಗಾಗಿ ಶ್ರಮಿಸಿದ ಎಲ್ಲ ಹೋರಾಟಗಾರರನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ದೆಹಲಿ ಕರ್ನಾಟಕ ಸಂಘದ ಅಮೃತ ಕಾಲದಲ್ಲಿ ಕಲ್ಯಾಣ ಕರ್ನಾಟಕದ ಅಮೃತ ಮಹೋತ್ಸವ ನಡೆಯುತ್ತಿರುವುದು ವಿಶೇಷವಾಗಿದೆ. ದೆಹಲಿ ಕರ್ನಾಟಕ ಸಂಘ ಆ ಭಾಗದವರೊಂದಿಗೆ ಸದಾ ಇರುತ್ತದೆ ಎಂದರು. ಈ ಕಲ್ಯಾಣ ಕರ್ನಾಟಕ ಉತ್ಸವ ಅಂಗವಾಗಿ ನಮ್ಮ ಸಂಘದಲ್ಲಿ ಇಂದು ಸಂಜೆ ವಿಶೇಷವಾದ ಸಾಂಸ್ಕೃತಿಕ ಕಾರ್ಯಕ್ರಮ ಜಾನಪದ ಝೇಂಕಾರ ಆಯೋಜಿಸಿದ್ದೇವೆ. ಈ ಕಾರ್ಯಕ್ರಮದಲ್ಲಿ ಈಗಾಗಲೇ ನಮ್ಮೊಂದಿಗೆ ಇಲ್ಲಿ ಉಪಸ್ಥಿತರಿರುವ ಪ್ರಸಿದ್ಧ ಜಾನಪದ ಕಲಾವಿದರಾದ ಮಳವಳ್ಳಿ ಡಾ. ಎಂ. ಮಹಾದೇವ ಸ್ವಾಮಿಯವರು ಅತ್ಯುತ್ತಮ ಪ್ರಸ್ತುತಿ ನೀಡಲಿದ್ದಾರೆ. ತಾವೆಲ್ಲರೂ ಭಾಗಿಯಾಗಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಿ, ಧ್ವಜಾರೋಹಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಕಲ್ಯಾಣ ಕರ್ನಾಟಕ ಉತ್ಸವದ ಶುಭಾಶಯಗಳನ್ನು ಮತ್ತು ವಂದನೆಗಳನ್ನು ಅರ್ಪಿಸಿದರು.

ದೆಹಲಿಯ ಹಿರಿಯ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ, ಶ್ರೀ ಎನ್.ಎ. ಮಾಧವ, ಡಾ. ಎಸ್. ಎಲ್. ಭಂಡಾರ್‌ಕರ್, ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿಗಳಾದ, ಐ.ಆರ್.ಎಸ್. ಅಧಿಕಾರಿ ಶ್ರೀ ಅಮರೇಶ್ ಪಾಟೀಲ್, ಜೆ.ಎನ್.ಯು. ಪ್ರೊ. ಡಾ. ಸಂಗಮೇಶ್, ಶ್ರೀ ನರಸಿಂಹ ಮೂರ್ತಿ, ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್, ಖಜಾಂಚಿ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ, ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀ ಪ್ರಭಾಕರ ಮಡ್ಡಿತೋಟ್, ಶ್ರೀ ಶಿವಪ್ಪ ಶ್ರೀ ಕೆ.ಎಸ್. ಮೂರ್ತಿ, ಶ್ರೀ ಸಂತೋಷ ಜೆ., ಸಂಘದ ಸದಸ್ಯರು, ಗುರುಗಾಂವ್ ಕನ್ನಡ ಸಂಘದ ಪದಾಧಿಕಾರಿಗಳು, ಮಕ್ಕಳು, ಮಹಿಳೆಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ದೆಹಲಿ ಎನ್.ಸಿ.ಆರ್.ನ ಕನ್ನಡಿಗರು, ಸಂಘದ ವ್ಯವಸ್ಥಾಪಕರು, ಸಿಬ್ಬಂದಿ ವರ್ಗದವರು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿದ್ದರು.

ಸಂಘದ ಸಭಾಂಗಣದಲ್ಲಿ ಸಂಜೆ ನಡೆದ ಜಾನಪದ ಝೇಂಕಾರ ಮತ್ತು ಸಭಾ ಕಾರ್ಯಕ್ರಮಗಳನ್ನೊಳಗೊಂಡ ಕಲ್ಯಾಣ ಕರ್ನಾಟಕ ಉತ್ಸವವು ಅತ್ಯಂತ ಸಂಭ್ರಮಪೂರ್ಣವಾಗಿ ವಿಜೃಂಭಿಸಿತು.

ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಕಲ್ಯಾಣ ಕರ್ನಾಟಕದ ಅಮೃತ ಮಹೋತ್ಸವವನ್ನು ಆಚರಿಸುವ ಹಿನ್ನೆಲೆಯಲ್ಲಿ ಏರ್ಪಡಿಸಲಾದ ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, ರಾಜ್ಯ ಪ್ರಶಸ್ತಿ ಪುರಸ್ಕೃತರೂ, ಆಕಾಶವಾಣಿ 'ಎ' ಗ್ರೇಡ್ ಮತ್ತು ಅಂತರರಾಷ್ಟ್ರೀಯ ಮಟ್ಟದ ಕಲಾವಿದರಾದ ಮಳವಳ್ಳಿ ಡಾ. ಎಂ. ಮಹಾದೇವಸ್ವಾಮಿ ಮತ್ತು ಸಂಗಡಿಗರಿಂದ ಜನಪ್ರಿಯ ಜಾನಪದ ಗೀತೆಗಳನ್ನೊಳಗೊಂಡ 'ಜಾನಪದ ಝೇಂಕಾರ' ದೆಹಲಿ ಕನ್ನಡಿಗರ ಮನರಂಜಿಸಿತು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸಂಸದರಾದ ಶ್ರೀ ಈರಣ್ಣ ಕಡಾಡಿ, ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರ ಆಪ್ತ ಕಾರ್ಯದರ್ಶಿ ಶ್ರೀ ಅಮರೇಶ್ ಪಾಟೀಲ್ ಐ.ಆರ್.ಎಸ್., ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಮತ್ತು ಕಲಾವಿದ ಡಾ. ಎಂ. ಮಹಾದೇವಸ್ವಾಮಿ ವೇದಿಕೆಯಲ್ಲಿದ್ದರು. ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಸುಮಿತಾ ಮುರಗೋಡ ಹಾಗೂ ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ್ ಅವರು ಜಂಟಿಯಾಗಿ ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು.

ವೇದಿಕೆಯಲ್ಲಿದ್ದವರೊಂದಿಗೆ ದೀಪ ಪ್ರಜ್ವಲನೆ ಹಾಗು ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಮಾನ್ಯ ರಾಜ್ಯ ಸಭಾ ಸಂಸದರಾದ ಶ್ರೀ ಈರಣ್ಣ ಕಡಾಡಿ ಉದ್ಘಾಟಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಆಗಮಿಸಿದ್ದ ಮುಖ್ಯ



ಅತಿಥಿಗಳನ್ನು ಸಂಘದ ಹಾಗೂ ನೆರೆದಿದ್ದ ಎಲ್ಲರ ಪರವಾಗಿ ಹಾರ್ದಿಕವಾಗಿ ಸ್ವಾಗತಿಸಿದರು. ಪ್ರಾಸ್ತಾವಿಕ ಮಾತನಾಡುತ್ತಾ ಹೇಗೆ ಭಾರತ ರಾಷ್ಟ್ರ ವೈವಿಧ್ಯಮಯ ಪ್ರದೇಶಗಳಿಂದ ಕೂಡಿದೆಯೋ ಹಾಗೆಯೇ ನಮ್ಮ ಕರ್ನಾಟಕ ರಾಜ್ಯವು ಕಲ್ಯಾಣ ಕರ್ನಾಟಕದಂತ ವೈವಿಧ್ಯಮಯ ಪ್ರದೇಶಗಳನ್ನು ಹೊಂದಿದೆ. 75 ಸಂವತ್ಸರಗಳು ಪೂರ್ಣವಾದ ಕಲ್ಯಾಣ ಕರ್ನಾಟಕ ವಿಮೋಚನಾ ದಿನವನ್ನು ರಾಜ್ಯ ಸರ್ಕಾರವೂ ಈಗ ಅಧಿಕೃತವಾಗಿ ಆಚರಿಸುತ್ತಿದೆ. ನಮ್ಮ ಸಂಘದ ಅಮೃತ ಮಹೋತ್ಸವ ಕಾಲಘಟ್ಟದಲ್ಲಿ ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣ ಕರ್ನಾಟಕದ ಅಮೃತ ಮಹೋತ್ಸವದ ಅಂಗವಾಗಿ ನಮ್ಮ ಸಂಘದಲ್ಲಿ ಇಂದು ಆಯೋಜಿಸಲಾಗಿರುವ ಈ ಕಾರ್ಯಕ್ರಮ ಅತ್ಯಂತ ಸಾಂದರ್ಭಿಕವಾಗಿದೆ ಎಂದರು.

ಮುಖ್ಯ ಅತಿಥಿ ಶ್ರೀ ಈರಣ್ಣ ಕಡಾಡಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಇಂದು ಸುಮಧುರವಾಗಿ ಜಾನಪದ ಗೀತೆಗಳನ್ನು ಹಾಡಿದ ಡಾ. ಎಂ. ಮಹಾದೇವ ಸ್ವಾಮಿ ಅವರು ಇಲ್ಲಿನ ಜನರನ್ನು ಮಂತ್ರಮುಗ್ಧರನ್ನಾಗಿಸಿದರು ಎಂದರು. ತಾವು ಮೊದ ಮೊದಲು ದೆಹಲಿಗೆ ಬಂದಾಗ ಎಲ್ಲೋ ಇದ್ದೇವೆ ಎನಿಸಿತ್ತು. ಆದರೆ ಕಳೆದ 2–3 ವರ್ಷಗಳಿಂದ ಇಲ್ಲಿನ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಂತರ ಕರ್ನಾಟಕದಲ್ಲೇನೇ ಇದ್ದೇನು ಎನಿಸುತ್ತಿದೆ, ಸಂಘದ ರಚನಾತ್ಮಕ ಕಾರ್ಯಕ್ರಮಗಳು ಸ್ವಾತ್ಯಾರ್ಹ, ಇತಿಹಾಸದಲ್ಲಿ ರಾಜರ ಆಳ್ವಿಕೆ, ಪರಕೀಯರ ಪ್ರದೇಶ, ದಾಳಿ, ದಬ್ಬಾಳಿಕೆ, ಉಕ್ಕಿನ ಮನುಷ್ಯ ಸರ್ದಾರ್ ಪಟೇಲರ ಮುಂದಾಳತ್ವದಲ್ಲಿ ಕಾರ್ಯ ಯೋಜನೆ, ಉಗ್ರ ಹೋರಾಟ, ಚಳುವಳಿ, ತ್ಯಾಗ ಬಲಿದಾನಗಳ ಫಲವಾಗಿ ಹೈದರಾಬಾದ್ ಕರ್ನಾಟಕಕ್ಕೆ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಒಂದು ವರ್ಷದ ನಂತರ ಸ್ವಾತಂತ್ರ್ಯ ಸಿಕ್ಕಿತ್ತು. ನಮಗೆ ಸ್ವಾತಂತ್ರ್ಯ ಪುಕ್ಕಟೆಯಾಗಿ ಸಿಕ್ಕಿರಲಿಲ್ಲ. ಇದಕ್ಕೆ ಅನೇಕ ಸ್ವಾತಂತ್ರ್ಯ ಹೋರಾಟಗಾರರು ತ್ಯಾಗ, ಬಲಿದಾನ ನೀಡಿದ್ದರು. ಇದನ್ನು ಉಳಿಸಿ, ಮುಂದಿನ ಪೀಳಿಗೆಗೆ ಇತಿಹಾಸದ ಅರಿವನ್ನು ನೀಡಿ, ನಾಡಿನ ಕಲೆ, ಸಂಸ್ಕೃತಿ, ಆಚಾರ ವಿಚಾರಗಳನ್ನು ಮುಂದುವರಿಸಿ ಬೆಳೆಸಿಕೊಂಡು ಹೋಗಬೇಕಾಗಿದೆ ಎಂದು ಕರೆ ನೀಡಿದರು. ಸಂಸದನಾಗಿ ಕಳೆದ ಮೂರು ವರ್ಷಗಳಲ್ಲಿ ತಾವು ನೋಡಿದ ಹಾಗೆ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಉತ್ತಮ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಶ್ರೀ ಅರವಿಂದ ಜತ್ತಿಯವರು ಮಾತನಾಡುತ್ತಾ ತಮ್ಮ ತಂದೆಯವರಾದ ಮಾಜಿ ಕನ್ನಡದ ರಾಷ್ಟ್ರಪತಿ, ಉಪರಾಷ್ಟ್ರಪತಿಗಳಾದ ದಿವಂಗತ ಶ್ರೀ ಬಿ.ಡಿ. ಜತ್ತಿಯವರು 1977ರಲ್ಲಿ ದೆಹಲಿ ಕರ್ನಾಟಕ ಸಂಘದ ಕಟ್ಟಡವನ್ನು ಉದ್ಘಾಟನೆ ಮಾಡಿದ್ದನ್ನು ನೆನಪು ಮಾಡಿಕೊಂಡು ತಮಗೆ ಹಾಗು ಸಂಘದ ಬಗ್ಗೆ ಇರುವ ವಿಶೇಷ ಭಾಂದವ್ಯವನ್ನು ತಿಳಿಸಿದರು. ಹೈದರಾಬಾದ್ ಕರ್ನಾಟಕದ ವಿಮೋಚನೆಯ ಇತಿಹಾಸವನ್ನು ವರ್ಣಿಸುತ್ತಾ ನಿಜಾಮರ ದಬ್ಬಾಳಿಕೆಯ ಆಳ್ವಿಕೆ, ಗೋರ್ಟದಲ್ಲಿ ನಡೆದ 800 ಜನರ ಹತ್ಯಾಕಾಂಡ, ಸಜೀವ ದಹನ, ರಜಾಕಾರರ ಹಿಂಸೆ, ಅತ್ಯಾಚಾರ, ಸ್ವಾಮಿ ರಮಾನಂದ ತೀರ್ಥರ ಚಳುವಳಿ, ಭೀಮಣ್ಣ ಖಂಡ್ರೆಯವರ ಹೋರಾಟ, ಸರ್ದಾರ್ ವಲ್ಲಭಭಾಯಿ ಪಟೇಲರ ಮುಂದಾಳುತನದಲ್ಲಿ, Standstill Agreement ಬಗ್ಗೆ ಡಾ. ಭೀಮರಾವ್ ಅಂಬೇಡ್ಕರ್ ಅವರ ನಿಲುವನ್ನು ತೆಗೆದುಕೊಂಡು ಪೋಲೀಸ್ ಕಾರ್ಯಾಚರಣೆ (Operation Polo) ಮಾಡಿ ನಿಜಾಮನ ಹೆಡೆಮುರಿ ಕಟ್ಟಿ ಕಲ್ಯಾಣ ಕರ್ನಾಟಕ ವಿಮೋಚನೆಯಾಗಿದ್ದನ್ನು ವಿಸ್ತೃತವಾಗಿ ತಿಳಿಸಿದರು. ಹಾಗೇನೇ, ದೇಶದ ಪ್ರಧಾನಿ ಮೋದಿಯವರು, ಹೊಸ ಪಾರ್ಲಿಮೆಂಟ್ ಕಟ್ಟಡದ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯ ಸಮಯ ಬಸವಣ್ಣನವರ ಅನುಭವ ಮಂಟಪವನ್ನು ಉಲ್ಲೇಖಿಸಿದ್ದನ್ನು, G-20 ಶೃಂಗ ಸಭೆ ನಡೆದ ಸಭಾಂಗಣದ ಭಾರತ್ ಮಂಡಪಂನ ಹೆಸರಿನ ಹಿನ್ನೆಲೆ ಪ್ರೇರಣೆ ಅನುಭವ ಮಂಟಪದಿಂದ ಪಡೆದಿದ್ದನ್ನು ಪ್ರಧಾನಿಯವರು ಸ್ವತಃ ತಮ್ಮ ಭಾಷಣದಲ್ಲಿ ತಿಳಿಸಿದ್ದರು, ಇದು ಭಗವಾನ್ ಬಸವೇಶ್ವರರ ಮೇಲೆ, ಅವರಿಗೆ ಇರುವ ಗೌರವ ಮತ್ತು ಅವರ ತತ್ವಗಳ ಮೇಲಿರುವ ವಿಶ್ವಾಸವನ್ನು ಬಿಂಬಿಸುತ್ತದೆ ಎಂದರು. ವಿಶ್ವದಾದ್ಯಂತ ಕನ್ನಡಿಗರು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿ ವಿವಿಧ ಸಂಸ್ಥೆಗಳಲ್ಲಿ : ಇಸ್ರೋ, ಇನ್ಫೋಸಿಸ್, ವಿಪ್ರೊನಲ್ಲಿ ತಮ್ಮ ಅಸಾಧಾರಣ ಜ್ಞಾನ ಮತ್ತು ಸಾಧನೆಯಿಂದ ದೇಶಕ್ಕೆ ಕೀರ್ತಿ ತಂದಿದ್ದಾರೆ. ಈಗ ಕಾಯಕವೇ ಕೈಲಾಸವೆಂಬಂತೆ ಬಸವರ ತತ್ವಗಳನ್ನು ವಿಶ್ವದಾದ್ಯಂತ ಜನರು ಅನುಸರಿಸಲು ಆಸಕ್ತಿ ವಹಿಸುತ್ತಿದ್ದಾರೆ. ಸದ್ಯದಲ್ಲೇ ತಾವು ವಿಶ್ವ ಸಂಸ್ಥೆಯಲ್ಲಿ ಬಸವಣ್ಣ ಮತ್ತು ಮಾನವನ ಹಕ್ಕುಗಳು ಕುರಿತು ವಿಚಾರ ಸಂಕಿರಣ ನಡೆಸುವ ಪ್ರಯತ್ನದಲ್ಲಿದ್ದೇನೆ. ಬಸವಣ್ಣ ಯಾವುದೇ



ಒಂದು ಸಮುದಾಯಕ್ಕೆ ಸೀಮಿತವಾಗಿರದೆ ಸಾಂಸ್ಕೃತಿಕ ನಾಯಕ, ಯಾವುದೇ ಜಾತಿವಾದವಿಲ್ಲದ ದೊಡ್ಡ ದಾರ್ಶನಿಕ, ಅವರನ್ನು ಸಣ್ಣವರಾಗಲು ಬಿಡಬೇಡಿ, ಹಾಗೇನೇ, ಸಂಘದಲ್ಲಿಯೂ ಬಸವಣ್ಣನವರನ್ನು ಒಂದು ಜಾತಿಗೆ ಸೀಮಿತ ಮಾಡದೇ ಎಲ್ಲ ಕನ್ನಡಿಗರೂ ಅವರ ತತ್ವಗಳನ್ನು, ವಚನಗಳ ಆದರ್ಶಗಳನ್ನು ಪಾಲಿಸಿಕೊಂಡು ಒಂದಾಗಿ ಸಂಘವನ್ನು ಮುನ್ನಡೆಸಿಕೊಂಡು ಹೋಗಬೇಕೆಂದು ಕರೆ ನೀಡುತ್ತಾ, ಸಂಘದ ಸಭಾಂಗಣಕ್ಕೆ 'ಅನುಭವ ಮಂಟಪ' ಹೆಸರನ್ನಿಡಲು ಸಲಹೆ ನೀಡಿದರು. ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಶುಭಾಶಯಗಳನ್ನು ಎಲ್ಲರಿಗೂ ತಿಳಿಸಿ, ಇಡೀ ಕರ್ನಾಟಕಕ್ಕೆ ಕಲ್ಯಾಣ ಕೊಡುವಂತಹ ನಾಡಾಗಲಿ ಕಲ್ಯಾಣ ಕರ್ನಾಟಕ ಎಂದು ಅಭಿಲಾಷಿಸಿದರು.

ಮತ್ತೊರ್ವ ಮುಖ್ಯ ಅತಿಥಿಗಳಾದ ಐ.ಆರ್.ಎಸ್. ಅಧಿಕಾರಿ ಶ್ರೀ ಅಮರೇಶ್ ಪಾಟೀಲ್ ಮಾತನಾಡಿ ಎಲ್ಲರಿಗೂ 76ನೇ ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಹಾಗೂ ಅಮೃತ ಮಹೋತ್ಸವದ ಶುಭಾಶಯಗಳನ್ನು ತಿಳಿಸಿದರು. ಚನ್ನಬಸಪ್ಪ ಪಟ್ಟದೇವರು, ಭೀಮಣ್ಣ ಖಂಡ್ರೆಯವರ ಹೈದರಾಬಾದ್ ಕರ್ನಾಟಕ ವಿಮೋಚನಕ್ಕಾಗಿ ಹೋರಾಟವನ್ನು ಪ್ರಸ್ತಾಪಿಸಿ, ಶಿಲಾಯುಗ (10,000 BC Iron Age) ಸಿಂಧು ನಾಗರೀಕತೆ, (3000 BC), ಜೈನ ಧರ್ಮ, ಬುದ್ಧ ಧರ್ಮ (600 BC) ಅಶೋಕನ ಸಮಯದ (300 BC) ಶಾಸನ ಮುಂತಾದ Pre Historic (ಚರಿತ್ರೆ ಪೂರ್ವ) ಕುರುಹುಗಳನ್ನು ತಿಳಿಸುತ್ತಾ ಕರ್ನಾಟಕದ ವೈವಿಧ್ಯತೆಯನ್ನು ಎತ್ತಿ ಹಿಡಿದ ಭಾಗ ಕಲ್ಯಾಣ ಕರ್ನಾಟಕವಾಗಿದೆಯೆಂದು ಇಲ್ಲಿನ ವಾಸ್ತುಶಿಲ್ಪ ಕಲೆ ಜನತೆಯ ಶ್ರೇಷ್ಠತೆಯ ಬಗ್ಗೆ ವಿವರಿಸಿದರು. 12ನೇ ಶತಮಾನದ ವಚನ ಸಾಹಿತ್ಯಕ್ಕೆ ಸಮಾನವಾದದ್ದು ಯಾವ ಸಾಹಿತ್ಯವೂ ಇಲ್ಲ, ಆ ಸಮಯದಲ್ಲಿ ಬಹಳಷ್ಟು ಅಭಿವೃದ್ಧಿ ಪಡೆದ ಪ್ರದೇಶವಾಗಿದ್ದ ಕಲ್ಯಾಣ ಕರ್ನಾಟಕ, 12ನೇ ಶತಮಾನದ ಚಳುವಳಿ ತರುವಾಯ ಹಾಗು 20ನೇ ಶತಮಾನದಲ್ಲಿ ಬ್ರಿಟೀಷರ, ನಿಜಾಮನ ಆಳ್ವಿಕೆಯಿಂದ ಹಿಂದುಳಿಯಿತು. ಹಾಗಾಗಿ ಆ ಪ್ರದೇಶವನ್ನು ಮೈಸೂರು ಪ್ರಾಂತ್ಯಕ್ಕೆ ಸೇರಿಸಲು 1953ರಲ್ಲಿ ಮೈಸೂರು ಸಂಸ್ಥಾನ ಹಿಂದೆ ಸರಿದರೂ, ಶ್ರೀ ನಿಜಲಿಂಗಪ್ಪನವರ ಮಧ್ಯಸ್ಥಿಕೆಯಿಂದ ಅನಂತರ ಸೇರ್ಪಡೆಯಾಯಿತು. ಈಗ Article 371 J ಅಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ಯ ಸ್ಥಾಪನೆಯಾದ ನಂತರ ಉತ್ತಮ ಪ್ರಗತಿ ಕಾಣುತ್ತಿದೆ. ಆ ಭಾಗದ ಜನರು ಎಲ್ಲ ಕ್ಷೇತ್ರಗಳಲ್ಲಿಯೂ ಮುಂದುವರಿಯುತ್ತಿದ್ದಾರೆ. ದೆಹಲಿ




ಜನತೆಗೆ, ಸಮಸ್ತ ನಾಡಿನ ಜನತೆಗೆ ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಅಭಿನಂದನೆಗಳು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿದ್ದ ಕಲಬುರಗಿ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಉಮೇಶ್ ಜಿ. ಜಾಧವ್ ಅವರು ಕಾರಣಾಂತರದಿಂದ ಬರಲಾಗದಿದ್ದಕ್ಕೆ, ಕಳುಹಿಸಿಕೊಟ್ಟ ಸಂದೇಶ ಪತ್ರವನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎಂ.ಬಿ. ವಸಂತ ಕುಮಾರ್ ಸಭೆಯಲ್ಲಿ ಓದಿ ತಿಳಿಸಿದರು.

ಸಂಘದ ಅಧ್ಯಕ್ಷ ಶ್ರೀ ನಾಗರಾಜ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಅರವಿಂದ ಜತ್ತಿಯವರನ್ನು ಆಧುನಿಕ ಬಸವಣ್ಣನವರೆಂದು ಬಣ್ಣಿಸಿದರು. ಕಳೆದ ಫೆಬ್ರವರಿಯಲ್ಲಿ ನಡೆದ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸುಮಾರು 2 ಗಂಟೆಗಳಿಗೂ ಹೆಚ್ಚು ಸಮಯ ನೀಡಿದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಸಂಘದ ಮುಂದಿನ 25 ವರ್ಷಗಳಲ್ಲಿ ಸಂಘದ ಶತಾಬ್ದಿ ಮಹೋತ್ಸವದಲ್ಲಿ ಜನರು ಸ್ಮರಿಸುವಂತಹ ವಿಶೇಷವಾದ ಕೆಲಸಗಳಾಗಬೇಕು ಎಂದು ಕರೆ ನೀಡಿದ್ದರು. ಅದನ್ನು ಸಾಕಾರಗೊಳಿಸುವ ಹೊಣೆ ನಮ್ಮ ಮೇಲಿದೆ, ಕಾಯಕವೇ ಕೈಲಾಸವೆಂದು ದೇಶದ ಪ್ರಗತಿಗೆ ಹಗಲಿರುಳೂ ದುಡಿಯುತ್ತಿರುವ ಪ್ರಧಾನಿಯವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹುಟ್ಟು ಹಬ್ಬದ ಶುಭಾಶಯಗಳು, ನಮ್ಮ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ 2500ಕ್ಕೂ ಹೆಚ್ಚು ನಾಡಿನ ಕಲಾವಿದರು ಸಂಘದ ವೇದಿಕೆಯಲ್ಲಿ ಪ್ರದರ್ಶನ ನೀಡಿದ್ದಾರೆ. ವಿಶ್ವದ ಕನ್ನಡ ಸಂಘ ಸಂಸ್ಥೆಗಳನ್ನು ಕರೆಸಿ ಸಂಘದಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲು ಮತ್ತು ಅನುಭವ ಮಂಟಪ ಹೆಸರನ್ನಿಡಲು ಶ್ರೀ ಅರವಿಂದ ಜತ್ತಿ ಅಣ್ಣನವರ ಸಲಹೆಗಳನ್ನು ತಾವು ಮುಂದೆ ಸಂಘಕ್ಕೆ ತೆಗೆದುಕೊಳ್ಳುತ್ತಿರುವ ಇನ್ನೊಂದು ಹೊಸ ಜಾಗದ ಯೋಜನೆಯಲ್ಲಿ ಮಾಡಿರುವ ಹೊಸ ಜಾಗದ ಯೋಜನೆಯಲ್ಲಿ ಕಾರ್ಯಗತ ಮಾಡಲು ಪ್ರಯತ್ನಿಸುತ್ತೇನೆ, ಬಸವಣ್ಣ ವಿಶ್ವಮಾನವ ಅವರ ವಚನ ಕಾಯಕವೇ ಕೈಲಾಸ ಎಂಬಂತೆ ಕಳೆದ 20 ವರ್ಷಗಳಿಂದ ಸತತ ದೆಹಲಿ ಕನ್ನಡಿಗರ ಸೇವೆ ಮಾಡುತ್ತಾ ಬಂದಿದ್ದೇನೆ. ಈಗ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಮುಂದಿನ ಯೋಜನೆಗಳಿಗೆ ರೂ. 25 ಕೋಟಿ ರೂ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸಲು ಪತ್ರ ಬಂದಿರುವುದನ್ನೂ ತಿಳಿಸಿ ಹರ್ಷ ಪಟ್ಟರು. ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಅಭಿನಂದನೆಗಳನ್ನು ಎಲ್ಲರಿಗೂ ತಿಳಿಸುತ್ತಾ ಆ ಭಾಗದ ಜನರ ಆಶೋತ್ತರಗಳಿಗೆ ತಾವು ಸದಾ ಸ್ಪಂದಿಸುವುದಾಗಿ, ಅವರೊಂದಿಗೆ ದೆಹಲಿ ಕರ್ನಾಟಕ ಸಂಘ ಸದಾ ಇರುತ್ತೆ ಎಂದರು.

ನಂತರ ದೆಹಲಿಯಲ್ಲಿ ನೂತನವಾಗಿ ರಚಿತಗೊಂಡಿರುವ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಪದಾಧಿಕಾರಿಗಳಾದ ಶ್ರೀ ವಿ.ವಿ. ಬಿರಾದಾರ ಮತ್ತು ಡಾ. ಎಸ್.ಎಲ್. ಭಂಡಾರ್‌ಕರ್ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ ಸಂಘದ ವತಿಯಿಂದಮತ್ತು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು.

ಇದೇ ಸಂದರ್ಭ 2023ರ ಸಾಲಿನಲ್ಲಿ ದೆಹಲಿ ಸರ್ಕಾರದಿಂದ ರಾಜ್ಯ ಶಿಕ್ಷಕರ ಪ್ರಶಸ್ತಿ ಪುರಸ್ಕೃತೆ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಫಿಸಿಕಲ್ ಎಜ್ಯುಕೇಶನ್ ಶಿಕ್ಷಕಿ (PET) ಶ್ರೀಮತಿ ಡ್ಯಾರೆಲ್ ಜೆಸಿಕಾ ಫೆರ್ನಾಂಡಿಸ್ ಅವರನ್ನು ಸಂಘದ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು. ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರ ಪರಿಚಯ ಮಾಡಿಕೊಟ್ಟರು. ದೆಹಲಿ ಕನ್ನಡಿಗರಿಗೆ ಜನಪ್ರಿಯ ಜಾನಪದ ಗೀತೆಗಳ ರಸದೌತಣ ನಿಡಿ ಮನರಂಜಿಸಿದ ರಾಜ್ಯ ಪ್ರಶಸ್ತಿ ಪುರಸ್ಕೃತ ಕಲಾವಿದ ಮಳವಳ್ಳಿ ಡಾ. ಎಂ. ಮಹಾದೇವ ಸ್ವಾಮಿಯವರನ್ನು ಮತ್ತು ಅವರ ತಂಡದವರನ್ನು ಸಂಘದ ಪರವಾಗಿ ಸನ್ಮಾನಿಸಲಾಯಿತು. ಡಾ. ಮಹಾದೇವ ಸ್ವಾಮಿಯವರು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಕಾರ್ಯಕ್ರಮ ನೀಡಲು ಅವಕಾಶ ಕೊಟ್ಟಿದ್ದಕ್ಕೆ ಮತ್ತು ತಮ್ಮನ್ನು ಅಭಿನಂದಿಸಿದ್ದಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ರವರ ವಂದನಾರ್ಪಣೆಯೊಂದಿಗೆ ಕಲ್ಯಾಣ ಕರ್ನಾಟಕ ಉತ್ಸವ ದೆಹಲಿ, ಎನ್.ಸಿ.ಆರ್. ಕನ್ನಡಿಗರಿಂದ ತುಂಬಿದ್ದ ಸಭಾಂಗಣದಲ್ಲಿ ಯಶಸ್ವಿಯಾಗಿ ಸಂಪನ್ನವಾಯಿತು.

**ಅಭಿಮತ ವರದಿ**



**ವಿಶೇಷ ವೈದ್ಯಕೀಯ ಲೇಖನ -3 ಆರೋಗ್ಯವೇ ಭಾಗ್ಯ**

# ಮಾನವನ ದೇಹ ಪ್ರಕೃತಿಯ ಪ್ರಕಾರ ಆಹಾರ/ಜೀವನಶೈಲಿಯ ಸಲಹೆ

| ಆಹಾರ | ವಾತ ಪ್ರಕೃತಿ | ಪಿತ್ತ ಪ್ರಕೃತಿ | ಕಫ ಪ್ರಕೃತಿ |
|---|---|---|---|
| ಹಣ್ಣುಗಳು | ಸಿಹಿ ಹಣ್ಣುಗಳು, ಬಾಳೆಹಣ್ಣು,ಅಂಜೂರ, ಮಾವು, ಕಲ್ಲಂಗಡಿ, ತೆಂಗಿನಕಾಯಿ, ದ್ರಾಕ್ಷಿ, ಖರ್ಜೂರ, ಪಪ್ಪಾಯಿ, ಅನಾನಸ್ | ಸಿಹಿ ಹಣ್ಣುಗಳು, ಸೇಬುಗಳು, ದಾಳಿಂಬೆ, ಪೇರಳೆ, ಆವಕಾಡೊ, ತೆಂಗಿನಕಾಯಿ, ಪ್ಲಮ್, ಪ್ರೂನ್, ಕಲ್ಲಂಗಡಿ | ಸೇಬು, ಪೇರಳೆ, ಏಪ್ರಿಕಾಟ್, ಚೆರ್ರಿಗಳು ಬೆರ್ರಿಗಳು, ಒಣ ಅಂಜೂರ, ಪೀಚ್ ಪ್ರೂನ್, ಮಾವು |
| ತರಕಾರಿಗಳು | ಬೇಯಿಸಿದ ತರಕಾರಿಗಳು, ಕ್ಯಾರೆಟ್, ಬೀಟ್ರೂಟ್, ಬೆಳ್ಳುಳ್ಳಿ, ಮೂಲಂಗಿ, ಪಾಲಕ್, ಟೊಮೆಟೊ, ಗೆಣಸು, ಮೊಳಕೆ ಬರಿಸಿದ ಕಾಳುಗಳು. | ಸಿಹಿ ಮತ್ತು ಕಹಿ ತರಕಾರಿಗಳು, ಎಲೆಕೋಸು, ಸೌತೆಕಾಯಿ, ಹೂಕೋಸು, ಸೆಲರಿ, ಹಸಿರು ಬೀನ್ಸ್, ಲೆಟುಸ್, ಬಟಾಣಿ, ಪಾರ್ಸ್ಲಿ, ಆಲೂಗಡ್ಡೆ, ಹಾಗಲಕಾಯಿ | ಕಟುವಾದ ಮತ್ತು ಕಹಿ ತರಕಾರಿಗಳು ಬೀಟ್ರೂಟ್, ಎಲೆಕೋಸು, ಕ್ಯಾರೆಟ್, ಹೂಕೋಸು, ಬದನೆಕಾಯಿ, ಬೆಳ್ಳುಳ್ಳಿ, ಲೆಟುಸ್, ಈರುಳ್ಳಿ, ಅಣಬೆ, ಬಟಾಣಿ, ಮೂಲಂಗಿ, ಪಾಲಕ್, ಮೊಳಕೆ ಬರಿಸಿದ ಕಾಳುಗಳು, ಹಾಗಲಕಾಯಿ. |
| ಧಾನ್ಯಗಳು | ಅಕ್ಕಿ, ಗೋಧಿ, ಬೇಯಿಸಿದ ಓಟ್ಸ್ | ಅಕ್ಕಿ, ಗೋಧಿ, ಓಟ್ಸ್, ಬಾರ್ಲಿ | ಓಟ್ಸ್, ಬಾರ್ಲಿ, ಮೆಕ್ಕೆಜೋಳ, ಕಾರ್ನ್, ರಾಗಿ, ರೈ (ಸಾಸುವೆ), ಸಣ್ಣ ಪ್ರಮಾಣದ ಅಕ್ಕಿ |
| ದ್ವಿದಳ ಧಾನ್ಯಗಳು | ಹೆಸರುಬೇಳೆ, ಬೀನ್ಸ್, ಮಸೂರ ಹೊರತು ಇತರ ಧಾನ್ಯಗಳು (ಕಡಿಮೆ ಪ್ರಮಾಣದಲ್ಲಿ) | ಎಲ್ಲಾ ದ್ವಿದಳ ಧಾನ್ಯಗಳು | ಸೋಯಾ ಹೊರತುಪಡಿಸಿ ಎಲ್ಲಾ ದ್ವಿದಳ ಧಾನ್ಯಗಳು, ಕಿಡ್ನಿ ಬೀನ್, ಕಪ್ಪು ಮಸೂರ |
| ಬೀಜಗಳು | ಕಡಿಮೆ ಪ್ರಮಾಣದಲ್ಲಿ ಎಲ್ಲಾ ಬೀಜಗಳು | ಕಡಿಮೆ ಪ್ರಮಾಣದಲ್ಲಿ | ಎಲ್ಲಾ ಬೀಜಗಳು |
| ಮಸಾಲೆಗಳು | ಮಧ್ಯಮ ಪ್ರಮಾಣ | ಬಹಳ ಕಡಿಮೆ ಪ್ರಮಾಣದಲ್ಲಿ | ಎಲ್ಲಾ ಮಸಾಲೆಗಳನ್ನು ತೆಗೆದುಕೊಳ್ಳಬಹುದು |
| ಹೈನು (ಡೈರಿ ಉತ್ಪನ್ನ) | ತುಪ್ಪ, ಬೆಣ್ಣೆ, ಹಾಲು, ಚೀಸ್, ತಾಜಾ ಮೊಸರು | ತುಪ್ಪ, ಬೆಣ್ಣೆ, ಚೀಸ್, ತಾಜಾ ಮೊಸರು, ಕಡಿಮೆ ಹಾಲು | ಸಣ್ಣ ಪ್ರಮಾಣದಲ್ಲಿ ಎಲ್ಲಾ ಡೈರಿ ಉತ್ಪನ್ನ |
| ಖಾದ್ಯ ತೈಲಗಳು(ಎಣ್ಣೆಗಳು) | ಎಲ್ಲಾ ಎಣ್ಣೆಗಳು ವಿಶೇಷವಾಗಿ ಎಳ್ಳಿನ ಎಣ್ಣೆ | ತೆಂಗಿನ ಎಣ್ಣೆ, ಆಲಿವ್ ಎಣ್ಣೆ, ಸೂರ್ಯಕಾಂತಿ, ಸೋಯಾ ಎಣ್ಣೆಗಳು | ಸಣ್ಣ ಪ್ರಮಾಣದ ಎಣ್ಣೆ, ಬಾದಾಮಿ, ಸೂರ್ಯಕಾಂತಿ ಎಣ್ಣೆಗಳು |
| ಸಿಹಿಕಾರಕಗಳು | ಬೆಲ್ಲ, ಸಕ್ಕರೆ | ಬೆಲ್ಲ, ಸಕ್ಕರೆ | ಜೇನು |
| ಜೀವನಶೈಲಿ | ಉಪವಾಸ, ಶೀತ ಆಹಾರ ಮತ್ತು ವಾತಾವರಣ, ಅತಿಯಾದ ಪರಿಶ್ರಮ, ಹೆಚ್ಚಾದ ಕೆಲಸ ಅತಿಯಾದ ಪ್ರವಾಸ / ಓಡಾಡುವಿಕೆಗಳನ್ನು ಬಿಡಬೇಕು | ಉಪವಾಸ, ಬಿಸಿಯಾದ ಆಹಾರ ಮತ್ತು ವಾತಾವರಣ, ಮೆಣಸಿನಕಾಯಿಗಳು, ಉಪ್ಪಿನಕಾಯಿ, ಹುಳಿಯಾದ ಆಹಾರ ಮತ್ತು ಪಾನೀಯಗಳು, ಮದ್ಯ, ಏರಿಯೇಟೆಡ್ ಪಾನೀಯಗಳನ್ನು ತಪ್ಪಿಸಬೇಕು / ಬಿಡಬೇಕು | ಹೆಚ್ಚು ಆಹಾರ ಸೇವನೆ, ಸುಮ್ಮನೆ / ಸೋಮಾರಿಯಾಗಿ ಕುಳಿತುಕೊಳ್ಳುವ ಅಭ್ಯಾಸಗಳು, ಹಗಲಿನ ನಿದ್ರೆ, ತಣ್ಣನೆಯ ಆಹಾರ ಮತ್ತು ವಾತಾವರಣವನ್ನು ವರ್ಜಿಸಬೇಕು. |
| ಸಲಹೆ / ಶಿಫಾರಸ್ಸುಗಳು | ಎಳ್ಳಿನ ಎಣ್ಣೆ ಮಸಾಜ್, ಲಘು ಯೋಗ/ ವ್ಯಾಯಾಮಗಳು | ಶ್ರೀಗಂಧದ ಎಣ್ಣೆ ಮಸಾಜ್, ಮಧ್ಯಮ ಯೋಗ/ವ್ಯಾಯಾಮಗಳು | ಸಾಸಿವೆ ಎಣ್ಣೆ ಮಸಾಜ್, ಹೆಚ್ಚಿನ ಯೋಗ / ವ್ಯಾಯಾಮಗಳು ಅಗತ್ಯ |
| ರಸಾಯನ | ಅಶ್ವಗಂಧ, ಬಲ, ಬೆಳ್ಳುಳ್ಳಿ, ಜೇಷ್ಠ ಮಧು | ಅಮಲಕಿ, ಶತಾವರಿ | ತ್ರಿಫಲ, ಪಿಪ್ಪಲಿ, ಶಿಲಾಜಿತ್ |

**ಸಾತ್ವಿಕ ಆಹಾರ :** ತಾಜಾ ಹಣ್ಣುಗಳು ಮತ್ತು ತರಕಾರಿಗಳು, ತಾಜಾ ರಸ, ಧಾನ್ಯಗಳು, ಸಂಪೂರ್ಣ ಗೋಧಿ, ಬಹುಧಾನ್ಯ, ಹಸುವಿನ ಹಾಲು, ಬೆಣ್ಣೆ, ಚೀಸ್, ಬೀಜಗಳು, ದ್ವಿದಳ ಧಾನ್ಯಗಳು, ಮೊಳಕೆಯೊಡೆದ ಬೀಜಗಳು, ಸೌಮ್ಯವಾದ ಮಸಾಲೆಗಳು, ನೈಸರ್ಗಿಕ ಸಿಹಿಕಾರಕಗಳು, ಗಿಡಮೂಲಿಕೆ ತೈಲಗಳು (ಎಣ್ಣೆಗಳು), ಗಿಡಮೂಲಿಕೆ ಚಹಾಗಳು, ಯೋಗದ ದೈನಂದಿನ ಅಭ್ಯಾಸ, ಹೃದಯವಂತಿಕೆ, ಸಕಾರಾತ್ಮಕ ಚಿಂತನೆ/ವಿಧಾನ, ಜನರೊಂದಿಗೆ ಉತ್ತಮ ಅಂತರ ವೈಯಕ್ತಿಕ ಸಂಬಂಧವನ್ನು ಹೊಂದಿರುವುದು. ಇವುಗಳನ್ನು ಸಾತ್ವಿಕ ಆಹಾರವೆಂದು ಪರಿಗಣಿಸಲಾಗುತ್ತದೆ.

**ರಾಜಸಿಕ ಆಹಾರ :** ತುಂಬಾ ಬಿಸಿಯಾದ, ಮಸಾಲೆಯುಕ್ತ, ಕಟುವಾದ, ಉಪ್ಪು ಮತ್ತು ಹುಳಿ ಆಹಾರ ಮತ್ತು ಪಾನೀಯಗಳು, ಕರಿದ ಮತ್ತು ಎಣ್ಣೆಯುಕ್ತ ಆಹಾರ, ತೀಕ್ಷ್ಣವಾದ ಗಿಡಮೂಲಿಕೆಗಳು, ತುಂಬಾ ತೀಕ್ಷ್ಣವಾದ ಕಾಫಿ / ಚಹಾದಂತಹ ಉತ್ತೇಜಕಗಳು, ಹೆಚ್ಚಿನ ಚಾಕೊಲೇಟ್, ಮದ್ಯ, ಮಾಂಸಾಹಾರಿ ಆಹಾರದ ಅತಿಯಾದ ಸೇವನೆ, ತುಂಬಾ ಕೋಪ, ಅಸೂಯೆ ಸ್ವಭಾವ, ಕ್ರೌರ್ಯ, ಅತಿಯಾದ ಬಾಂಧವ್ಯ. ಇವುಗಳು ಮನಸ್ಸಿನ ರಾಜಸಿಕ ಗುಣವನ್ನು ಹೆಚ್ಚಿಸಲಿವೆ.

**ತಾಮಸಿಕ ಆಹಾರ :** ಅತಿಯಾದ ಮಾಂಸಾಹಾರ ಆಹಾರ ಸೇವನೆ, ಮದ್ಯ, ವಿನೆಗರ್, ಈರುಳ್ಳಿ, ಬೆಳ್ಳುಳ್ಳಿ, ಹುದುಗಿಸಿದ (ತಂಗಳು) ಅಥವಾ ಹಳಸಿದ ಆಹಾರ, ಹೆಚ್ಚಾಗಿ ಮಾಗಿದ ಹಣ್ಣುಗಳು, ಕ್ರೌರ್ಯ, ಇತರರಿಗೆ ಹಾನಿ ಮಾಡುವುದು, ತಿನ್ನುವುದು ಮತ್ತು ಮಲಗುವುದು ಮತ್ತು ಮೆದುಳು/ಮನಸ್ಸನ್ನು ಬಳಸದಿರುವುದು. ಸಾಮಾನ್ಯವಾಗಿ ಇವು ಮನಸ್ಸಿನ ತಾಮಸಿಕ ಗುಣಗಳನ್ನು ಹೆಚ್ಚಿಸಲಿವೆ.

ಆದ್ದರಿಂದ ಒಬ್ಬನು ತನ್ನ ದೈಹಿಕ ಮತ್ತು ಮಾನಸಿಕ ಪ್ರಕೃತಿಯನ್ನು (ಪ್ರಕೃತಿ) ಅರ್ಥಮಾಡಿಕೊಳ್ಳಬೇಕು ಹಾಗು ಪರಿಪೂರ್ಣ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸರಿಯಾದ/ಅತ್ಯಂತ ಸೂಕ್ತವಾದ ಆಹಾರ ಮತ್ತು ಜೀವನಶೈಲಿಯನ್ನು ಅನುಸರಿಸಬೇಕು. ರೋಗಗಳನ್ನು ತಡೆಗಟ್ಟಲು ಮತ್ತು ಗುಣಪಡಿಸಲು ಈ ಜ್ಞಾನವು ಬಹಳ ಮುಖ್ಯವಾಗಿದೆ.

**ಸರ್ವೇ ಜನಾಃ ಸುಖಿನೋ ಭವಂತು!**

**ಲೇಖಕರು : ಡಾ. ಭೀಮ ಭಟ್ಟ**

## ಅಭಿನಂದನೆ




ಡಾ. ಭೀಮ ಭಟ್ಟ

ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರೂ, ಸುಪ್ರಸಿದ್ಧ ಆಯುರ್ವೇದ ತಜ್ಞರೂ ಆದ ಡಾ. ಭೀಮ ಭಟ್ಟ ಅವರು ಕಳೆದ 38 ವರ್ಷಗಳಿಂದ, ದೆಹಲಿ ಕನ್ನಡಿಗರಿಗೆ ಆರೋಗ್ಯ ಸಂಬಂಧಿತ ಹಾಗೂ ಆಯುರ್ವೇದ ಚಿಕಿತ್ಸಾ ಕ್ರಮಗಳು, ಪದ್ಧತಿ ಮತ್ತು ಇನ್ನಿತರ ವಿಷಯಗಳ ಮೇಲೆ ಉಚಿತವಾಗಿ ವೈದ್ಯಕೀಯ ಸಲಹೆಗಳನ್ನು ನೀಡುತ್ತಾ ಬಂದಿದ್ದಾರೆ.

ಕಳೆದ ಜುಲೈ ತಿಂಗಳಲ್ಲಿ ಸಂಘದಲ್ಲಿ ಆಯೋಜನೆಗೊಂಡ ಆರೋಗ್ಯ ಮೇಳ ಶಿಬಿರದಲ್ಲಿಯೂ ಭಾಗವಹಿಸಿ ತಮ್ಮ ಅಮೂಲ್ಯ ಸಮಯ ನೀಡಿ ದೆಹಲಿ ಕನ್ನಡಿಗರಿಗೆ ಉಚಿತವಾಗಿ ಆರೋಗ್ಯ ಪರಾಮರ್ಶೆ ಮತ್ತು ಸೂಕ್ತ ವೈದ್ಯಕೀಯ ಸಲಹೆಗಳನ್ನು ನೀಡಿರುತ್ತಾರೆ. ಡಾ. ಭೀಮ ಭಟ್ಟ ಅವರು ಎಂ.ಡಿ. (ಆಯುರ್ವೇದ) ಪದವಿ ಹೊಂದಿದ್ದು, ಆಯುರ್ವೇದ ವಿಧಿ, ವಿಧಾನಗಳು, ಚಿಕಿತ್ಸಾ ಪದ್ಧತಿ, ಕ್ರಮಗಳಲ್ಲಿ ನೈಪುಣ್ಯತೆ ಮತ್ತು ಅಪಾರ ಅನುಭವವನ್ನು ಹೊಂದಿದ್ದಾರೆ. ಅವರು ಪ್ರಸ್ತುತ ದೆಹಲಿ ಎನ್‌ಸಿಆರ್‌ನಲ್ಲಿರುವ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಗಳಾದ ಮೇದಾಂತ ಮೆಡಿಸಿಟಿ ಮತ್ತು ಅಪೋಲೋ ಹಾಸ್ಪಿಟಲ್ಸ್‌ನಲ್ಲಿ ಆಯುರ್ ವೈದ್ (AyurVaid) ವೈದ್ಯಕೀಯ ನಿರ್ದೇಶಕರು (Medical Director) ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ದೆಹಲಿ ಎನ್‌ಸಿಆರ್ ನಗರಗಳಲ್ಲಿನ ಈ ಎರಡು ಪ್ರಖ್ಯಾತ ಆಸ್ಪತ್ರೆಗಳಲ್ಲಿ ವೈದ್ಯಕೀಯ ನಿರ್ದೇಶಕರಾಗಿ ಆಯ್ಕೆಯಾಗಿರುವುದು, ಎಲ್ಲಾ ಹೊರನಾಡು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಅಭಿಮತ ಮಾಸಪತ್ರಿಕೆಯಲ್ಲಿ ಈ ಹಿಂದೆ ಮತ್ತು ಇತ್ತೀಚಿನ ಮೂರು ಸಂಚಿಕೆಗಳಲ್ಲಿ ಆಯುರ್ವೇದ ಕುರಿತು ಉತ್ತಮ ವೈದ್ಯಕೀಯ ಲೇಖನಗಳನ್ನು ಸಹ ನೀಡಿದ್ದಾರೆ. ಡಾ. ಭೀಮ ಭಟ್ಟ ಅವರಿಗೆ, ದೆಹಲಿ ಕರ್ನಾಟಕ ಸಂಘದ ಪರವಾಗಿ, ಹಾಗು ಸಮಸ್ತ ಹೊರನಾಡು ಕನ್ನಡಿಗರು ಮತ್ತು ಅಭಿಮತ ಓದುಗರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳು.

# ಶ್ರೀ ರಾಮಚಂದ್ರ ಭಟ್



ಸಂಘದ ಪಕ್ಕದಲ್ಲೇ ಇತ್ತು ಅವರ ಮನೆ. ಊರಿನಿಂದ ಬಂದ ನಮಗೆಲ್ಲ ಮನೆಯೂಟ, ನಮ್ಮೂರ ಮಾತುಕತೆ, ಬದುಕಿನ ಅಪಾರ ಅನುಭವಕ್ಕೆ ಹಾಸ್ಯದ ಲೇಪನ ಹಚ್ಚಿ ಗಂಟೆಗಳ ತನಕ ಪಟ್ಟಾಂಗ ಹೊಡೆದು ನಾವೊಂದು 8–10 ಮಂದಿಗೆ ತಿಂಗಳಿಗೊಂದೆರಡು ಸಲ ಮನೆಗೆ ಕರೆದು ಊಟ ಹಾಕಿ ಮನೆ ಮಕ್ಕಳಂತೆ ನೋಡಿಕೊಂಡ ಶ್ರೀ ಐ.ಪಿ. ಭಟ್ ಕುಟುಂಬವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಸಾಮಾಜಿಕ ಸಂಸ್ಥೆಗಳಲ್ಲಿ ತೊಡಗಿಸಿಕೊಳ್ಳದಿದ್ದರೂ ಎಲ್ಲರಿಗೆ ಬೇಕಾದವರಾಗಿದ್ದ ಐ.ಪಿ. ಭಟ್ಟರ ಮನೆಗೆ ಹೋಗುವುದೆಂದರೆ ನಮಗೆ ಹಬ್ಬ. ಅವರ ಮೂವರು ಮಕ್ಕಳಾದ ಪ್ರಸನ್ನ, ಪ್ರಶಾಂತ್, ಪ್ರಮೋದ್ ಅವರಿನ್ನೂ ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳು. ಅವರ ಚಟುವಟಿಕೆಗಳು, ಮಕ್ಕಳ ತಕರಾರುಗಳು, ಅವರ ಅಮ್ಮ ಮಕ್ಕಳನ್ನು ಸಮಾಧಾನಪಡಿಸುವ ರೀತಿ ಎಲ್ಲವೂ ಸಹ ನಮ್ಮೂರಿನ ಹವ್ಯಕ ಸಂಸ್ಕೃತಿಯ ಕಲಿಯತಕ್ಕ ಪಾಠಗಳೇ ಆಗಿದ್ದವು. ಆ ಮೂವರು ಸಹ ಏರಿದ ಎತ್ತರ, ಮಾಡಿದ ಸಾಧನೆಯ ಹಿಂದೆ ಮನೆಯ ಸಂಸ್ಕಾರದ ಭದ್ರ ತಳಹದಿ ಇದೆ.

ಶ್ರೀ ಐ.ಪಿ. ಭಟ್ ಅವರ ಮನೆಯಲ್ಲಿ, ಅವರ ಕುಟುಂಬದ ಜೊತೆ ಅವರ ತಮ್ಮ, ಅಂದರೆ, ನಮ್ಮ ಸಂಘದ ಲೆಕ್ಕಪತ್ರ ಪರಿಶೋಧಕ ಶ್ರೀ ರಾಮಚಂದ್ರ ಭಟ್, ಅವರ ಪತ್ನಿ ಶಾರದ, ಮಗ ಯಶಸ್ವಿ ಸೇರಿದಂತೆ ದೊಡ್ಡ ಸಂಸಾರ. ವಾರಾಂತ್ಯದಲ್ಲಿ, ನೆಂಟರಿಷ್ಟರು ಹಾಗೂ ನನ್ನಂತಹ ಹಲವಾರು ಮಂದಿಗೆ ಅದು ಮನೆಯಾಗುತ್ತಿತ್ತು. ಕಾಸರಗೋಡು ಜಿಲ್ಲೆಯ ಬದಿಯಡ್ಕದ ಆ ತುಂಬಿದ ಕುಟುಂಬ, ನಾವು ದೂರದ ದೆಹಲಿಯಲ್ಲಿದ್ದೇವೆ ಎಂಬ ಕೊರಗನ್ನು ಮರೆಸಿತ್ತು. ಊಟ ಮಾಡಿ ಪಟ್ಟಾಂಗ ಹೊಡೆಯಲು ಆರಂಭಿಸಿದರೆ, ಕೆಲವೊಂದು ಅನುಭವಗಳನ್ನು, ಘಟನೆಗಳನ್ನು ಶ್ರೀ ಐ.ಪಿ. ಭಟ್ ಮತ್ತು ಶ್ರೀ ರಾಮಚಂದ್ರ ಭಟ್ ಅವರು ವಿವರಿಸುತ್ತಿದ್ದ ರೀತಿ ನಮಗೆ ಮುದ ನೀಡುತ್ತಿತ್ತು. ಹಾಗಾಗಿ ನಮಗೆ ಸಂಘ ಸಂಸ್ಥೆಗಳ ಕುರಿತ ಯೋಚನೆಯೂ ಸಹ ಆಗ ಬಂದಿರಲಿಲ್ಲ.

ದೆಹಲಿ ಕರ್ನಾಟಕ ಸಂಘದ ನಿವೇಶನ ಸಿಕ್ಕಿ ಮೊದಲ ಕಟ್ಟಡ ನಿರ್ಮಾಣವಾದಾಗ ಸಂಘ ಆರ್ಥಿಕವಾಗಿ ಸೊರಗಿತ್ತು. ಆಸ್ತಿ ತೆರಿಗೆ ಬಹಳವಾಗಿ ಹೇರಲಾಗಿತ್ತು. ಲೆಕ್ಕಪತ್ರಗಳು ಚೆಲ್ಲಾಪಿಲ್ಲಿಯಾಗಿದ್ದವು. ಸಂಘ ನಿಜಕ್ಕೂ ಸಂಕಷ್ಟದಲ್ಲಿತ್ತು. ಆ ಸಮಯದಲ್ಲಿ ಹಗಲಿರುಳು ದುಡಿದು ತಮ್ಮ ವೃತ್ತಿಪರ ಸಲಹೆ ಹಾಗೂ ಹೋರಾಟಗಳಲ್ಲಿ ತೊಡಗಿದ್ದವರು ಅಂದಿನ ಕಾರ್ಯದರ್ಶಿ ಶ್ರೀ ಕೆ.ಆರ್. ನಾಗರಾಜ್. ಆ ಹೋರಾಟಕ್ಕೆ ಹಲವು ಮಗ್ಗಲುಗಳಿದ್ದವು. ಒಂದೆಡೆ ಡಾ. ಸರೋಜಿನಿ ಮಹಿಷಿ ಅವರ ಜೊತೆ ಕಾನೂನಾತ್ಮಕ ಹೋರಾಟ. ಮತ್ತೊಂದೆಡೆ ಎರಡೂ ಪಕ್ಷದ ಬೆಂಬಲಿಗರ ನಡುವೆ ಇದ್ದ ಸಂಘರ್ಷ. ಇನ್ನೊಂದೆಡೆ ಹಲವಾರು ವರ್ಷಗಳಿಂದ ಲೆಕ್ಕಪತ್ರಗಳ ಪರಿಶೋಧನೆ ಆಗದೆ, ರಿಟರ್ನ್ ಸಲ್ಲಿಸದೆ ಸಂಘದ ಮೇಲಿದ್ದ ತೂಗುಕತ್ತಿ. ಮಗದೊಂದೆಡೆ ಆರ್ಥಿಕವಾಗಿ ಸೊರಗಿದ್ದ ಕರ್ನಾಟಕ ಸಂಘದ ಯಾವ ಕಾರ್ಯಕ್ರಮಗಳನ್ನು ನಡೆಸಲೂ ಹಣಕಾಸಿಲ್ಲದ ಪರಿಸ್ಥಿತಿ. ಆ ದಿನಗಳಲ್ಲಿ ಈ ಒಂದೊಂದು ಸಮಸ್ಯೆಗಳಲ್ಲಿ ಸದ್ದಿಲ್ಲದೆ ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದ ಕೆಲವು ಮಹನೀಯರನ್ನು ನೆನಪಿಸಿಕೊಳ್ಳದೇ ಇದ್ದರೆ, ಅದು ಸಂಘಕ್ಕೆ ಮಾಡಿದ ಅಪಚಾರವಾದೀತು.

ಸಂಘವನ್ನು ಒಂದು ಹಂತದಲ್ಲಿ ಉಳಿಸಿದ, ಆದರೆ ಸಂಘದ ಇತಿಹಾಸದ ಪುಟಗಳಲ್ಲಿ ದಾಖಲಾಗದೇ ಇದ್ದ ಕೆಲವರ ಪೈಕಿ ಮುಖ್ಯರಾದವರು ಶ್ರೀ ರಾಮಚಂದ್ರ ಭಟ್. ಹೌದು. ದೆಹಲಿ ಕರ್ನಾಟಕ ಸಂಘದ ಲೆಕ್ಕಪರಿಶೋಧಕರು. ಅಂದಿನ ದಿನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿಶ್ವನಾಥ್ ಭಟ್ ಅಂಡ್ ಶಾಸ್ತ್ರೀ ಎಂಬ ಸಂಸ್ಥೆಯು ಚಾರ್ಟೆಡ್ ಅಕೌಂಟೆಂಟ್ ಗ್ರೂಪಿನಲ್ಲಿರುವವರ ಪೈಕಿ ಈ ತನಕವೂ ವೃತ್ತಿಯನ್ನು ನಡೆಸುತ್ತಿರುವವರು ಶ್ರೀ ರಾಮಚಂದ್ರ ಭಟ್ ಮಾತ್ರ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಅಂದು ಸಂಘದ ಸಮಸ್ಯೆಗಳನ್ನು ಬಗೆಹರಿಸಿದ ನಮ್ಮ ಪ್ರಸ್ತುತ ಲೆಕ್ಕಪತ್ರ ಪರಿಶೋಧಕರ ಸೇವೆಯನ್ನು ಸಂಘ ಎಂದೂ ಮರೆಯಬಾರದು. ಲೆಕ್ಕಪತ್ರಗಳ ಬಿಕ್ಕಟ್ಟು ಪರಿಹರಿಸಿ, ಆಸ್ತಿ ತೆರಿಗೆ, ಆದಾಯ ತೆರಿಗೆ ಸಮಸ್ಯೆಗಳನ್ನು ನಿವಾರಿಸಿದ ಶ್ರೀ ರಾಮಚಂದ್ರ ಭಟ್, ಸಂಘದ ಅಶಾಂತ ದಿನಗಳಲ್ಲಿ ಚಾರ್ಟೆಡ್ ಅಕೌಂಟೆಂಟ್ ಅಗಿ, ಕನ್ನಡಿಗರಾಗಿ ಸಂಘಕ್ಕೆ ನೀಡಿದ ಕೊಡಗೆ ಅಪಾರ. ದಾಖಲಿಸಬೇಕಾದ ಮಹದುಪಕಾರ.

ಈಗಂತೂ ಕಂಪ್ಯೂಟರೀಕೃತ ಅಕೌಂಟಿಂಗ್ ಇದೆ. ಬೇಕಷ್ಟು ಸಾಫ್ಟ್‌ವೇರ್‌ಗಳಿವೆ. ಆ ದಿನಗಳಲ್ಲಿ ಅಕೌಂಟೆಂಟ್, ಇಂಟರ್ನಲ್ ಆಡಿಟರ್ ಯಾರೂ ಇರಲಿಲ್ಲ. ಚುನಾವಣೆಯಲ್ಲಿ ಆಯ್ಕೆ ಆಗಿ ಬರುತ್ತಿದ್ದ ಖಜಾಂಚಿಗಳು ಅಥವಾ ಪ್ರಧಾನ ಕಾರ್ಯದರ್ಶಿಗಳಲ್ಲಿ ಲೆಕ್ಕಪತ್ರಗಳನ್ನು ವೃತ್ತಿಪರರರಾಗಿ ನಿರ್ವಹಿಸುವುದು ಬಹುತೇಕರಿಗೆ ತಿಳಿದಿರಲಿಲ್ಲ. ವೇತನ ನೀಡಿ ಲೆಕ್ಕಪತ್ರಗಳನ್ನು ಸಂಭಾಳಿಸಲು ಯಾರನ್ನೂ ನೇಮಿಸಲು ಹಣವೂ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಲೆಕ್ಕಪತ್ರಗಳ ಪರಿಶೋಧನೆ ಸುಲಭದ ಕೆಲಸವಾಗಿರಲಿಲ್ಲ. ಕ್ಯಾಶ್ ಟ್ಯಾಲಿ ಮಾಡುವುದು, ಬ್ಯಾಂಕ್ ಅಕೌಂಟ್ ಟ್ಯಾಲಿ ಮಾಡುವುದೇ ಹರ ಸಾಹಸವಾಗುತ್ತಿತ್ತು. ಕಂಪ್ಯೂಟರ್ ಇರಲಿಲ್ಲ. ಟ್ಯಾಲೀ ಸಾಫ್ಟ್‌ವೇರ್ ಏನೂ ಇರಲಿಲ್ಲ. ಆ ದಿನಗಳಲ್ಲಿ ಆದಾಯ ತೆರಿಗೆ ಇಲಾಖೆಯಿಂದ ತೆರಿಗೆ ಹಣವನ್ನು ಹಿಂತಿರುಗಿ ಪಡೆಯುವುದಕ್ಕೆ ಬಹಳ ಶ್ರಮಪಡಬೇಕಾಗುತ್ತಿತ್ತು. ಎರಡು ವರ್ಷಗಳಿಗೊಮ್ಮೆ ಚುನಾಯಿತರಾಗಿ ಬರುತ್ತಿದ್ದ ಪದಾಧಿಕಾರಿಗಳಿಗೆ ಲೆಕ್ಕ ಪತ್ರಗಳನ್ನು ಹೇಗೆ ಇಡಬೇಕು ಎಂಬ ಬಗ್ಗೆ ಅರಿವು ಮೂಡಿಸುವುದೂ ಸುಲಭವಾಗಿ ಇರಲಿಲ್ಲ. ಅಂತಹ ಸನ್ನಿವೇಶದಲ್ಲಿ ಸಂಘದ ಲೆಕ್ಕಪತ್ರ ಪರಿಶೋಧಕರ ಕೆಲಸ ದೊಡ್ಡ ಸವಾಲಾಗಿತ್ತು. ಕ್ಷಣವೂ ಬಿಡುವಿಲ್ಲದಿದ್ದರೂ, ಕೇವಲ ಕನ್ನಡದ ಸಂಸ್ಥೆ ಅನ್ನುವ ಪ್ರೀತಿಯಿಂದಲೇ ಅವರು ಮಾಡಿದ ಸೇವೆಗೆ, ನೀಡಿದ ಸಮಯಕ್ಕೆ ಶರಣು.

ಐದು ಬಾರಿ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದ ನನಗೆ, 12 ವರ್ಷಗಳ ಪರಿಶೋಧಿತ ಲೆಕ್ಕಪತ್ರಗಳನ್ನು ಸರ್ವ ಸದಸ್ಯರ ಸಭೆಗೆ ಸಲ್ಲಿಸುವ ಅವಕಾಶ ಸಿಕ್ಕಿತ್ತು. ಪ್ರತಿಬಾರಿಯೂ ಲೆಕ್ಕಪತ್ರಗಳ ಬಗ್ಗೆ ಅವರ ಜೊತೆ ಚರ್ಚಿಸುತ್ತಿದ್ದ ಪರಿಣಾಮವಾಗಿ, ಅವರ ಅನುಭವದ ಪ್ರಯೋಜನವನ್ನು ನಾನು ಪಡೆದುಕೊಳ್ಳುವುದು ಸಾಧ್ಯವಾಗಿದೆ. ಲೆಕ್ಕಪತ್ರಗಳ ವಿಷಯ ಬಂದಾಗ ಎಷ್ಟೇ ಕಟ್ಟುನಿಟ್ಟಾಗಿದ್ದರೂ, ನಿಷ್ಠುರವಾಗಿ ಮಾತನಾಡಿದರೂ, ಅವರು ಯಾವತ್ತೂ ಸಹ ಸಮಸ್ಯೆಯ ಭಾಗವಲ್ಲ. ಸಂಘದ ಆದಾಯದ ಭಾಗವನ್ನು ಚ್ಯಾರಿಟೆಬಲ್ ಚಟುವಟಿಕೆಗಳಿಗಾಗಿ ಖರ್ಚು ಮಾಡುವ ಬಗ್ಗೆ ಸದಾ ಎಚ್ಚರಿಸುತ್ತಲೇ ಇರುತ್ತಾರೆ. ವಿದ್ಯಾರ್ಥಿ ವೇತನದಂತಹ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಯ ಹಿಂದಿರುವ ಮಹತ್ವ ಮತ್ತು ಅಗತ್ಯದ ಕುರಿತು ತಿಳಿಸಿ, ಅನುಭವೀ ಲೆಕ್ಕ ಪರಿಶೋಧಕರ ಜವಾಬ್ದಾರಿಯ ಜೊತೆಗೆ ಸಂಘದ ಧ್ಯೇಯೋದ್ದೇಶವನ್ನು ನೆನಪಿಸುತ್ತಲೇ ಇರುತ್ತಾರೆ.

ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ಪ್ರಸ್ತಾಪ ಸಲ್ಲಿಸಿದಾಗ ಅಂದು ಸರಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಗಳಾಗಿದ್ದ ಡಾ. ಸಿ.ಎಸ್. ಕೇದಾರ್ ಅವರ ಹೃದಯ ವೈಶಾಲ್ಯತೆಯಿಂದ ಮಂಜೂರಾದ 1 ಕೋಟಿಯಲ್ಲಿ 50 ಲಕ್ಷ ರೂಪಾಯಿ ಸಂಘಕ್ಕೆ ಬಂತು. ಆದರೆ ಸಂಘದ ಹಳೆಯ ಕಟ್ಟಡದಲ್ಲಿದ್ದ ಕೆನರಾ ಬ್ಯಾಂಕ್ ತೆರವು ಮಾಡದೇ ಇದ್ದುದರಿಂದ ನಾವು ನಿರ್ಮಾಣ ಕಾರ್ಯವನ್ನು ಹಲವಾರು ವರ್ಷಗಳ ತನಕ ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಸರಕಾರದಿಂದ ಬಂದ ಅನುದಾನವನ್ನು ಹಿಂತಿರುಗಿಸುವುದು ಸಂಘದ ಹಿತದೃಷ್ಟಿಯಿಂದ ಸೂಕ್ತವಾಗಿರಲಿಲ್ಲ. ಆ ಸಮಯದಲ್ಲಿ ಶ್ರೀ ರಾಮಚಂದ್ರ ಭಟ್ ಅವರು ಒಂದು ದಾರಿ ತೋರಿಸಿದರು. ಕಾರ್ಯಕಾರಿ ಸಮಿತಿ ಆ ಹಣವನ್ನು ಪ್ರತ್ಯೇಕವಾಗಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿಯಿಟ್ಟು, ಅದರಿಂದ ಬಂದ ಆದಾಯವನ್ನು ಅದೇ ಠೇವಣಿಗೆ ಸೇರಿಸುತ್ತಾ ಹೋಗಬೇಕು ಮತ್ತು ಕಾರ್ಯಕಾರೀ ಸಮಿತಿಯಲ್ಲಿ ಅದನ್ನು ಸಮುಚ್ಚಯ ನಿರ್ಮಾಣವಲ್ಲದೆ ಇನ್ಯಾವ ಕಾರ್ಯಕ್ಕೂ ಬಳಸಲಾಗುವುದಿಲ್ಲ ಎಂಬ ಠರಾವನ್ನು ಮಂಡಿಸಿ ಅನುಮೋದಿಸಬೇಕೆಂದು ನೀಡಿದ



ದೆಹಲಿ ಕರ್ನಾಟಕ ಸಂಘದ ಚಾರ್ಟೆಡ್ ಅಕೌಂಟೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ಶ್ರೀ ರಾಮಚಂದ್ರ ಭಟ್ ಅವರನ್ನು ಅಮೃತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಗೌರವಿಸಿ ಅಭಿನಂದಿಸಿದ ಸಂದರ್ಭ

ಸಲಹೆಯಿಂದಾಗಿ ಬಹಳ ಅನುಕೂಲವಾಯಿತು. ಸಂಘದ ಸುವರ್ಣ ಮಹೋತ್ಸವದ ಖರ್ಚುವೆಚ್ಚಗಳ ಬಗ್ಗೆ ಆತಂಕಗೊಂಡಿದ್ದ ಸಂಘದ ಸದಸ್ಯರೊಬ್ಬರು, ಸಂಘದ ಕಟ್ಟಡಕ್ಕಾಗಿ ಇಟ್ಟಿದ್ದ ಹಣವೇ ಸುವರ್ಣ ಮಹೋತ್ಸವಕ್ಕೆ ಖರ್ಚಾಗಿದೆ ಎಂದು ಸರಕಾರಕ್ಕೆ ದೂರು ನೀಡಿದಾಗ, ಸರಕಾರ ತಾನು ಕಟ್ಟಡಕ್ಕಾಗಿ ನೀಡಿದ ಹಣದ ಬಗ್ಗೆ ಪರಿಶೀಲನೆ ಮಾಡಿತ್ತು. ಶ್ರೀ ರಾಮಚಂದ್ರ ಭಟ್ಟರು ನೀಡಿದ್ದ ಸಲಹೆಯಂತೆ ಆ ಹಣವೆಲ್ಲ ಬ್ಯಾಂಕ್‌ನಲ್ಲಿ ಭದ್ರವಾಗಿತ್ತು. ಕಾರ್ಯಕಾರೀ ಸಮಿತಿಯ ನಿರ್ಧಾರದಂತೆ ಆ ಹಣದಿಂದ ಬಂದ ಬಡ್ಡಿಯನ್ನು ಸಹ ಸರಕಾರದ ಅನುದಾನವೆಂದೇ ಪರಿಗಣಿಸಿದ್ದರಿಂದ ಏನೂ ಸಮಸ್ಯೆ ಆಗಲಿಲ್ಲ. ಆ ಸಮಯದಲ್ಲಿ ಸರಕಾರ ಒಂದು ಕೋಟಿ ಅನುದಾನ ನೀಡಿದ್ದರೂ, ಬಡ್ಡಿ ಸೇರಿ ಆ ಮೊತ್ತ 1,92,22,492/– ಆಗಿತ್ತು. ಇಂದು ಸಹ ಸಂಘದ ಆರ್ಟ್ ಗ್ಯಾಲರಿಯ ಕಲ್ಲಿನಲ್ಲಿ ಕೆತ್ತಲ್ಪಟ್ಟ ಮೊದಲ ದೇಣಿಗೆಯ ಮಾಹಿತಿಯ ಕಥೆ ಇದು.

ಸರಳ, ಸಜ್ಜನಿಕೆಯ ಶ್ರೀ ರಾಮಚಂದ್ರ ಭಟ್ ಅವರು ಹಲವಾರು ಕಂಪೆನಿಗಳ ಲೆಕ್ಕ ಪರಿಶೋಧಕರು ಮಾತ್ರವಲ್ಲ, ಅಂದಿನ ಮುಖ್ಯ ಚುನಾವಣಾಧಿಕಾರಿಯಾಗಿದ್ದ, ಶ್ರೀ ಟಿ.ಎನ್. ಸೇಶನ್ ಅವರಿಂದ ಹಿಡಿದು, ಸರಕಾರದ ಹಿರಿಯ ಅಧಿಕಾರಿಗಳು, ದೇಶದ ಪ್ರಧಾನಮಂತ್ರಿಗಳೇ ಮುಖ್ಯ ಟ್ರಸ್ಟಿಗಳಾಗಿ ನಡೆಸುವ ಅಗ್ರಗಣ್ಯ ಟ್ರಸ್ಟ್‌ಗಳಿಂದ ಮೊದಲ್ಗೊಂಡು ರಾಜಕೀಯ ಪ್ರಭಾವಲಯದ ಮುತ್ಸದ್ದಿಗಳ ಲೆಕ್ಕಪತ್ರ ಪರಿಶೋಧನೆ ಮಾಡುತ್ತಿದ್ದರೂ, ಎಲ್ಲಿಯೂ ತಮ್ಮ ಬಗ್ಗೆ ಹೇಳಿಕೊಂಡವರಲ್ಲ. ತಾವಾಯಿತು ತಮ್ಮ ಕೆಲಸವಾಯಿತು ಎಂದು ಶಾಂತ ಜೀವನ ನಡೆಸುವ ಶ್ರೀ ರಾಮಚಂದ್ರ ಭಟ್ ಅವರು ಜ್ಯೋತಿಷ್ಯ ಶಾಸ್ತ್ರದಲ್ಲೂ ಎತ್ತಿದ ಕೈ.

ದೆಹಲಿಯಲ್ಲೇ 50 ವರ್ಷಗಳನ್ನು ಕಳೆದ ಶ್ರೀ ರಾಮಚಂದ್ರ ಭಟ್ ಅವರ ಜೀವನಾನುಭವ ದಾಖಲಿಸಬೇಕಾದ ಅಂಶಗಳನ್ನು ಒಳಗೊಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಈ ವರ್ಷದಲ್ಲಿ ಸಂಘಕ್ಕಾಗಿ, ಯಾವುದೇ ವೇದಿಕೆಗೆ ಬಾರದೆ, ನೇಪಥ್ಯದಲ್ಲಿ ನಮ್ಮೆದುರೇ ದುಡಿದ, ಮಾರ್ಗದರ್ಶನ ಮಾಡಿದ ಮಹನೀಯ ಶ್ರೀ ರಾಮಚಂದ್ರ ಭಟ್ ಅವರಿಗೆ ಶರಣು.

***ಶ್ರೀ ಸರವು ಕೃಷ್ಣ ಭಟ್***

# ದೆಹಲಿ ಕರ್ನಾಟಕ ಸಂಘದಲ್ಲಿ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮ ಜಯಂತಿ - ಇಂಜಿನಿಯರ್ಸ್ ದಿನಾಚರಣೆ






ಕನ್ನಡ ನಾಡು ಮಾತ್ರವಲ್ಲದೆ ಇಡೀ ಏಷ್ಯಾ ಖಂಡದಲ್ಲೇ ಅತ್ಯಂತ ಮೇಧಾವಿ ಅಭಿಯಂತರರೂ ಹಾಗೂ ಆಡಳಿತಗಾರರಾಗಿದ್ದ ಕನ್ನಡಿಗರ ಕಣ್ಮಣಿ **ಭಾರತ ರತ್ನ ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ** 163ನೇ ಜನ್ಮ ಜಯಂತಿಯ ಅಂಗವಾಗಿ ದಿ. 15.09.2023 ರಂದು ದೆಹಲಿ ಕರ್ನಾಟಕ ಸಂಘದಲ್ಲಿ **'ಇಂಜಿನಿಯರ್ಸ್ ದಿನ'**ವನ್ನು ಬಹಳ ವೈಶಿಷ್ಟ್ಯಪೂರ್ಣವಾಗಿ ಆಯೋಜಿಸಲಾಗಿತ್ತು.

ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಸಹಯೋಗದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನವದೆಹಲಿಯ ಡಿ.ಟಿ.ಯು. ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪ್ರೊಫೆಸರ್ ಆಗಿರುವ ಡಾ. ಡಿ.ಎಸ್. ನಾಗೇಶ್ ಹಾಗು ಜೆ.ಎನ್.ಯು. ನ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಸಂಗಮೇಶ ಭಾಗವಹಿಸಿದ್ದರು.

ಕು. ಸುಧಿತಿ ಅಂಬಳೆ ಮತ್ತು ಕು. ಶ್ರೀಧಾ ಅಂಬಳೆ ಸಹೋದರಿಯರ ಪ್ರಾರ್ಥನೆಯೊಂದಿಗೆ, ಸರ್. ಎಂ.ವಿ. ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮತ್ತು ದೀಪ ಪ್ರಜ್ವಲನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಸಿವಿಲ್ ಇಂಜಿನಿಯರ್, ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್. ಮೂರ್ತಿ ಸಮರ್ಪಕವಾಗಿ ನಡೆಸಿಕೊಟ್ಟರು.

ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಆರ್. ರೇಣುಕುಮಾರ್ ಅವರು ಆಗಮಿಸಿದ್ದ ಮುಖ್ಯ ಅತಿಥಿಗಳಿಗೆ ಮತ್ತು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದವರೆಲ್ಲರಿಗೂ ಆತ್ಮೀಯ ಸ್ವಾಗತ ಕೋರಿ, ಸರ್. ಎಂ. ವಿ ಅವರು ಒಬ್ಬ ವ್ಯಕ್ತಿಯಲ್ಲದೇ ಒಂದು ಶಕ್ತಿಯಾಗಿದ್ದರು. ಅವರು ಸ್ವತಂತ್ರ, ಸ್ವಾವಲಂಬಿ,ಸಮೃದ್ಧ ಭಾರತ ಕಟ್ಟುವಲ್ಲಿ ಶ್ರಮಿಸಿದವರು, ಅವರ ಮುಂದಾಲೋಚನೆ, ಕಾರ್ಯತತ್ಪರತೆ, ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರವರ ಸಂಸ್ಥಾನದಲ್ಲಿ ಮುಖ್ಯ ಇಂಜಿನಿಯರ್ ಆಗಿ, ನಂತರ ದಿವಾನರಾಗಿ ಕೆ.ಆರ್.ಎಸ್. ಅಣೆಕಟ್ಟು, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಅನೇಕ ಸಮಾಜಮುಖಿ ಕಾರ್ಯ ಯೋಜನೆಗಳನ್ನು ನಾಡಿಗೆ ನೀಡಿದ ಧೀಮಂತ ಇಂಜಿನಿಯರ್ ಅವರಾಗಿದ್ದರು ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಂಘದ ಉಪಾಧ್ಯಕ್ಷರೂ ಮತ್ತು ವಿಜ್ಞಾನಿಗಳಾದ ಡಾ. ಎಂ.ಎಸ್. ಶಶಿಕುಮಾರ್ ಅವರು, ದೆಹಲಿ ಕರ್ನಾಟಕ ಸಂಘದ ಅಮೃತ ಕಾರ್ಯಕಾಲದ ಕಾರ್ಯಕ್ರಮಗಳ ಬಗ್ಗೆ ಬೆಳಕು ಚೆಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪಕರಲ್ಲೊಬ್ಬರಾದ ಸರ್. ಎಂ.ವಿ. ಅವರ ಜನ್ಮ ದಿನವನ್ನು ನಮ್ಮ ದೆಹಲಿಯಲ್ಲಿರುವ ಹಿರಿಯ ಮತ್ತು ಕಿರಿಯ ಇಂಜಿನಿಯರ್‌ಗಳ ಜೊತೆ ಇಂಜಿನಿಯರ್ಸ್ ದಿನವನ್ನಾಗಿ ಆಚರಿಸುತ್ತಿರುವುದು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದಿದೆ ಎಂದು ಹೇಳುತ್ತಾ ಸರ್. ಎಂ.ವಿ. ಅವರ ಸಂಕ್ಷಿಪ್ತ ಜೀವನ ಹಾಗೂ ಸಾಧನೆಗಳ ಪಕ್ಷಿನೋಟವನ್ನು ನೀಡಿದರು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ವತಿಯಿಂದ ಶ್ರೀಮತಿ ರೂಪಶ್ರೀ ನರಸಿಂಹ ಮೂರ್ತಿಯವರು ನಡೆಸಿಕೊಡುತ್ತಿರುವ ಕನ್ನಡ ಕಲಿಕಾ ಕೇಂದ್ರದಲ್ಲಿ ಕನ್ನಡ ಕಲಿಯುತ್ತಿರುವ ದೆಹಲಿ ಕನ್ನಡಿಗರ ಮಕ್ಕಳು ಕನ್ನಡ ಪದ್ಯ, ಹಾಡು, ಅಭಿನಯದೊಂದಿಗೆ ಕಥೆ ಹೇಳಿ, ಸರ್. ಎಂ.ವಿ. ಬಗ್ಗೆ ರಚಿಸಲಾದ ಕವನ ಮತ್ತು ಅವರ ಜೀವನ ಚರಿತ್ರೆಯ ಬಗ್ಗೆ ಮಾಹಿತಿ ಮುಂತಾದ ಪ್ರಸ್ತುತಿಗಳನ್ನು ನೀಡಿದರು.

ಉಪಸ್ಥಿತರಿದ್ದ ಇಬ್ಬರೂ ಮುಖ್ಯ ಅತಿಥಿಗಳ ಪರಿಚಯವನ್ನು ಶ್ರೀ ಕೆ.ಎಸ್. ಮೂರ್ತಿ ಮಾಡಿ ಕೊಟ್ಟರು. ಮೊದಲಿಗೆ ಮಾತನಾಡಿದ ಡಾ. ಡಿ.ಎಸ್. ನಾಗೇಶ್ ಅವರು, ತಮ್ಮ ಇಂಜಿನಿಯರಿಂಗ್ ವಿದ್ಯಾರ್ಥಿ ಜೀವನದ ಹಾಗೂ ಡಿ.ಟಿ.ಯು.ನಲ್ಲಿನ ಕಳೆದ 23 ವರ್ಷಗಳ ವೃತ್ತಿ ಜೀವನದ ಬಗ್ಗೆ ಮಾಹಿತಿ ನೀಡುತ್ತಾ, ಇಂಜಿನಿಯರ್ಸ್ ಹಾಗೂ ಸೌಂಡ್ ಇಂಜಿನಿಯರಿಂಗ್ ಪ್ರಾಕ್ಟೀಸಸ್‌ಗಳ ಪ್ರಾಮುಖ್ಯತೆ ಕುರಿತು ಮಾತನಾಡಿ, ಒಂದು ಸಣ್ಣ ತಪ್ಪಿನಿಂದ ಚೆರ್ನೋಬೆಲ್, ಭೂಪಾಲ್ ಅನಿಲ ದುರಂತಗಳು ಮುಂತಾದ ಘೋರ ಪರಿಣಾಮಗಳಾಗಿರುವುದನ್ನು




ವಿಶ್ಲೇಷಿಸುತ್ತಾ ಇಂದಿನ ಸಮಯದಲ್ಲಿ ಇಂಜಿನಿಯರ್ಸ್ ಹೆಚ್ಚಿನ ಆದ್ಯತೆ ಮತ್ತು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕಾಗಿದೆ. ಸರ್.ಎಂ.ವಿ. ಅವರು ಆ ಕಾಲದಲ್ಲಿ ನಾಡಿಗೆ, ದೇಶಕ್ಕೆ ನೀಡಿದ ಕೊಡುಗೆ ನಾವು ಸದಾ ಸ್ಮರಿಸಬಹುದಾಗಿದೆ. ಇಂದಿನ ಕಾರ್ಯಕ್ರಮದಲ್ಲಿ ತಮಗೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲು ಆಹ್ವಾನ ನೀಡಿದ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ಮತ್ತೋರ್ವ ಮುಖ್ಯ ಅತಿಥಿ ಡಾ. ಸಂಗಮೇಶ ಮಾತನಾಡಿ ಸರ್. ಎಂ.ವಿ.ರವರು ಒಬ್ಬ ವ್ಯಕ್ತಿ, ಶಕ್ತಿಯಲ್ಲದೇ ಅವರೊಬ್ಬ ಇನ್ಸ್ಟಿಟ್ಯೂಷನ್ ಆಗಿದ್ದರು ಎಂದರು. ಸರ್. ಎಂ.ವಿ.ಯವರು ಕೈಗೊಂಡ ಸುಮಾರು 47 ಕಾರ್ಯ ಯೋಜನೆಗಳ, ಸ್ಥಾಪಿಸಿದ ನಾನಾ ಸಂಸ್ಥೆಗಳ, ಕಾಲೇಜುಗಳ ಬಗ್ಗೆ ಸಂಕ್ಷಿಪ್ತ ವಿವರವನ್ನು ನೀಡಿ, ಅವರೊಬ್ಬ ಪ್ರೇರಕ ಶಕ್ತಿ, ಕರ್ಮಯೋಗಿ, ದೂರದೃಷ್ಟಿವ್ಳ ಸಮಯ ಪ್ರಜ್ಞೆ ಹೊಂದಿದ್ದ ವ್ಯಕ್ತಿ, ಅವರ ಬದುಕು ಒಂದು ದಂತಕಥೆ, ಭವ್ಯ ಮೈಸೂರಿನ ಕನ್ನಡ ನಾಡಿನ ಹಾಗೂ ಭಾರತ ದೇಶದ ಅಭಿವೃದ್ಧಿ ತಂತ್ರಜ್ಞಾನದ ಬುನಾದಿ ಹಾಕಿಕೊಟ್ಟವರು ಎಂದು ವರ್ಣಿಸಿದರು.

ಉಪಸ್ಥಿತರಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಗೌರವ ಕಾರ್ಯದರ್ಶಿಗಳೂ, ನವದೆಹಲಿ ಗುರುಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾದ ಡಾ. ಎಸ್.ಎಲ್. ಭಂಡಾರ್ ಕರ್ ಮಾತನಾಡಿ ಸರ್. ಎಂ.ವಿ.ಯವರು ದೂರದರ್ಶಿತ್ವ ಹೊಂದಿದ್ದ ಬುದ್ಧಿಜೀವಿಯಾಗಿದ್ದರು. ಮುಖ್ಯ ಅಭಿಯಂತರರಾಗಿ, ದಿವಾನರಾಗಿ ಮೈಸೂರಿನ ರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ರೊಂದಿಗೆ ನಾನಾ ಕಾರ್ಯಯೋಜನೆಗಳೊಂದಿಗೆ ನಾಡನ್ನು ಮುನ್ನಡೆಸಿದ ಧೀಮಂತ ಆಡಳಿತಗಾರ, ದಕ್ಷ ಇಂಜಿನಿಯರ್ ಎಂದರು.

ಅಧ್ಯಕ್ಷೀಯ ಭಾಷಣ ಮಾಡಿದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು, ಇಂದು ಇಂಜಿನಿಯರ್ಸ್ ದಿನ ನಮ್ಮೊಂದಿಗೆ ಇಬ್ಬರು ಪ್ರತಿಭಾವಂತ ಇಂಜಿನಿಯರ್ಸ್ ಹಾಗೂ ಪ್ರತಿಷ್ಠಿತ ಡಿ.ಟಿ.ಯು ಮತ್ತು ಜೆ.ಎನ್.ಯು. ಪ್ರೊಫೆಸರ್ ಗಳು ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಕಾರ್ಯಕ್ರಮದ ಅರ್ಥಪೂರ್ಣತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಸರ್.ಎಂ.ವಿ.ಯವರ ಜೀವನ ಆದರ್ಶಮಯ ಅವರು ಮಾಡಿದ ಸಾಧನೆ ಎಲ್ಲರಿಗೂ ಪ್ರೇರಣಾದಾಯಕ. ಅವರ ಜನ್ಮದಿವನ್ನು ನಮ್ಮ ದೆಹಲಿ ಕನ್ನಡಿಗರೊಂದಿಗೆ, ಹಿರಿಯ ಇಂಜಿನಿಯರ್ಸ್ ಆಗಿರುವ ಶ್ರೀ ಎನ್.ಎ. ಮಾಧವ, ಡಾ. ಎಸ್. ಎಲ್. ಭಂಡಾರ್‌ಕರ್, ಶ್ರೀ ಶಾಂತಕುಮಾರ್, ಶ್ರೀ ಸಂತೋಷ ಜೆ., ಶ್ರೀ ಕೆ.ಎಸ್. ಮೂರ್ತಿಯವರ ಉಪಸ್ಥಿತಿಯಲ್ಲಿ ಆಚರಿಸುತ್ತಿರುವುದು ಹಾಗು ನಮ್ಮ ದೆಹಲಿ ಕನ್ನಡಿಗರ ಮಕ್ಕಳು ಪ್ರತಿಷ್ಠಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಇಂಜಿನಿಯರ್ಸ್ ಆಗಿ ನಾನಾ ಸಂಸ್ಥೆಗಳಲ್ಲಿ ಉತ್ತಮ ಹುದ್ದೆಯಲ್ಲಿರುವುದು ತಮಗೆ ಅತೀವ ಸಂತೋಷ ತಂದಿದೆ. ಸಂಘದ ಅಮೃತ ಕಾಲದಲ್ಲಿ ಸದಸ್ಯರಿಗೆ ಅನುಕೂಲವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ, ಮುಂದೆಯೂ ಹಮ್ಮಿಕೊಳ್ಳುತ್ತಿದ್ದೇವೆ. ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಸಂಘಕ್ಕೆ ಹೊಸ ಜಾಗವನ್ನು ಪಡೆಯುವ ಮತ್ತು ಕನ್ನಡಿಗರ ಮಕ್ಕಳಿಗೆ ಯು.ಪಿ.ಎಸ್.ಸಿ. ಪರೀಕ್ಷಾ ತರಬೇತಿ ಕೇಂದ್ರ, ವಸತಿ ನಿಲಯ ಸ್ಥಾಪಿಸುವ ನಿಟ್ಟಿನಲ್ಲಿ ರೂ. 25 ಕೋಟಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲು ತಮಗೆ ಬಂದಿರುವ ಕೋರಿಕೆ ಬಗ್ಗೆ ಮಾಹಿತಿ ನೀಡಿದರು. ತಾವು 20 ವರ್ಷದಿಂದ ಸಂಘದ, ಇಲ್ಲಿನ ಕನ್ನಡಿಗರ ಸೇವೆಯನ್ನು ಕಾಯಕವೇ ಕೈಲಾಸ ವೆಂದು ಅರಿತು ಮಾಡುತ್ತಿದ್ದು ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆ ಮತ್ತು ಸಂಘದ ಸಮೀಪವಿರುವ ಮೋತಿಭಾಗ್ ಮೆಟ್ರೋ ಸ್ಟೇಷನ್‌ಗೆ ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರನ್ನಿಡಲು ಸಹಕರಿಸಿದ ಅಂದಿನ ಕೇಂದ್ರ ಮಂತ್ರಿಗಳಾದ ಶ್ರೀ ವೆಂಕಯ್ಯ ನಾಯ್ಡು, ಶ್ರೀ ಅನಂತಕುಮಾರ್, ಶ್ರೀ ಡಿ.ವಿ. ಸದಾನಂದ ಗೌಡರನ್ನು ನೆನಪಿಸಿಕೊಂಡರು. ಇಂದಿನ ಸರ್.ಎಂ.ವಿ. ಜನ್ಮ ಜಯಂತಿಯ ಕಾರ್ಯಕ್ರಮದಲ್ಲಿ ಪ್ರಸ್ತುತಿ ನೀಡಿದ ಸಂಘದ ಕನ್ನಡ ಕಲಿಕಾ ಕೇಂದ್ರದ ಮಕ್ಕಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಆಗಮಿಸಿದ ಎಲ್ಲರಿಗೂ ಇಂಜಿನಿಯರ್ಸ್ ದಿನದ ಶುಭಾಶಯಗಳನ್ನು ತಿಳಿಸಿದರು.

ಮುಖ್ಯ ಅತಿಥಿಗಳಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ವಸಂತ ಕುಮಾರ್ ಎಂ.ಬಿ. ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಜನಪ್ರಿಯ ಜಾನಪದ ಕಲಾವಿದ ಮಳವಳ್ಳಿ ಡಾ. ಮಹಾದೇವ ಸ್ವಾಮಿ, ಕರ್ನಾಟಕ ರೈತ ಚಳವಳಿ ಸಂಘಟನೆಯ ಅಧ್ಯಕ್ಷ ಶ್ರೀ ನಾರಾಯಣ ಗೌಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ದೆಹಲಿ ಹಿರಿಯರಾದ ಶ್ರೀ ಎನ್.ಎ. ಮಾಧವ, ಶ್ರೀ ವಿ.ವಿ. ಬಿರಾದಾರ, ಶ್ರೀ ನರಸಿಂಹಮೂರ್ತಿ, ಶ್ರೀ ಶಾಂತಕುಮಾರ್ ನಿಂಬಾಳ ಇಂಜಿನಿಯರ್ಸ್ ದಿನದ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ದೆಹಲಿ ಕರ್ನಾಟಕ ಸಂಘದ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಪದಾಧಿಕಾರಿಗಳು, ಸದಸ್ಯರು ಅಪಾರ ಸಂಖ್ಯೆಯಲ್ಲಿ ಸಂಘದ ಸದಸ್ಯರು, ಮಹಿಳೆಯರು, ಮಕ್ಕಳು, ದೆಹಲಿ ಎನ್.ಸಿ.ಆರ್. ಕನ್ನಡಿಗರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

***ಅಭಿಮತ ವರದಿ***



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಶ್ರೀಗಣೇಶ ಪೂಜೆಯನ್ನು ಆಡಳಿತ ಮಂಡಳಿ ಪದಾಧಿಕಾರಿಗಳು ಮತ್ತು ಸದಸ್ಯರು ಆಚರಿಸಿದ ದೃಶ್ಯ

### ಸಂಘದಲ್ಲಿ ಹಿರಿಯ ರಂಗಭೂಮಿ ಕಲಾವಿದರು, ಕನ್ನಡ ಚಲನಚಿತ್ರ ನಟರು ಭಾಗವಹಿಸಿದ ನಾಟಕೋತ್ಸವ:

# ದೆಹಲಿ ಕನ್ನಡಿಗರನ್ನು ಮನರಂಜಿಸಿದ ನಾಡಿನ ಪ್ರಸಿದ್ಧ ರಂಗ ತಂಡಗಳಿಂದ ಪ್ರಸ್ತುತಿಗೊಂಡ ಮೇರು ನಾಟಕಗಳು



ಕರ್ನಾಟಕ ಸಂಘದ ಸಭಾಂಗಣದಲ್ಲಿ ಸೆಪ್ಟೆಂಬರ್ 23 ಮತ್ತು 24, 2023 ರಂದು ಕರ್ನಾಟಕದ ಸುಪ್ರಸಿದ್ಧ ರಂಗ ತಂಡಗಳ ಐದು ಅತ್ಯುತ್ತಮ ವಿಭಿನ್ನವಾದ ನಾಟಕಗಳ ಪ್ರಸ್ತುತಿಯನ್ನೊಳಗೊಂಡ ನಾಟಕೋತ್ಸವವನ್ನು ದೆಹಲಿ ಎನ್‌ಸಿಆರ್ ನಲ್ಲಿನ ರಂಗ ಕಲಾಭಿಮಾನಿ ಕನ್ನಡಿಗರಿಗಾಗಿ ಹಮ್ಮಿಕೊಳ್ಳಲಾಗಿತ್ತು.

ಈ ನಾಟಕೋತ್ಸವದ ಉದ್ಘಾಟನೆಯನ್ನು ಸೆ. 23 ರಂದು ಮಾನ್ಯ ಕೋಲಾರ ಲೋಕಸಭಾ ಸಂಸದರಾದ ಶ್ರೀ ಎಸ್. ಮುನಿಸ್ವಾಮಿ ಅವರು ದೀಪ ಬೆಳಗುವ ಮೂಲಕ ನೆರವೇರಿಸಿದರು. ನಾಟಕಕಾರ ಹಾಗೂ ಸಾಹಿತಿ ಪ್ರೊ. ಎಚ್.ಎಸ್. ಶಿವಪ್ರಕಾಶ್, ಕನ್ನಡ ಚಲನಚಿತ್ರದ ಜನಪ್ರಿಯ ಹಿರಿಯ ನಟ ಶ್ರೀ ದೊಡ್ಡಣ್ಣ, ನಟರೂ ಹಾಗು ನಿರ್ದೇಶಕರಾದ ಡಾ. ಟಿ.ಎಸ್. ನಾಗಾಭರಣ, ಪ್ರಸಿದ್ಧ ನಟ,ಕಲಾವಿದ ಶ್ರೀ ಮಂಡ್ಯ ರಮೇಶ್, ಹಿರಿಯ ಕಲಾವಿದರಾದ ಶ್ರೀ ಮೂಗು ಸುರೇಶ್, ಅನೇಕ ಐಪಿಎಸ್, ಐಎಎಸ್ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ನಿರೂಪಿಸಿದರು. ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಅವರು ಎಲ್ಲರಿಗೂ ಆತ್ಮೀಯ ಸ್ವಾಗತ ಕೋರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ಶ್ರೀ ಎಸ್. ಮುನಿಸ್ವಾಮಿ ಅವರು ದೆಹಲಿ ಕರ್ನಾಟಕ ಸಂಘವು ಈ ಅಮೃತ ಮಹೋತ್ಸವದ ಕಾರ್ಯಕಾಲದಲ್ಲಿ ಮಾಡುತ್ತಿರುವ ಕೆಲಸಗಳು ಎಲ್ಲಾ ಕನ್ನಡಿಗರಿಗೆ ಆಶಾದಾಯಕವಾಗಿವೆ. ಸಂಘದ ಕೆಲವು ಕಾರ್ಯಕ್ರಮಗಳಲ್ಲಿ ಈ ಹಿಂದೆ ನಾನು ಭಾಗಿಯಾಗಿದ್ದೇನೆ, ಕರ್ನಾಟಕದಿಂದ ದೆಹಲಿಗೆ ಬರುವ ಕನ್ನಡಿಗರಿಗೆ ತವರುಮನೆಯಾಗಿದೆ ಹಾಗೂ ಸಂಘದ ಮುಂದಿನ ಕಾರ್ಯಯೋಜನೆಗಳಿಗೆ ಯಾವಾಗಲೂ ತಮ್ಮ ಸಹಾಯವಿರುತ್ತದೆ ಎಂದು ತಿಳಿಸಿದರು.

ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಮಾತನಾಡಿ ಶ್ರೀ ಸಿ.ಎಂ. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಅಮೃತ ಮಹೋತ್ಸವವನ್ನು ಯಶಸ್ವಿಯಾಗಿ ಆಚರಿಸಿದ ಕೀರ್ತಿ ಇವರದ್ದು. ಜೊತೆಗೆ ಪ್ರತೀವಾರ ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಾ ನಿತ್ಯೋತ್ಸವವನ್ನು ನಡೆಸುತ್ತಿದೆ. ಒಂದೇ ವೇದಿಕೆಯಲ್ಲಿ ಇಷ್ಟೊಂದು ಹಿರಿಯ ಕಲಾವಿದರನ್ನು ಕರೆತರಿಸಿರುವುದು ಖುಷಿ ತಂದಿದೆ, ಇವರ ಮುಂದಿನ ಕಾರ್ಯಯೋಜನೆಗಳು ಯಶಸ್ವಿಯಾಗಿ ಸಂಪನ್ನಗೊಳ್ಳಲಿ ಎಂದು ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ನಟ ಶ್ರೀ ದೊಡ್ಡಣ್ಣ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಅತ್ಯಂತ ಸುಂದರವಾದ 5 ನಾಟಕಗಳನ್ನು ನೀಡುವ ಜೊತೆಗೆ ಅತ್ಯಂತ ಹಿರಿಯ ಮೇರು ನಟರನ್ನು ಒಂದೇ ವೇದಿಕೆಯಲ್ಲಿ ಕೂರಿಸಿರುವುದು ನನಗೆ ಖುಷಿ ತಂದಿದೆ. ಕನ್ನಡಿಗರು ಸುಜ್ಞಾನಿಗಳು, ರಣಕಣಿಗಳು, ಅಪ್ರತಿಮ ವೀರರು, ಕ್ಷಮಾಗುಣ ಸಂಪನ್ನರು ಮತ್ತು ಪಂಡಿತೋತ್ತಮರು ಜಗತ್ತಿನ ಮೂರು ಶ್ರೇಷ್ಠ ಭಾಷೆಗಳಲ್ಲಿ ಕನ್ನಡವೂ ಒಂದು. ಅದಕ್ಕೇನೇ ನಮ್ಮ ಕನ್ನಡವನ್ನು 'ಕಸ್ತೂರಿ ಕನ್ನಡ' ಎನ್ನುತ್ತಾರೆ ಎಂದು ಬಣ್ಣಿಸಿದರು. ಸಭಾಂಗಣದಲ್ಲಿ ಉಪಸ್ಥಿತರಿದ್ದ ಪೋಷಕರಿಗೆ, ಮಕ್ಕಳಿಗೆ ಮನೆಯಲ್ಲಿ ಕನ್ನಡ ಕಲಿಸಿರಿ, ಕನ್ನಡದಲ್ಲಿ ಮಾತನಾಡಿರಿ ಎಂದು ಕರೆ ನೀಡಿ ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂದು ಹೇಳಿದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಅಲೋಚನೆ ಹಾಗೂ ಅವರ ಕಾರ್ಯಗಳಿಗೆ ನಾವು ಸದಾ ಜೊತೆ ನಿಲ್ಲುತ್ತೇವೆ ಎಂದು ಹೇಳುತ್ತಾ ನಾಟಕೋತ್ಸವಕ್ಕೆ ಶುಭ ಹಾರೈಸಿದರು.

ಕನ್ನಡ ಚಲನಚಿತ್ರ ನಟ ಶ್ರೀ ಮಂಡ್ಯ ರಮೇಶ್ ಅವರು ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ನಿರಂತರವಾಗಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿರುವುದು ಒಂದು ಸುಂದರವಾದ ಶ್ರೇಷ್ಠ ಕಲ್ಪನೆ. ರಂಗಕಲೆಗಿಂತ ಶ್ರೇಷ್ಠ ಕಲೆ ಯಾವುದೂ ಇಲ್ಲ, ಹಿರಿಯರಾದ ಶ್ರೀ ದೊಡ್ಡಣ್ಣ ಅವರು ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದು ನಮ್ಮ ನಾಟಕಗಳಿಗೆ ಶುಭ ಹಾರೈಸಿರುವುದು ನಮ್ಮ ಸೌಭಾಗ್ಯ, ಎಷ್ಟೋ

ಬೆನಕ ತಂಡದಿಂದ ನಾಟಕ : 'ಸತ್ತವರ ನೆರಳು' । ಮೂಲ ನಿರ್ದೇಶನ ಸಂಗೀತ : ಬಿ.ವಿ. ಕಾರಂತ । ಮರುನಿರ್ದೇಶನ : ಡಾ. ಟಿ.ಎಸ್. ನಾಗಾಭರಣ



ಕಲಾವಿದರಿಗೆ ಅವಕಾಶ ನೀಡುತ್ತಿರುವ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘದಲ್ಲಿ ಮಾಡುತ್ತಿರುವ ವಿಶೇಷವಾದ ಕಾರ್ಯಕ್ರಮವಾದ ಈ ನಾಟಕೋತ್ಸವದಲ್ಲಿ ಹಿರಿಯ ನಟರಾದ ಶ್ರೀ ದೊಡ್ಡಣ್ಣ ಶ್ರೀ ಮಂಡ್ಯ ರಮೇಶ್, ಶ್ರೀ ಮೂಗು ಸುರೇಶ್ ಹಾಗು ಚಲನಚಿತ್ರ ನಿರ್ದೇಶಕರಾದ ಡಾ. ಟಿ.ಎಸ್. ನಾಗಾಭರಣ ಇವರೆಲ್ಲರೂ ಒಂದೇ ವೇದಿಕೆಯಲ್ಲಿ ಉಪಸ್ಥಿತರಿರುವುದು ಮತ್ತು ಅವರನ್ನು ಪ್ರತ್ಯಕ್ಷವಾಗಿ ನೋಡುತ್ತಿರುವುದು ನಮ್ಮ ದೆಹಲಿ ಕನ್ನಡಿಗರಿಗೆ ಬಹಳ ಖುಷಿ ತಂದಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಬಂದಂತಹ ಅತಿಥಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ಮೊಟ್ಟ ಮೊದಲಿಗೆ ಹಿರಿಯ ಕಲಾವಿದರು ದೆಹಲಿ ಕರ್ನಾಟಕ ಸಂಘದಲ್ಲಿ ಒಂದೇ ವೇದಿಕೆಯಲ್ಲಿ ಬಂದು ನಾಟಕೋತ್ಸವಕ್ಕೆ ಚಾಲನೆ ನೀಡಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ತಿಳಿಸಿದರು. ಜೊತೆಗೆ ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ತಮ್ಮ ಅವಧಿಯಲ್ಲಿ 2500 ಕ್ಕೂ ಹೆಚ್ಚು ಕಲಾವಿದರಿಂದ ಪೂರ್ತಿ ವರ್ಷ ಮತ್ತು ಮಾನ್ಯ ಪ್ರಧಾನ ಮಂತ್ರಿಗಳ ಸಮ್ಮುಖದಲ್ಲಿ ನೀಡಿದ ಕಾರ್ಯಕ್ರಮಗಳು ಯಶಸ್ವಿಯಾಗಿ ಮೂಡಿ ಬಂದಿವೆ. ಸಾಂಸ್ಕೃತಿಕ ಮತ್ತು ಸಾಹಿತ್ಯಿಕವಾಗಿ ಯಶಸ್ವಿಯಾಗುತ್ತಿರುವ ಈ ಕಾರ್ಯಕ್ರಮಗಳ ಜೊತೆಗೆ ಪ್ರತೀ ವಾರ ಕಾರ್ಯಕ್ರಮಗಳನ್ನು ನೀಡಿ ಕನ್ನಡಿಗರನ್ನು ಮನರಂಜಿಸುತ್ತಾ ಕನ್ನಡವನ್ನು ಉಳಿಸುವ ಮತ್ತು ಬೆಳೆಸುವ ಕೆಲಸವನ್ನು ನಮ್ಮ ಸಂಘ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕದಿಂದ ದೆಹಲಿಗೆ ಉನ್ನತ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳಿಗೆ ವಸತಿ ನಿಲಯ ಮಾಡಬೇಕಿದೆ. ಇದಕ್ಕೆ ಈಗಾಗಲೇ ಮಾನ್ಯ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಎಚ್.ಡಿ. ದೇವೇಗೌಡರನ್ನು ಭೇಟಿ ಮಾಡಿ ಹೊಸ ಜಾಗಕ್ಕೆ ಮನವರಿಕೆ ಮಾಡಿಕೊಂಡಿದ್ದೇನೆ. ಕೇಂದ್ರ ನಗರಾಭಿವೃದ್ಧಿ ಸಚಿವರಾದ ಶ್ರೀ ಹರ್‌ದೀಪ್ ಸಿಂಗ್ ಪುರಿರವರಿಗೆ ಪತ್ರವನ್ನು ಬರೆಯುತ್ತೇನೆ. ಸ್ವತಃ ಈ ಜಾಗವನ್ನು ಕೊಡಿಸಿ ಕೊಡುತ್ತೇನೆ ಎಂದು ಭರವಸೆ ನೀಡಿದ್ದಾರೆ ಎಂಬ ಸಂತೋಷದ ವಿಷಯವನ್ನು ಕಾರ್ಯಕ್ರಮದಲ್ಲಿ ಪಾಲ್ಗೊಂಡ ದೆಹಲಿ ಕನ್ನಡಿಗರಿಗೆ ತಿಳಿಸಿದರು.

ನಂತರ ಕಾರ್ಯಕ್ರಮ ಉದ್ಘಾಟಕರಿಗೆ ಮತ್ತು ಮುಖ್ಯ ಅತಿಥಿಗಳಿಗೆ ಗೌರವ ಸಮರ್ಪಣೆ ನೀಡಲಾಯಿತು. ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ ಅವರು ಧನ್ಯವಾದಗಳನ್ನು ಅರ್ಪಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮಧ್ಯಾಹ್ನ ಶ್ರೀ ಮುದೇನೂರು ಸಂಗಣ್ಣ ವಿರಚಿತ 'ಸೂಳೆ ಸಂಕವ್ವ' ಎಂಬ ನಾಟಕವನ್ನು ಹೊಸಕೋಟೆಯ ಜನಪದರು ಸಾಂಸ್ಕೃತಿಕ ವೇದಿಕೆ ರಂಗ ಕಲಾವಿದರು ಪ್ರದರ್ಶನ ಮಾಡಿದರು.

ಮುದೇನೂರು ಸಂಗಣ್ಣನವರ ಅಪರೂಪದ ನಾಟಕ ಸೂಳೆ ಸಂಕವ್ವ 12ನೇ ಶತಮಾನದ ಬಸವಕ್ರಾಂತಿಯ ಸಮಸಮಾಜ, ಅಂಗತಾರತಮ್ಯ, ಮೇಲು ಕೀಳುಗಳ ವಿರುದ್ಧ ಧ್ವನಿ ಎತ್ತುವ ಅಂಶವುಳ್ಳ ಕಲ್ಯಾಣ ನಗರಿಯ ವೇಶ್ಯೆ ಒಬ್ಬಳು ಅನುಭವ ಮಂಟಪದ ಅರಿವಿನಿಂದ ಹಂಗುಗಿತ್ತಿಯ ಬದುಕನ್ನು ಧಿಕ್ಕರಿಸಿ ಮುಖ್ಯ ವಾಹಿನಿಗೆ ಬಂದು ಗೌರವಯುತ ಜೀವನ ನಡೆಸುವ ಪುರುಷ ಸಮಾಜದ ದೌರ್ಜನ್ಯಗಳನ್ನು ವಿರೋಧಿಸುವ ಶರಣೆಯ ಕಥೆಯಾಗಿತ್ತು.

ಅದೇ ದಿನ ಸಂಜೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಥೆಯಾಧಾರಿತ, ಹಾಸ್ಯಮಯ 'ಕೃಷ್ಣೇಗೌಡರ ಆನೆ' ನಾಟಕ ಮೈಸೂರಿನ ನಟನ ತಂಡದ ಕಲಾವಿದರಿಂದ ಪ್ರಸ್ತುತಿಗೊಂಡು ಅಪಾರ ಜನಮನ್ನಣೆ ಪಡೆಯಿತು. ಕನ್ನಡಿಗರ ಮನದಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ ಅಕ್ಷರ ಲೋಕದ ಬಗ್ಗೆ ಅತೀವ ಅಭಿಮಾನ! ಅದಕ್ಕೆ ಮುಖ್ಯ ಕಾರಣಗಳು ಹಲವಾರು. ಆದರೆ, ತೇಜಸ್ವಿ ಅನ್ನುವ ವ್ಯಕ್ತಿತ್ವವೇ ಅಪಾರ ವಿಸ್ಮಯ. ಅವರ ಬರಹಗಳ ಹಿಂದಿನ ಅಪಾರ ಅಧ್ಯಯನದ ಕೌತುಕ ಜೀವನಾನುಭವದ ಸಾರವನ್ನು ಅತ್ಯಂತ ಸಹಜವಾಗಿ, ವಿನೋದ ಶೈಲಿಯಲ್ಲಿ ಮಂಡಿಸುವ ಗುಣವೇ ವಿಶಿಷ್ಟವಾದದ್ದು. ಸಮಾಜವನ್ನು ಸ್ವಾಸ್ಥವಾಗಿಡಲು ಅವರ ತವಕ ಮತ್ತು ತನ್ನ ಸುತ್ತಲ ಪರಿಸರ ಪ್ರತಿಯೊಂದನ್ನೂ ಅಮೂಲಾಗ್ರವಾಗಿ, ಆರೋಗ್ಯವಾಗಿ ಗ್ರಹಿಸುವ ಪರಿಯೇ ಸರ್ವಕಾಲಕ್ಕೂ ಮಾದರಿ. 'ಕೃಷ್ಣೇಗೌಡರ ಆನೆ'ಯಲ್ಲಿ ಕಾಣಸಿಗುವ ಪರಿಸರ, ಊರು, ಪ್ರಾಣಿ, ಪಕ್ಷಿ, ಮನುಷ್ಯರು, ಕಾಡು, ತೋಟ, ಕಛೇರಿ, ರಸ್ತೆ, ಸರಕಾರ. ಎಲ್ಲವೂ ಪ್ರಪಂಚದ ಪ್ರತಿನಿಧಿಗಳು, ಎದುರಿಸುತ್ತಿರುವ ಸಮಸ್ಯೆ; ಜಗತ್ತಿನ ತಲ್ಲಣಗಳವು. ದಶಕಗಳ ಹಿಂದೆ ಬರೆದ ಈ ಕಥೆಯ ಸತ್ಯಗಳು ಸಾರ್ವತ್ರಿಕವಾದವು. ಈ ಪ್ರಸ್ತುತಿಯಲ್ಲಿ ಮೂಡಿಗೆರೆ ದಾಟಿ ಕರ್ನಾಟಕದ ಹಲ ಪ್ರಾಂತ್ಯಗಳ ವಿಶ್ವವನ್ನು ಪರಿಚಯಿಸುವ ಪ್ರಯತ್ನವನ್ನು, ಹೊಸ ನಟರ ಮೂಲಕ ಲೋಕ ಕಟ್ಟುವ, ಏಣಿಯಾಟದಲ್ಲಿ ಮುಳುಗೇಳುವ ಸಾಹಸವನ್ನು ರಂಗತಂಡ ಮಾಡಿತ್ತು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಶ್ರೀ ಮಂಡ್ಯ ರಮೇಶ್ ಅವರು ಮೈಸೂರಿನ ತಮ್ಮ ನಟನ ತಂಡದ ಸಾಧನೆಗಳನ್ನು ಪ್ರೇಕ್ಷಕರಿಗೆ ತಿಳಿಸಿಕೊಟ್ಟರು. ಹಲವಾರು ದೆಹಲಿ ಕನ್ನಡಿಗರು ತಮ್ಮ ಮೆಚ್ಚುಗೆ ಮಾತುಗಳನ್ನು ವ್ಯಕ್ತಪಡಿಸಿದರು.

ಸೆಪ್ಟೆಂಬರ್ 24ರ ಪೂರ್ವಾಹ್ನ ಇನ್ನೊಂದು ಸ್ವಾರಸ್ಯಕರ ನಾಟಕ ಖ್ಯಾತ ಸಾಹಿತಿ, ನಾಟಕಕಾರ ಶ್ರೀ ಕೆ.ವೈ. ನಾರಾಯಣ ಸ್ವಾಮಿ ವಿರಚಿತ 'ಮಾಯಾಬೇಟೆ' ಪ್ರಸ್ತುತಿಗೊಂಡಿತು. ಬೆಂಗಳೂರಿನ ದೃಶ್ಯಕಾವ್ಯ ತಂಡದ ಕಲಾವಿದರು ಈ ನಾಟಕವನ್ನು ಪ್ರದರ್ಶಿಸಿ ಜನರ ಮೆಚ್ಚುಗೆ ಪಡೆದರು.

ಆದರ್ಶ ನಾರಿಯ ಕಲ್ಪನೆಯೊಂದನ್ನು ಕಟ್ಟಿಕೊಡುವ ಧಾವಂತದಲ್ಲಿ, ಮಹಿಳೆಯನ್ನು ಅವಾಸ್ತವಿಕ ನಿಯಮಗಳಿಗೆ ಒಳಗಿಸಿ ಬಲಿಪಶುವನ್ನಾಗಿ ಮಾಡಿದ್ದೇವಲ್ಲವೇ? ದುರದೃಷ್ಟವಶಾತ್, ಮಹಿಳೆಯು ಕೂಡ ಇದನ್ನು ಪ್ರಶ್ನಿಸಿಕೊಂಡಿರಲಾರಳು. ಹೊರನೋಟಕ್ಕೆ ಜಗತ್ತು ಸ್ತ್ರೀ ಕುಲದ ಬಗ್ಗೆ ವಿಶಾಲ ಮನೋಭಾವ ಹೊಂದಿರುವಂತೆ ಕಂಡು ಬಂದರೂ, ಆಕೆ ಮೇಲಿನ ಅಧಿಕಾರಭಾವ, ಶೋಷಣೆ ಮತ್ತು ಆಕೆಯ ತಾಳ್ಮೆಯ ಪರೀಕ್ಷೆ ಎಲ್ಲಾ ಕಾಲಘಟ್ಟಗಳಲ್ಲೂ ಒಂದೇ ಆಗಿದೆ, ರೂಪಗಳು ಬೇರೆ ಅಷ್ಟೇ. ನವಿರಾದ ಪ್ರೀತಿ ಮತ್ತು ವಿಶ್ವಾಸಘಾತುಕ ಕಥೆಗಳೊಂದಿಗೆ, ನಾವು ಇಲ್ಲಿಯವರೆಗೆ ಗಮನಿಸದ ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲುವ ಮತ್ತು ಉತ್ತರ ಹುಡುಕುವ ನಿಟ್ಟಿನಲ್ಲಿ ನಿನ್ನೆ, ಇಂದುಗಳಾಚೆಗಿನ ಪಯಣ ಹಾಗೂ ನಾಳೆಗಳ ಅನ್ವೇಷಣೆಯೇ ಮಾಯಾಬೇಟೆ, ಇತಿಹಾಸವು ತನ್ನೊಳಗೆ ಹುದುಗಿಸಿಟ್ಟಿರಬಹುದಾದ ಅದೆಷ್ಟೋ ನವಿರಾದ ಪ್ರೀತಿ ಮತ್ತು ವಿಶ್ವಾಸಘಾತುಕ ಕಥೆಗಳ ಎಳೆಗಳೊಂದಿಗೆ, ಸತ್ಯತೆಯ ಅನಾವರಣವೇ ಈ ಮಾಯಾಬೇಟೆ ನಾಟಕವಾಗಿತ್ತು.

ಭೋಜನದ ವಿರಾಮದ ನಂತರ ಅಪರಾಹ್ನ ಜನಪ್ರಿಯ ರಂಗ ಕಲಾವಿದ, ಚಲನಚಿತ್ರ ನಟ ಶ್ರೀ ಮೂಗು ಸುರೇಶ್‌ರವರ ಬೆಂಗಳೂರಿನ ಸಾಫಲ್ಯ ರಂಗ ತಂಡದ ಕಲಾವಿದರಿಂದ ಶ್ರೀ ಎಲ್.ಎನ್. ಮುಕುಂದರಾಜ್ ವಿರಚಿತ, 'ವೈಶಂಪಾಯನ ತೀರ' ನಾಟಕ ಪ್ರದರ್ಶನಗೊಂಡು ನೆರೆದಿದ್ದ ನಾಟಕಪ್ರಿಯರ ಅಪಾರ ಕರತಾಡನಗಳ ಮೆಚ್ಚುಗೆ ಪಡೆಯಿತು.

ರುದ್ರಗಿರಿಯ ಶ್ರೇಷ್ಠ ಯಕ್ಷಗಾನ ಕಲಾವಿದರಾದ ಕೃಷ್ಣ ಭಟ್ಟ, ಕಲ್ಯಾಣಿ ಹಾಗೂ ವೆಂಕಪ್ಪ ಹೆಗಡೆ ನಡುವೆ ನಡೆಯುವ ಮಾನಸಿಕ ಸಂಘರ್ಷವೇ 'ವೈಶಂಪಾಯನ ತೀರ'. ನಾಟಕದ ಸಾಮಾನ್ಯ ಪಾತ್ರಗಳು ಮುಖ್ಯ ಪಾತ್ರಗಳ ಪರ ವಿರೋಧಗಳನ್ನು ವ್ಯಕ್ತಪಡಿಸುತ್ತವೆ. ವೃತ್ತಿ ವೈಷಮ್ಯದಿಂದ ವೆಂಕಪ್ಪ ಹೆಗಡೆ ಯಕ್ಷಗಾನ ಕಲಾವಿದೆಯಾದ ಕೃಷ್ಣ ಭಟ್ಟರ ಹೆಂಡತಿ ಕಲ್ಯಾಣಿಯನ್ನು ಒಲಿಸಿಕೊಂಡಾಗ ಮಾನಸಿಕ ಆಘಾತಕ್ಕೆ ಒಳಗಾದ ಕೃಷ್ಣ ಭಟ್ಟ 15 ವರ್ಷಗಳ ಕಾಲ ಊರನ್ನು ಬಿಟ್ಟು ಹೋಗುತ್ತಾನೆ. ಇತ್ತ ಕಲ್ಯಾಣಿ ಹುಚ್ಚಿಯಾಗುತ್ತಾಳೆ. ಪುನಃ ಊರಿಗೆ ಬಂದ ಕೃಷ್ಣ ಭಟ್ಟ ಉದ್ರಿಕ್ತನಾಗಿ ಗದಾಯುದ್ಧ ಪ್ರಸಂಗದಲ್ಲಿ ದುರ್ಯೋಧನ ಹೆಗಡೆಯೊಂದಿಗೆ ಭೀಮನಾಗಿ ಸೆಣಸಿ ತನ್ನ ಸಂಸಾರವನ್ನು ಹಾಳು ಮಾಡಿದವನ ತೊಡೆಯನ್ನು ಕಾಳಗದಲ್ಲಿ ಮತ್ತು ವಾಸ್ತವವಾಗಿ ಮುರಿದು ಸೇಡು ತೀರಿಸಿಕೊಳ್ಳುವ ಪ್ರಸಂಗವನ್ನು ಅತ್ಯದ್ಭುತವಾಗಿ ನಾಟಕದಲ್ಲಿ ಬಿಂಬಿಸಲಾಗಿತ್ತು.

ನಾಟಕದ ನಂತರ ಶ್ರೀ ಮೂಗು ಸುರೇಶ್ ಅವರು



ದೃಶ್ಯಕಾವ್ಯ ತಂಡದ ನಾಟಕ : ಮಾಯಾಬೇಟೆ,
ನಿರ್ದೇಶನ : ಶ್ರೀ ಸಿ. ನಂಜುಂಡೇ ಗೌಡ

ತಮ್ಮ ಸಾಫಲ್ಯ ರಂಗತಂಡವು ನಡೆದು ಬಂದ ದಾರಿಯನ್ನು ಅವಲೋಕಿಸುತ್ತಾ, ತಮ್ಮ ತಂಡಕ್ಕೆ ಇಲ್ಲಿನ ವೇದಿಕೆಯಲ್ಲಿ ನಾಟಕ ಪ್ರದರ್ಶನ ಮಾಡಲು ಅವಕಾಶ ನೀಡಿದ್ದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಸೆ. 24ರ ಸಂಜೆ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಿರ್ದೇಶಕ ಡಾ. ಟಿ.ಎಸ್. ನಾಗಾಭರಣ, ಚಲನಚಿತ್ರ ನಟ ಶ್ರೀ ಮೂಗು ಸುರೇಶ್ ಹಾಗೂ ಹಿರಿಯ ಐ.ಪಿ.ಎಸ್. ಅಧಿಕಾರಿ ಶ್ರೀ ರಾಜಶೇಖರ್ ಅವರು ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ಹಾಗು ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ವೇದಿಕೆಯಲ್ಲಿದ್ದರು. ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಕಾರ್ಯಕ್ರಮದ ನಿರೂಪಣೆ ನಿರ್ವಹಿಸಿದರು. ಸದಸ್ಯ ಶ್ರೀ ಸಂತೋಷ ಜೆ ಅತಿಥಿಗಳನ್ನು ಸಭಾಂಗಣದಲ್ಲಿ ನೆರೆದಿದ್ದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಡಾ. ಟಿ.ಎಸ್. ನಾಗಾಭರಣ ಮತ್ತು ಶ್ರೀ ಮೂಗು ಸುರೇಶ್ ಅವರನ್ನು ಸಂಘದ ಪರವಾಗಿ ಗೌರವಿಸಿ ಅಭಿನಂದಿಸಲಾಯಿತು. ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ದೆಹಲಿ ಕನ್ನಡಿಗರಿಂದ ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಸಂಜೆ 6.30 ಗಂಟೆಗೆ ಪ್ರಸ್ತುತಿಗೊಂಡ ಶ್ರೀ ಜಿ.ಬಿ. ಜೋಷಿ ವಿರಚಿತ, ಬೆಂಗಳೂರು ಬೆನಕ ತಂಡದ ಕಲಾವಿದರಿಂದ ಪ್ರದರ್ಶನಗೊಂಡ ನಾಟಕ 'ಸತ್ತವರ ನೆರಳು' ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿತು.

ಸತ್ತವರ ನೆರಳು ನಾಟಕ ಒಂದು ಸೃಜನಶೀಲ ರಂಗ ಅಭಿವ್ಯಕ್ತಿಯಾಗಿದೆ. ಜಡ ಭಾರತರೆಂದೇ ಖ್ಯಾತರಾದ ಜಿ.ಬಿ. ಜೋಶಿಯವರು ಈ ನಾಟಕದಲ್ಲಿ ಒಂದು ತಾತ್ವಿಕ ನೆಲೆಗಟ್ಟಿನಲ್ಲಿ ನಮ್ಮ ಸಮಾಜದಲ್ಲಿ ಬೇರೂರಿರುವ ದೃಢವಾದ ನಂಬಿಕೆಗಳ ಸಾರ್ಥಕತೆಗೆ ಇರಬೇಕಾದ ಮೂಲಭೂತ ಅವಶ್ಯಕತೆಗಳು ಇಲ್ಲದ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳನ್ನು ತೋರಿಸಿದ್ದಾರೆ. ನಾರಾಯಣನನ್ನು ಬಲವಂತವಾಗಿ ಸನ್ಯಾಸಕ್ಕೆ ಎಳೆದು ಮಠದ ಪೀಠಾಧಿಪತಿಯನ್ನಾಗಿ ಮಾಡಲಾಗುತ್ತದೆ. ದಿವಾನ್ ಕೃಷ್ಣಾಚಾರ್ಯರ ಕೈವಾಡ ಹಾಗು ದುರುದ್ದೇಶದಿಂದಾಗಿ ಪ್ರಚಲಿತದಲ್ಲಿರುವ ಶ್ರೀಗಳು ಅವನನ್ನು ನಿಗ್ರಹಿಸಲು ಸಾಧ್ಯವಾಗದೇ ಧಾರ್ಮಿಕ ಪರಿಸರಕ್ಕೆ ಚ್ಯುತಿ ಉಂಟಾಗಿ, ಸ್ವಾರ್ಥವೇ ಗೆಲ್ಲುತ್ತದೆ. ಬ್ರಹ್ಮಚರ್ಯ ಮತ್ತು ಪೀಠಾಧಿಪತ್ಯ ಒಲ್ಲದ ನಾರಾಯಣನಿಗೆ ಆಧ್ಯಾತ್ಮಿಕತೆಯನ್ನು ಹುಡುಕುತ್ತಾ ದಿನನಿತ್ಯ ಮಠಕ್ಕೆ ಧಾವಿಸುತ್ತಿರುವ ಬುದ್ಧಿಜೀವಿಗಳ ಎದುರು ನಿಂತಾಗ ಉಸಿರುಗಟ್ಟಿದ ಅನುಭವ! ಕಥೆಯ ಮಧ್ಯದಲ್ಲಿ ಬರುವ ಜರ್ಮನ್ ತರುಣಿ ಹಾಗು ಶ್ರೀನಿವಾಸಾಚಾರ್ಯ ಅಥವಾ ಹಲ್ಪುಡಿ ಶೀನನ ಪಾತ್ರಗಳು ನಾರಾಯಣನ ಅಂತಃಸತ್ವದಲ್ಲಿ ಪ್ರಶ್ನೆ ಹಾಗು ತುಮುಲಗಳನ್ನೆಬ್ಬಿಸಿ, ಪ್ರೇಕ್ಷಕರ ಮನದಲ್ಲಿ ಉಳಿಯುವಂತಾಯಿತು. ಈ ನಾಟಕದಲ್ಲಿ ಡಾ. ಟಿ.ಎಸ್. ನಾಗಾಭರಣರವರು ಸ್ವತಃ ಪಾತ್ರ ಮಾಡಿ ಮನೋಜ್ಞ ಅಭಿನಯ ನೀಡಿದರು. ನಂತರ ನಡೆದ ಸಂವಾದದಲ್ಲಿ ದೆಹಲಿ ಕನ್ನಡಿಗರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶ್ರೀ ನಾಗಾಭರಣ ಅವರು, ಬಿ.ವಿ. ಕಾರಂತರು ಕಟ್ಟಿದ ಬೆನಕ ತಂಡ ತಮ್ಮ ನಾಟಕ ಪ್ರಸ್ತುತಿಗಳೊಂದಿಗೆ ಕಾರಂತರನ್ನು ಸದಾ ಜೀವಂತವಾಗಿಡಲು ಪ್ರಯತ್ನ ಮಾಡುತ್ತಿದೆ, ನಾಟಕ ಪ್ರದರ್ಶನದ ಸಮಯ ಪ್ರೇಕ್ಷಕರು ಮಕ್ಕಳ ಸದ್ದು ಗದ್ದಲವಿಲ್ಲದೆ, ನಿಶ್ಯಬ್ದವಾಗಿ ವೀಕ್ಷಿಸುವುದು ನಾಟಕ ಅಭಿನಯ ಮಾಡುವವರಿಗೆ ಏಕಾಗ್ರತೆ ಮತ್ತು ಹೆಚ್ಚಿನ ಪ್ರೋತ್ಸಾಹ ನೀಡುವುದು ಎಂದು ಕಿವಿ ಮಾತು ಹೇಳಿದರು.



ಹೊಸಕೋಟೆ ಜನಪದ ಸಾಂಸ್ಕೃತಿಕ ವೇದಿಕೆ ರಂಗತಂಡದಿಂದ ನಾಟಕ : 'ಸೂಳೆ ಸಂಕವ್ವ', ನಿರ್ದೇಶನ : ಶ್ರೀ ರಾಮಕೃಷ್ಣ ಬೆಳತ್ತೂರು



ನಟನ ತಂಡದಿಂದ ನಾಟಕ : 'ಕೃಷ್ಣೇಗೌಡರ ಆನೆ', ನಿರ್ದೇಶನ : ಶ್ರೀ ಮಂಡ್ಯ ರಮೇಶ್



ಸಾಫಲ್ಯ ತಂಡದಿಂದ ನಾಟಕ : 'ವೈಶಂಪಾಯನ ತೀರ', ನಿರ್ದೇಶನ : ನವದೆಹಲಿ ಎನ್.ಎಸ್.ಡಿ.ಯ ಶ್ರೀಮತಿ ಸವಿತ ಪ್ರಸನ್ನ

ದೆಹಲಿ ಕರ್ನಾಟಕ ಸಂಘದ ವತಿಯಿಂದ ಶ್ರೀ ರಾಮಕೃಷ್ಣ ಬೆಳತ್ತೂರು ಹಾಗೂ ಜನಪದ ಸಾಂಸ್ಕೃತಿಕ ವೇದಿಕೆ ಕಲಾವಿದರನ್ನು, ಶ್ರೀ ಮಂಡ್ಯ ರಮೇಶ್ ಹಾಗೂ ನಟನ ತಂಡದವರನ್ನು ಶ್ರೀ ಮೂಗು ಸುರೇಶ್ ಹಾಗೂ ಸಾಫಲ್ಯ ರಂಗ ತಂಡದ ಕಲಾವಿದರನ್ನು ಶ್ರೀ ನಂಜುಂಡೇ ಗೌಡ ಮತ್ತು ದೃಶ್ಯ ಕಾವ್ಯ ತಂಡದ ಸದಸ್ಯರನ್ನು ಹಾಗೂ ಬೆನಕ ತಂಡದ ನಾಟಕ ಕಲಾವಿದರನ್ನು ಪದಕ, ಪ್ರಶಸ್ತಿಪತ್ರಗಳನ್ನು ನೀಡಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಸಂಘದ ಈ ನಾಟಕೋತ್ಸವದಲ್ಲಿ ಭಾಗವಹಿಸಿದ ಎಲ್ಲಾ ರಂಗ ತಂಡಗಳ ಮುಖ್ಯಸ್ಥರಿಗೆ, ನಾಟಕ ನಿರ್ದೇಶಕರಿಗೆ, ಚಲನಚಿತ್ರ ನಟ, ರಂಗ ಕಲಾವಿದರಿಗೆ, ಅತ್ಯುತ್ತಮ ಅಭಿನಯ ನೀಡಿದ ಎಲ್ಲಾ ನಾಟಕ ಕಲಾವಿದರಿಗೆ ಅವರೊಂದಿಗೆ ಬೆಳಕು, ಪ್ರಸಾಧನ, ಧ್ವನಿ, ಸಂಗೀತ ನೀಡಿದ ಕಲಾವಿದರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು.

ಸಂಘದ ಅಮೃತ ಮಹೋತ್ಸವ ಕಾರ್ಯಕಾಲದಲ್ಲಿ ಆಯೋಜನೆಗೊಂಡ ನಾಟಕೋತ್ಸವದಲ್ಲಿ ಕರ್ನಾಟಕದಿಂದ ಬಂದಿದ್ದ ಐದು ರಂಗ ತಂಡಗಳ 140ಕ್ಕೂ ಹೆಚ್ಚು ನಾಟಕ ಕಲಾವಿದರು ತಮ್ಮ ಅಮೋಘ ಅಭಿನಯದಿಂದ ದೆಹಲಿ ಕನ್ನಡಿಗರ ಮನರಂಜಿಸಿದರು.

***ಅಭಿಮತ ವರದಿ***

# ಜನಕಪುರಿ ಕನ್ನಡ ಕೂಟ ಮತ್ತು ಮಹಿಳಾ ಮಂಡಳಿ ವತಿಯಿಂದ ಗಣೇಶ ಪೂಜೆ ಆಚರಣೆ



ಜನಕಪುರಿ ಕನ್ನಡ ಕೂಟದ 47ನೇ ಗಣೇಶ ಉತ್ಸವದ ಕಾರ್ಯಕ್ರಮವನ್ನ ವಿಕಾಸಪುರಿಯ ನೈಟಿಂಗೇಲ್ ಅಪಾರ್ಟ್‌ಮೆಂಟ್‌ನಲ್ಲಿರುವ ಸಮುದಾಯ ಭವನದಲ್ಲಿ 28.09.2023 ರಂದು ಕನ್ನಡ ಕೂಟದ ಎಲ್ಲಾ ಸದಸ್ಯರುಗಳನ್ನೊಳಗೊಂಡು ಪೂಜಾ ವಿಧಿ ವಿಧಾನಗಳಿಂದ ಚೊಕ್ಕವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು. ಜನಕಪುರಿ ಮಹಿಳಾ ಮಂಡಳಿಯವರ ಭಜನೆಯಿಂದ ಆರಂಭವಾಗಿ, ವಿಘ್ನೇಶ್ವರನ ಸ್ಥಾಪನೆ ಮಾಡಿ, ಪೂಜೆ ಮಾಡಿದ ಶ್ರೀಮತಿ ಲಾವಣ್ಯ ಬಸವರಾಜ ಮತ್ತು ಡಾ. ಬಸವರಾಜ ದಂಪತಿಗಳು ವಿಘ್ನೇಶ್ವರನ ಅನುಗ್ರಹಕ್ಕೆ ಪಾತ್ರರಾಗಿದ್ದಲ್ಲದೇ ಕೂಟದ ಮತ್ತು ಮಹಿಳಾ ಮಂಡಳಿಯ ಎಲ್ಲಾ ಸದಸ್ಯರುಗಳು ವಿಘ್ನೇಶ್ವರನ ಆಶೀರ್ವಾದವನ್ನು ಪಡೆದುಕೊಂಡರು.



ಈ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಅವರ ಪತ್ನಿ ಶ್ರೀಮತಿ ಶೋಭಾ ನಾಗರಾಜ, ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀ ವಸಂತ ಕುಮಾರ್ ಎಂ.ಬಿ. ಅವರುಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ವಿಜೃಂಭಣೆಗೆ ಮೆರುಗನ್ನು ತಂದು ನೀಡಿದರು. ವಿಘ್ನೇಶ್ವರನ ಪ್ರಸಾದವನ್ನು ಪ್ರಾಯೋಜಿಸಿ ಜನಕಪುರಿ ಕನ್ನಡ ಕೂಟಕ್ಕೆ ಯಾವುದೇ ರೀತಿಯಾದ ಹಣದ ಭಾರವಾಗದಂತೆ ನೋಡಿಕೊಂಡ ಡಾ. ಎಂ.ಎಸ್. ಶಶಿಕುಮಾರ್ ಅವರಿಗೆ ಕೃತಜ್ಞತೆಗಳು.

ಪೂಜಾ ಕಾರ್ಯಕ್ರಮ ಮತ್ತು ಪ್ರಸಾದ ವಿನಿಯೋಗದ ನಂತರ ಶ್ರೀ ಗಣೇಶನನ್ನು ಭಕ್ತಿಪೂರ್ಣವಾಗಿ ಕರೆದೊಯ್ದು ರೋಹಿಣಿ ಕೊಳದಲ್ಲಿ ವಿಸರ್ಜನೆ ಮಾಡಲಾಯಿತು.

ಈ ಕಾರ್ಯಕ್ರಮಕ್ಕೆ ಬೆಂಬಲ ನೀಡಿದ ಜನಕಪುರಿ ಕನ್ನಡ ಕೂಟದ ಹಿರಿಯ ಸದಸ್ಯರಾದ ಶ್ರೀ ಅಶೋಕ ಹನುಮಸಾಗರ್, ಡಾ. ಅಶೋಕ್ ಎಂ.ಈಟಿ, ಡಾ. ಶ್ರೀ ಗಂಗಾಧರ್ ಶ್ರೀ ನರಸಿಂಹಮೂರ್ತಿ, ಶ್ರೀ ಚಂದ್ರಶೇಖರ, ಶ್ರೀ ಶೇಷಗಿರಿ ನಾಯಕ್‌ರವರಿಗೆ ಹಾಗು ದೆಹಲಿ, ಗುರುಗಾಂವ್‌ನಿಂದ ಆಗಮಿಸಿದ್ದ ಕನ್ನಡಿಗ ಮಿತ್ರರಿಗೆ ಮತ್ತು ಅವರ ಕುಟುಂಬದವರಿಗೆ ವಂದನೆಗಳು.

ತಾಯಿನಾಡಿನಿಂದ ದೆಹಲಿಗೆ ಬಂದಂತಹ ಸಂಸ್ಕೃತ ಪಂಡಿತರಾದ ಶ್ರೀ ಗಣೇಶ ಅವರು ಪೂಜಾ ವಿಧಿ ವಿಧಾನಗಳನ್ನು ತುಂಬಾ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಸಹಕರಿಸಿದ ಕೂಟದ ಕಾರ್ಯದರ್ಶಿ ಉಡುಪಿ ಶ್ರೀ ಹರಿ ಭಟ್ ಮತ್ತು ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರುಗಳಿಗೂ ಹಾಗೂ ಮಹಿಳಾ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಮಾಲಿನಿ ಪ್ರಹ್ಲಾದ್,ಕಾರ್ಯದರ್ಶಿ ಶ್ರೀಮತಿ ನಯನಾ ಮಾನಕಾಪುರೆ ಮತ್ತು ಎಲ್ಲಾ ಸದಸ್ಯರುಗಳಿಗೂ ನನ್ನ ತುಂಬು ಹೃದಯದ ವಂದನೆಗಳು. ಶ್ರೀ ವಿಘ್ನೇಶ್ವರನು ನಿಮ್ಮೆಲ್ಲರಿಗೂ ಆಯುರ್ ಆರೋಗ್ಯ, ಐಶ್ವರ್ಯ ಎಲ್ಲವನ್ನು ನೀಡಿ ಕಾಪಾಡಲಿ ಎಂದು ಬೇಡಿಕೊಳ್ಳುತ್ತೇನೆ.

**ಶ್ರೀ ಎನ್.ಆರ್. ಶ್ರೀನಾಥ್**
ಅಧ್ಯಕ್ಷರು, ಜನಕಪುರಿ ಕನ್ನಡ ಕೂಟ

# 25ನೇ ವರ್ಷದ ಗಣೇಶ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ ಗುರುಗಾಂವ್ ಕನ್ನಡ ಸಂಘ



ಗುರುಗಾಂವ್ ಕನ್ನಡ ಸಂಘದ ವತಿಯಿಂದ ಸೆಪ್ಟೆಂಬರ್ 19 ರಿಂದ 23, 2023 ವರೆಗೆ ಅಪಾರ ಭಕ್ತ ಸಮೂಹದ ಮಧ್ಯೆ ರಜತ ವರ್ಷದ ಗಣಪತಿ ಉತ್ಸವವನ್ನು ಆಚರಿಸಲಾಯಿತು.

ಸೆ. 19ರ ಬೆಳಿಗ್ಗೆ 10:00 ಗಂಟೆಗೆ ರಾಧಾಕೃಷ್ಣ ಮಂದಿರ ನ್ಯೂ ಕಾಲೋನಿ ಗುರುಗಾಂವ್‌ನಲ್ಲಿ ಪ್ರತಿಷ್ಠಾಪನೆಯಾದ ಗಣೇಶನು ಸುಮಾರು 06 ದಿನಗಳ ಕಾಲ ಅಪಾರ ಭಕ್ತ ಸಮೂಹವನ್ನು ಭಕ್ತಿಯಲ್ಲಿ ಲೀನವಾಗುವಂತೆ ಮಾಡಿ ಎಲ್ಲರ ಹರಕೆಗಳನ್ನು ಕೇಳಿ ಸೆ. 24 ರಂದು ಬಸಾಯ್ ಕೆರೆಯಲ್ಲಿ ತಾಯಿ ಪಾರ್ವತಿ ಮಡಿಲಲ್ಲಿ ಸೇರಿದನು.

ಈ ಆರು ದಿನಗಳಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಗುರುಗಾಂವ್ ಸಂಘದ ಕನ್ನಡ ಗೃಹಿಣಿಯರು ವಿವಿಧ ರೀತಿಯ ಉಪಹಾರಗಳು, ತಿನಿಸುಗಳು ಮತ್ತು ಪ್ರಸಾದಗಳನ್ನು ಮಾಡಿ ಪ್ರತಿ ದಿನ ಪೂಜೆಗೆ ಆಗಮಿಸುತ್ತಿದ್ದ ಉತ್ತರ ಭಾರತೀಯರ ಮನ ಗೆದ್ದರು.

ಈ ಗಣೇಶ ಉತ್ಸವದ ವಿಶೇಷ , ಆಶ್ಚರ್ಯ ಮತ್ತು ಆಕಸ್ಮಿಕ ಎಂದರೆ ಕರ್ನಾಟಕದ ಹೆಸರಾಂತ ಚಲನಚಿತ್ರ ನಟ ಶ್ರೀ ದೊಡ್ಡಣ್ಣ ಅವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ನಮ್ಮ ಗುರುಗಾಂವ್ ಕನ್ನಡ ಸಂಘಕ್ಕೆ ಕರೆದುಕೊಂಡು ಬಂದು ನಮ್ಮ ಎಲ್ಲಾ ಪದಾಧಿಕಾರಿಗಳನ್ನು ಪರಿಚಯ ಮಾಡಿಸಿದ್ದು ಅವರ ಜೊತೆ ಕನ್ನಡವೇ ಸತ್ಯ ರಂಗಣ್ಣ ಮತ್ತು ಚಲನಚಿತ್ರ ನಿರ್ಮಾಪಕರಾದ ಶ್ರೀ ವೇದವ್ಯಾಸ್ ಇದ್ದರು. ಶ್ರೀ ದೊಡ್ಡಣ್ಣ ಅವರು ಅಷ್ಟೊಂದು ಪ್ರಸಿದ್ಧ ವ್ಯಕ್ತಿ ಆಗಿದ್ದರೂ ಕೂಡ, ಈ ಪೂಜೆಯಲ್ಲಿ ಭಾಗಿಯಾಗಿ ವಿನಾಯಕನ ಬಗ್ಗೆ ಸ್ವಾರಸ್ಯಕರವಾದ ಪ್ರಸಂಗ ಹೇಳಿ ಎಲ್ಲರನ್ನೂ ಹರಸಿದರು. ಅವರನ್ನು ನಮ್ಮ ಸಂಘದ ಕಾರ್ಯಕ್ರಮಕ್ಕೆ ಕರೆದುಕೊಂಡು ಬಂದಿದ್ದಕ್ಕೆ ಸಿ.ಎಂ. ನಾಗರಾಜ ಮತ್ತು ಸಂತೋಷ ಜೆ ಅವರಿಗೆ ಹೃದಯ ಪೂರ್ವಕ ಧನ್ಯವಾದಗಳು. ಬುಧವಾರ ಮತ್ತು ಶುಕ್ರವಾರ ಪ್ರಸಾದ ಹಂಚಿದ ಮಹಾರಾಜ ಕ್ಯಾಟರರ್ಸ್ ಮತ್ತು ತಲ್ವಾರ್ ಕ್ಯಾಟರರ್ಸ್ ಅವರಿಗೆ ಕೃತಜ್ಞತೆಗಳು. ಶನಿವಾರ ನಡೆದ ಸ್ಥಳೀಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಗಾಯಕರು ಕೋಗಿಲೆಯಂತೆ ಹಾಡಿದರು, ಮಕ್ಕಳು, ನವಿಲುಗಳಂತೆ ನಾಟ್ಯಮಾಡಿದರೆ, ಶ್ರೀ ಸಾಯಿಪ್ರಸಾದ್ ಸರ್ ಕೃಷ್ಣನಂತೆ ಕೊಳಲು ವಾದನ ಮಾಡಿದರು.

ಶನಿವಾರ ರಾತ್ರಿ ಮುಖ್ಯ ಆತಿಥಿಯಾಗಿ ಬಂದಿದ್ದ ಹರಿಯಾಣ ರಾಜ್ಯದ ಪರಿಸರ ವಿಭಾಗದ ಪ್ರಮುಖರು ಮತ್ತು ಕೆನ್ವಿನ್ ಆರೋಗ್ಯ ಫೌಂಡೇಶನ್ ಸಹ ಸಂಸ್ಥಾಪಕರರೂ ಆದ ಶ್ರೀ ನವೀನ್ ಗೋಯಲ್ ಅವರು ಎಲ್ಲಾ ಕನ್ನಡ ಬಂಧುಗಳನ್ನು ಉದ್ದೇಶಿಸಿ ಮಾತನಾಡಿ, ಎಲ್ಲರೂ ತಮ್ಮ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗಬೇಕು ಎಂದರು.

ಆರು ದಿನಗಳ ಪೂಜೆಗಳಲ್ಲಿ ಅಲಂಕಾರ, ಪ್ರಸಾದ ತಯಾರಿಕೆ, ವಿನಿಯೋಗ ಹಾಗು ಇತರ ಕಾರ್ಯಗಳಲ್ಲಿ ಗಣಪತಿ ಉತ್ಸವಕ್ಕೆ ಸಹಕರಿಸಿದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಎಲ್ಲಾ ಸದಸ್ಯರು, ಮಾರ್ಗದರ್ಶನ ನೀಡಿದ ಹಿರಿಯರು, ದೆಹಲಿ ಎನ್‌ಸಿಆರ್ ಕನ್ನಡಿಗರು, ಮಹಿಳೆಯರು ಮತ್ತು ಮಕ್ಕಳಿಗೆ ಧನ್ಯವಾದಗಳು. ಎಲ್ಲರಿಗೂ ಶ್ರೀ ಗಣೇಶ ಚತುರ್ಥಿಯ ಹಾರ್ದಿಕ ಅಭಿನಂದನೆಗಳು.

**ಶ್ರೀ ಚಂದ್ರಶೇಖರ ಜೋಳದರಾಶಿ**
ಪ್ರಧಾನ ಕಾರ್ಯದರ್ಶಿ, ಗುರುಗಾಂವ್ ಕನ್ನಡ ಸಂಘ

# ಗಣೇಶ ಚತುರ್ಥಿ ಆಚರಣೆ



ನವದೆಹಲಿಯ ಆರ್.ಕೆ. ಪುರಂ, ಸೆಕ್ಟರ್ 6ರ ಎರಡನೇ ಹಂತದಲ್ಲಿರುವ ಕರ್ನಾಟಕ ಭವನ ಸರ್ಕಾರಿ ವಸತಿ ಗೃಹ ಸಮುಚ್ಚಯ ಪರಿಸರದಲ್ಲಿ, ಅಲ್ಲಿನ ಕ್ಷೇಮಾಭಿವೃದ್ಧಿ ಸಮಿತಿಯ ವತಿಯಿಂದ 20.09.2023 ರಂದು ಗಣೇಶ ಚತುರ್ಥಿ ಹಬ್ಬವನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಹೂವಿನಿಂದ ಹಾಗೂ ವಿದ್ಯುತ್ ದೀಪಗಳಿಂದ ಸುಂದರವಾಗಿ ಅಲಂಕೃತಗೊಂಡ ವಿಘ್ನ ನಿವಾರಕ ಗಣಪತಿಗೆ ಪುರೋಹಿತರಿಂದ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕ್ಷೇಮಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಶ್ರೀ ಹೆಚ್. ಆಂಜನೇಯ, ಗೌರವಾಧ್ಯಕ್ಷರು ಶ್ರೀ ಎಲ್. ದಿವಾಕರ್, ಉಪಾಧ್ಯಕ್ಷರುಗಳಾದ ಶ್ರೀ ಎಸ್. ಕುಮಾರ್ ಮತ್ತು ಶ್ರೀಮತಿ ಹೆಚ್.ವಿ. ಪ್ರಮೀಳಾ, ಕಾರ್ಯದರ್ಶಿ ಶ್ರೀಮತಿ ವೀಣಾ ಜಗದೀಶ್, ಜಂಟಿ ಕಾರ್ಯದರ್ಶಿ ಶ್ರೀ ಕೆ. ರವಿ, ಖಜಾಂಚಿ ಶ್ರೀ ಎಸ್. ರಮೇಶ, ಸಲಹೆಗಾರರಾದ ಶ್ರೀ ಯು.ಜಿ. ಸುಧೀರ್ ಕುಮಾರ್ ಮತ್ತು ಕರ್ನಾಟಕ ಭವನ ಎಲ್ಲಾ ಉದ್ಯೋಗಿಗಳ ಕುಟುಂಬದ ಸದಸ್ಯರು ವಿನಾಯಕನ ದರ್ಶನ ಪಡೆದು ಪುನೀತರಾದರು.

ಈ ಸಂದರ್ಭದಲ್ಲಿ ನವದೆಹಲಿ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ಇಂಕೊಂಗ್ಲಾ ಜಮೀರ್, ಭಾ.ಆ.ಸೇ. ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು (ಸಮನ್ವಯ) ಕರ್ನಾಟಕ ಭವನ–ಶ್ರೀಮತಿ ವಂದನಾ ಗುರುನಾನಿ, ಭಾ.ಆ.ಸೇ. ಮತ್ತು ಆರ್.ಕೆ.ಪುರಂ ವಿಧಾನ ಸಭಾ ಕ್ಷೇತ್ರದ ಶಾಸಕಿ ಶ್ರೀಮತಿ ಪ್ರಮೀಳಾ ಟೋಕಸ್, ಕಾರ್ಪೊರೇಟರ್ ಶ್ರೀ ಧರ್ಮವೀರ್ ಸಿಂಗ್ ಹಾಗೂ ಮಾಜಿ ಶಾಸಕರಾದ ಶ್ರೀ ಅನಿಲ್ ಶರ್ಮರವರು ಪೂಜೆಯಲ್ಲಿ ಭಾಗವಹಿಸಿ ಗಣೇಶನ ದರ್ಶನ ಪಡೆದದ್ದು ವಿಶೇಷವಾಗಿತ್ತು. ಅದೇ ದಿನ ಸಂಜೆ 6 ಗಂಟೆಗೆ ಸಾಂಸ್ಕೃತಿಕ ಮನರಂಜನೆಯನ್ನು ಸುಮಧುರ ಹಾಡುಗಳ ಮೂಲಕ ಎಸ್ ಕುಮಾರ್ ಮತ್ತು ತಂಡದವರಿಂದ ಆಯೋಜಿಸಲಾಗಿತ್ತು. ರಾತ್ರಿ ಒಂಬತ್ತು ಗಂಟೆಗೆ ಅರ್.ಕೆ.ಪುರಂ, ಎರಡನೇ ಹಂತದ ವಠಾರದಲ್ಲೇ ವಿಜೃಂಭಣೆಯಿಂದ ಶ್ರೀ ಸಿದ್ಧಿ ವಿನಾಯಕನ ವಿಸರ್ಜನೆಯನ್ನು ನೆರವೇರಿಸಲಾಯಿತು. ಸಂಗೀತ ಕಾರ್ಯಕ್ರಮ ನೀಡಿದ ಎಲ್ಲಾ ಕಲಾವಿದರಿಗೂ, ಮಕ್ಕಳಿಗೂ, ಕಾರ್ಯಕ್ರಮಗಳನ್ನು ನಿರ್ವಿಘ್ನವಾಗಿ ನಡೆಯಲು ಹಗಲು ರಾತ್ರಿ ಕೆಲಸ ನಿರ್ವಹಿಸಿದವರನ್ನು ಸನ್ಮಾನಿಸಿ ವಂದನೆಗಳೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು. ಗಣೇಶ ಪೂಜೆಯಲ್ಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಹಕರಿಸಿದ ಎಲ್ಲಾ ಸದಸ್ಯರು ಮತ್ತು ಕುಟುಂಬದವರಿಗೆ ಕರ್ನಾಟಕ ಭವನದ ಸರ್ಕಾರಿ ವಸತಿಗೃಹ ಕ್ಷೇಮಾಭಿವೃದ್ಧಿ ಸಮಿತಿಯ ಪರವಾಗಿ ಧನ್ಯವಾದಗಳು.

*ಶ್ರೀ ಎಸ್. ರಮೇಶ*



ಶ್ರೀಗಣೇಶ ಮಿತ್ರ ಮಂಡಳಿಯಿಂದ 'ಷರೀಫರ ಗಣಪ' 35ನೇ ವರ್ಷದ ಗಣೇಶ ಚತುರ್ಥಿಯನ್ನು ದೆಹಲಿ ಕರ್ನಾಟಕ ಸಂಘದ ಬಳಿ ಮಿತ್ರ ಮಂಡಳಿ ಸದಸ್ಯರು ಆಚರಿಸಲಾದ ಸಂದರ್ಭ


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
PRINTING PRESS

A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyap 2010@gmail.com /
hpgp2 06@gmail.com

Delhi Karnataka Sangha Abhimata
Oct -2023, Vol. No.34, Issue No. 1, Price Rs.1/-
RNI Regn. No. 53405/91, DL-SW-01/4016/22-24
Date of Publication : Oct 8th / 9th, Posting Date : 10th / 11th, Total Pages-28 Monthly-Language Kannada, POSTED AT RMS DELHI-110006
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

**ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಭಿನಂದಿಸಿದ ದೃಶ್ಯ ಸಂಭ್ರಮ**



